ಐಕ್ಯರಂಗ

ಸಂಪುಟ 19 ಸಂಚಿಕೆ 37–38

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸೆಪ್ಟೆಂಬರ್ 15–21, 1997

ಬೆಲೆ ರೂ. 2.00

ಈಗ ಸಮ್ಮಿಶ್ರ ಸರ್ಕಾರಗಳ ವಿರುದ್ಧ ಕಾಂಗ್ರೆಸ್ ಅಪಲಾಪ

ಕಾಂಗ್ರೆಸ್ ಅಧ್ಯಕ್ಷರು ಇತ್ತೀಚಿನ ದಿನಗಳಲ್ಲಿ ಸಮ್ಮಿಶ್ರ ಸರಕಾರಗಳ ವಿರುದ್ಧ ಧಾಳಿ ನಡೆಸುತ್ತಿದ್ದಾರೆ. ಏಕಪಕ್ಷ ಆಳ್ವಿಕೆಯೇ ಇರಬೇಕು ಎಂದು ಪ್ರತಿಪಾದಿಸುತ್ತಿದ್ದಾರೆ. ಇದು ಕೇವಲ ಬಿಜೆಪಿಗೆ ಸಹಾಯ ಮಾಡುವಂತಹ ನಿಲುವು ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ಹೇಳಿದ್ದಾರೆ. ಪಕ್ಷದ ಕೇಂದ್ರ ಸಮಿತಿಯ ನಾಲ್ಕು ದಿನಗಳ ಸಭೆಯ ನಂತರ ಒಂದು ಕಿಕ್ಕಿರಿದ ಪತ್ರಿಕಾ ಗೋಷ್ಠಿಯನ್ನುದ್ದೇಶಿಸಿ ಮಾತನಾಡುತ್ತಾ ಅವರು 'ಕಾಂಗ್ರೆಸ್ ಪಕ್ಷ ಈಗ ಸಮ್ಮಿಶ್ರ ಸರಕಾರಗಳು ಕೆಲಸ ಮಾಡಲಾರವು ಎನ್ನುತ್ತಿದೆ. ಇದರರ್ಥ ಅವರು ಅಥವಾ ಬಿಜೆಪಿ ಮಾತ್ರ ಅಧಿಕಾರಕ್ಕೆ ಬರಬೇಕು ಎಂದು. ಅಂದರೆ ಕಾಂಗ್ರೆಸ್ ತನ್ನ ಸಾಮೂಹಿಕ ನೆಲೆಯನ್ನು ಗಮನಾರ್ಹವಾಗಿ ಕಳೆದುಕೊಂಡಿರುವುದರಿಂದ ಇದು ಬಿಜೆಪಿಗೆ ಮಾತ್ರ ನೆರವಾಗಬಲ್ಲದು. ಕಾಂಗ್ರೆಸ್ ಸಂಯುಕ್ತ ರಂಗದ ಮೇಲೆ ಧಾಳಿ ಮಾಡುತ್ತಾ ಆ ಪ್ರಕ್ರಿಯೆಯಲ್ಲಿ ಬಿಜೆಪಿಗೆ ನೆರವಾಗುತ್ತಿದೆ" ಎಂದು ಸುರ್ಜಿತ್ ಆಪಾದಿಸಿದ್ದಾರೆ.

ಆಗಸ್ಟ್ 29 ರಿಂದ ಸೆಪ್ಟೆಂಬರ್ 1 ರ ವರೆಗೆ ನಡೆದ ಸಿಪಿಐ(ಎಂ) ಕೇಂದ್ರ ಸಮಿತಿ ಸಭೆ ರಾಷ್ಟ್ರೀಯ ರಾಜಕೀಯ ಸನ್ನಿವೇಶದ ಪರಾಮರ್ಶೆ ನಡೆಸುತ್ತಾ, 25 ರಾಜ್ಯಗಳ ಪೈಕಿ ಕೇವಲ 6 ರಾಜ್ಯಗಳಲ್ಲಿ ಸರಕಾರ ನಡೆಸುತ್ತಿರುವ ಕಾಂಗ್ರೆಸ್ ಕೇಂದ್ರದಲ್ಲಿ ಒಂದು ಸಮ್ಮಿಶ್ರ ಸರಕಾರ ಕಾರ್ಯಸಾಧ್ಯವಲ್ಲ ಎಂದು ಅಪಲಾಪ ನಡೆಸಿದೆ ಎಂದು ಗೇಲಿ ಮಾಡಿದ್ದಾರೆ. ಕಾಂಗ್ರೆಸ್ ಏಕಪಕ್ಷ ಆಳ್ವಿಕೆ ನಡೆಸುವ ತನ್ನ ಈಡೇರಿಸಿಕೊಳ್ಳಲಾಗದ ಆಸೆಯನ್ನು ಬಿಟ್ಟು ತನ್ನ ಒಳ ಪರಿಸ್ಥಿತಿಯನ್ನು ನೆಟ್ಟಗೆ ಮಾಡುವತ್ತ ಗಮನ ಹರಿಸುವುದು ಒಳ್ಳೆಯದು ಎಂದು ಕೇಂದ್ರ ಸಮಿತಿಯ ಸಭೆಯ ನಂತರ ಹೊರಡಿಸಿದ ಪತ್ರಿಕಾ ಹೇಳಿಕೆಯಲ್ಲಿ ಅಭಿಪ್ರಾಯ ಪಡಲಾಗಿದೆ.

ಬಿಜೆಪಿಯ ಪೀಕಲಾಟ

ಅತ್ತ ಕಾಂಗ್ರೆಸ್ ಪಕ್ಷ ಸಮ್ಮಿಶ್ರ ಸರಕಾರಗಳ ವಿರುದ್ಧ ಹರಿಹಾಯುತ್ತಿದ್ದರೆ ಇತ್ತ ಬಿಜೆಪಿ ಅಧಿಕಾರ ಗಿಟ್ಟಿಸಲು ಒಂದು ಸಮ್ಮಿಶ್ರ ರಂಗ ಕಟ್ಟುವುದೇ ವಿವೇಕದ ದಾರಿ ಎಂದು ಕಂಡುಕೊಂಡಿದೆ ಎಂದಿರುವ ಸಿಪಿಐ(ಎಂ) ಕೇಂದ್ರ ಸಮಿತಿ ಬಿಜೆಪಿಯ ಸ್ಥಿತಿಯ ಬಗ್ಗೆ ವಿಶ್ಲೇಷಣೆ ಮಾಡುತ್ತಾ "ಬಿಜೆಪಿ ಈಗ ಎಂತಹ ಘಟ್ಟ ತಲುಪಿದೆಯೆಂದರೆ ತಾನು ಕಾಂಗ್ರೆಸ್‌ಗೆ ಏಕಮಾತ್ರ ಪರ್ಯಾಯ ಎಂಬ ಭಾವನೆಯನ್ನು ಮಾರಲು ಅದಕ್ಕೆ ಈಗ ಸಾಧ್ಯವಾಗುತ್ತಿಲ್ಲ. ಇತ್ತೀಚಿನ ಅವಧಿಯಲ್ಲಿ ಅದು ಕೂಡಾ ಗುಂಪುಗಾರಿಕೆ ಮತ್ತು ಮುಖಂಡತ್ವದಲ್ಲಿನ ಬಂಡಾಯ ಇತ್ಯಾದಿ ಕಾಂಗ್ರೆಸ್ಸನ್ನು ಬಾಧಿಸುತ್ತಿರುವ ದುರ್ಗುಣಗಳನ್ನೇ ಪ್ರದರ್ಶಿಸುತ್ತಿದೆ. ದಿಲ್ಲಿಯಲ್ಲಿ ಮದನ್‌ಲಾಲ್ ಖುರಾನಾ ಪ್ರಕರಣ, ಗುಜರಾತಿನಲ್ಲಿ ವಾಘೇಲಾ ಸರಕಾರಕ್ಕೆ ಪರಿಣಾಮಕಾರಿ ಸವಾಲು ಹಾಕುವುದರಲ್ಲಿ ಅವರ ವಿಫಲತೆ ಹಾಗೂ ಉತ್ತರ ಪ್ರದೇಶದ ಬಿ.ಎಸ್.ಪಿ. ಯೊಡನೆ ಹೊಂದಿರುವ ಮೈತ್ರಿಯಲ್ಲಿನ ಅತಂತ್ರ ಪರಿಸ್ಥಿತಿ ಇವನ್ನೆಲ್ಲಾ ಎದುರಿಸಿ ನಿಲ್ಲುವುದು ಅದಕ್ಕೆ ಸುಲಭಸಾಧ್ಯವಾಗಿಲ್ಲ" ಎಂದು ಅಭಿಪ್ರಾಯ ಪಟ್ಟಿದೆ.

ಪ್ರಾದೇಶಿಕ ಪಕ್ಷಗಳನ್ನು, ಗುಂಪುಗಳನ್ನು ಒಲಿಸಿಕೊಳ್ಳುವಲ್ಲಿ ಬಿಜೆಪಿ ತೋರುತ್ತಿರುವ ತತ್ತರತೆ ತಾನೇ ಏಕೈಕ ಪರ್ಯಾಯ ಎಂಬ ತನ್ನ ಹಿಂದಿನ ಘೋಷಣೆಯನ್ನು ಅದು ಕೈಬಿಟ್ಟಿದೆಯೆಂಬುದನ್ನು ದೃಢಗೊಳಿಸಿದೆ.

ಅಲ್ಲದೆ ಎಲ್ಲೆಲ್ಲಿ ಬಿಜೆಪಿ ರಾಜ್ಯ

ಪುಟ 2 ನೋಡಿ

"ಸಾಮೂಹಿಕ ಚಳುವಳಿಯನ್ನು ತೀವ್ರಗೊಳಿಸಿ"

ಸಿಪಿಐ(ಎಂ) ರಾಜ್ಯ ಸಮಿತಿ ಕರೆ

ಆಹಾರ ಧಾನ್ಯ, ಪೆಟ್ರೋಲ್, ಅಡಿಗೆ ಅನಿಲಗಳಂತ ಅತ್ಯಾವಶ್ಯಕ ವಸ್ತುಗಳ ಬೆಲೆಯೇರಿಕೆಯ ವಿರುದ್ಧ ಹೋರಾಟ ಮುಂದುವರಿಸಬೇಕೆಂದೂ, ಜಾತಿ ಜಾತಿಗಳ ಮಧ್ಯೆ ಕ್ಷುಲ್ಲಕ ಕಾರಣಗಳಿಗಾಗಿ ಉದ್ಭವಿಸುತ್ತಿರುವ ಸಂಘರ್ಷವನ್ನು ತಪ್ಪಿಸಲು, ದಲಿತರ ನಿಜವಾದ ಸಮಸ್ಯೆಗಳತ್ತ ಗಮನಹರಿಸಿ ಅವುಗಳ ಪರಿಹಾರಕ್ಕಾಗಿ ಸಿಪಿಐ(ಎಂ) ಪಕ್ಷದ ಘಟಕಗಳು ಹೆಚ್ಚು ಮುತುವರ್ಜಿ ವಹಿಸಿ ದಲಿತ ಮತ್ತು ದಲಿತೇತರ ಜನರ ಮಧ್ಯೆ ಪ್ರೇಮ ಸೌಹಾರ್ದತೆ ಮೂಡಿಸಿ ಅವರನ್ನೆಲ್ಲಾ ಹೊಸ ಸಮಾಜ ನಿರ್ಮಾಣದತ್ತ ಕೊಂಡೊಯ್ಯಲಿಕ್ಕೆ ಶ್ರಮಿಸಬೇಕೆಂದೂ ದಿನಾಂಕ 8, 9, ಸೆಪ್ಟೆಂಬರ್ 97 ರಂದು ಎನ್.ಕೆ.ಉಪಾಧ್ಯಾಯರ ಅಧ್ಯಕ್ಷತೆಯಲ್ಲಿ ನಡೆದ ಸಿಪಿಐ(ಎಂ) ಪಕ್ಷದ ಕರ್ನಾಟಕ ರಾಜ್ಯ ಸಮಿತಿ ತನ್ನ ರಾಜಕೀಯ ನಿರ್ಣಯದಲ್ಲಿ ಕರೆ ಕೊಟ್ಟಿದೆ.

ಪುಟ 2 ನೋಡಿ

ಬಾಬ್ರಿ ಮಸೀದಿ ಧ್ವಂಸದ ಬಗ್ಗೆ ವಿಶೇಷ ನ್ಯಾಯಾಲಯದ ನಿರ್ಣಯ

ಆರ್.ಎಸ್.ಎಸ್.-ಬಿಜೆಪಿಯ ಹೇಯ ಪಿತೂರಿ ಸಾಬೀತು

ಲಕ್ನೌನ ವಿಶೇಷ ನ್ಯಾಯಾಲಯ 'ಡಿಸೆಂಬರ್ 6, 1992 ರಂದು ಅಯೋಧ್ಯೆಯಲ್ಲಿ ರಾಮಜನ್ಮಭೂಮಿ- ಬಾಬ್ರಿ ಮಸೀದಿ ಕಟ್ಟಡವನ್ನು ಧ್ವಂಸ ಮಾಡುವ ಪಿತೂರಿಗಳಲ್ಲಿ" ಆರ್.ಎಸ್. ಎಸ್ - ಬಿಜೆಪಿ-ವಿಹೆಚ್‌ಪಿ ಕೂಟದ 49 ಉನ್ನತ ಮುಖಂಡರ ಮೇಲೆ ಆಪಾದನೆ ಗಳನ್ನು ರೂಪಿಸಲು ನಿರ್ಧರಿಸಿರುವುದನ್ನು ಸಿಪಿಐ(ಎಂ) ಸ್ವಾಗತಿಸಿದೆ. ರಾಜಕೀಯ ಉದ್ದೇಶಗಳಿಗಾಗಿ ಧರ್ಮದ ಕ್ರಿಮಿನಲ್ ದುರುಪಯೋಗವನ್ನು ನಡೆಸಿದ ಅಪರಾಧ ಎಸಗಿದ ಎಲ್ಲರಿಗೂ ತ್ವರಿತ ವಿಚಾರಣೆ ನಡೆಸಿ ಶಿಕ್ಷೆಯಾಗಬೇಕು ಎಂದು ಸಿಪಿಐ(ಎಂ) ಕರೆ ನೀಡಿದೆ.

ಪಕ್ಷದ ಕೇಂದ್ರ ಸಮಿತಿಯ ಪತ್ರಿಕೆ 'ಪೀಪಲ್ಸ್ ಡೆಮಾಕ್ರಸಿ' ಯ ಸಂಪಾದಕೀಯ ಈ ಬಗ್ಗೆ ಟಿಪ್ಪಣಿ ಮಾಡುತ್ತಾ "ದೇಶ ಮತ್ತು ಜನಗಳ ಸಂದೇಹ ಈಗ ನಿಜವಾಗಿದೆ. ಕರಸೇವಕರಲ್ಲಿ ಹುದುಗಿದ್ದ ಕ್ರೋಧ ಭುಗಿಲೆದ್ದುದರಿಂದ ಈ ಧ್ವಂಸ ನಡೆಯಿತು ಎಂಬ ಕಾವಿಪಡೆಗಳ ಸುಳ್ಳು ಈಗ ಬಯಲಾಗಿದೆ" ಎಂದಿದೆ.

ಸಿಬಿಐ ಸಂಗ್ರಹಿಸಿದ ಸಾಕ್ಷ್ಯಗಳ ಆಧಾರದಲ್ಲಿ ವಿಶೇಷ ನ್ಯಾಯಾಲಯ ವಿವಾದಿತ ಕಟ್ಟಡವನ್ನು ಧ್ವಂಸ ಮಾಡುವ ಕ್ರಿಮಿನಲ್ ಪಿತೂರಿ 1990 ರಲ್ಲಿ ರೂಪಿಸಿ ಡಿಸೆಂಬರ್ 6, 1992 ರಂದು ಪೂರ್ಣಾಹುತಿ ಪಡೆಯಿತು ಎಂದಿದೆ. ಬಾಬ್ರಿ ಮಸೀದಿ ಯನ್ನು ಒಂದು ಕ್ರಿಮಿನಲ್ ಪಿತೂರಿಯಡಿ ಯೋಜಿತ ರೀತಿಯಲ್ಲಿ ನಡೆಸಲಾಯಿತು. ಈ ಕಾರಣದಿಂದಾಗಿ ಆಪಾದಿತರ ವಿರುದ್ಧ ಕಾನೂನಿನ ಪ್ರಕಾರ ವಿಚಾರಣೆ ನಡೆಸಲು ಆಪಾದನೆಗಳನ್ನು ರೂಪಿಸಲು ಸಾಕಷ್ಟು ಆಧಾರಗಳಿವೆ'' ಎಂದೂ ವಿಶೇಷ ನ್ಯಾಯಾಲಯ ಒತ್ತಿ ಹೇಳಿದೆ.

"ವಿಳಂಬವಾಗಿ ಬಂದರೂ ಈ ಟಿಪ್ಪಣಿಗಳು ಕಾವಿ ಪಡೆ ತಮ್ಮ ರಾಜಕೀಯ ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳಲು ಹೇಯ ಪಿತೂರಿಗಳನ್ನು ನಡೆಸಿತು ಎಂಬುದಂತೂ ಸಾಬೀತಾಗಿದೆ. ಈ ಪ್ರಕ್ರಿಯೆಯಲ್ಲಿ ಸಾವಿರಾರು ಮುಗ್ಧ ಜೀವಗಳನ್ನು ಧ್ವಂಸದ ನಂತರ ಸೃಷ್ಟಿಸಿದ ಕೋಮುಗಲಭೆಗಳಲ್ಲಿ ಅವರು ಬಲಿ ತೆಗೆದುಕೊಂಡರು" ಎಂದು ಸಿಪಿಐ(ಎಂ) ಹೇಳಿದೆ.

ಆಗಿನ ಫೈಜಾಬಾದ್ ಜಿಲ್ಲಾ ಮ್ಯಾಜಿಸ್ಟ್ರೇಟ್ ಮತ್ತು ಜಿಲ್ಲಾ ಪೋಲೀಸ್ ಮುಖ್ಯಸ್ಥರ ಮೇಲೆ ಪಿತೂರಿ ಮತ್ತು ಕರ್ತವ್ಯಲೋಪದ ಆಪಾದನೆ ಹಾಕುವ ಬಗ್ಗೆ ಹೇಳುತ್ತಾ "ಆಗ ಬಿಜೆಪಿ ಮುಖ್ಯಮಂತ್ರಿ ಕಲ್ಯಾಣ್ ಸಿಂಗ್ ನೇತೃತ್ವದ ರಾಜ್ಯ ಸರಕಾರ ಬಾಬ್ರಿ ಮಸೀದಿಯನ್ನು ಧ್ವಂಸ ಮಾಡುವ ಕಾರ್ಯಾಚರಣೆಯಲ್ಲಿ ಸಕ್ರಿಯವಾಗಿ ಶಾಮೀಲಾಯಿತು ಎಂಬುದೀಗ ಸ್ಪಷ್ಟವಾಗಿದೆ. ಆಗಿದ್ದ ಫೈಜಾಬಾದ್‌ನ ಪೋಲೀಸ್ ಮುಖ್ಯಸ್ಥ ಶ್ರೀಯುತ ಡಿ.ಬಿ.ರಾಯ್ ಈಗ ಒಬ್ಬ ಬಿಜೆಪಿ ಸಂಸತ್ ಸದಸ್ಯ ಎಂಬ ಸಂಗತಿಯಿಂದಲೇ ಆ

ಪುಟ 2 ನೋಡಿ

ಮತ್ತೊಮ್ಮೆ ಪೆಟ್ರೋಲಿಯಂ ಬೆಲೆಯೇರಿಕೆಯ ಜನವಿರೋಧಿ ಕ್ರಮವನ್ನು ಪ್ರತಿಭಟಿಸಿ

– ಸಿಪಿಐ(ಎಂ) ಕರೆ

ಪೆಟ್ರೋಲ್, ಡೀಸೆಲ್, ಅಡುಗೆ ಅನಿಲದ ಬೆಲೆಗಳನ್ನು ಕೇಂದ್ರ ಸರ್ಕಾರ ಏರಿಸಿರುವುದನ್ನು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಬಲವಾಗಿ ಖಂಡಿಸಿದೆ. ಡೀಸೆಲ್ ಬೆಲೆಯಲ್ಲಿ 26% ದಷ್ಟು ತೀವ್ರ ಏರಿಕೆಯ ಪರಿಣಾಮ ಎಲ್ಲೆಡೆ ಹರಡಿ ನಮ್ಮ ಕೋಟಿಗಟ್ಟಲೆ ದೇಶಬಾಂಧವರ ಬದುಕಿನ ಮೇಲೆ ಇನ್ನಷ್ಟು ಪ್ರತಿಕೂಲ ಪರಿಣಾಮ ಬೀರಲಿದೆ. ಸಾರಿಗೆ ಮತ್ತು ಇತರ ಎಲ್ಲಾ ದೈನಂದಿನ ಬಳಕೆಯ ಸರಕುಗಳ ಬೆಲೆ ಏರಲಿದೆ ಎಂದು ಪೊಲಿಟ್ ಬ್ಯೂರೋ ಆತಂಕ ವ್ಯಕ್ತಪಡಿಸಿದೆ.

ಸಂಯುಕ್ತ ರಂಗ ಸರಕಾರ ತೈಲನಿಧಿ ಖಾತೆಯ ಕೊರತೆಯನ್ನು ತುಂಬಿಸಲು ಸಿಪಿಐ(ಎಂ) ಮುಂದಿಟ್ಟ ವಿವಿಧ ಪರ್ಯಾಯ ಕ್ರಮಗಳನ್ನು ಅನುಷ್ಠಾನಕ್ಕೆ ತರಲು ನಿರ್ಧರಿಸುವ ಬದಲು ಅದರ ಹೊರೆಯನ್ನು ಜನ ಸಾಮಾನ್ಯರ ತಲೆಯ ಮೇಲೆಯೇ ಹೇರಲು ನಿರ್ಧರಿಸಿ ರುವುದು ದುರದೃಷ್ಟಕರ ಎಂದು ಸಿಪಿಐ(ಎಂ) ಹೇಳಿದೆ. ಈ ಬೆಲೆಯೇರಿಕೆಯಿಂದ 6000 ಕೋಟಿ ರೂ. ರೆವಿನ್ಯೂ ಸಂಗ್ರಹಿಸುವ ನಿರೀಕ್ಷೆಯಿದೆಯಂತೆ. ಇದರ ಬದಲು ಕೆಲವು ಆದ್ಯತೆಯಿಲ್ಲದ ಉದ್ದಿಮೆಗಳು ಬಳಸುವ ನೈಸರ್ಗಿಕ ಅನಿಲದ ಬೆಲೆಯನ್ನು ಅಡುಗೆ ಅನಿಲದ ಬೆಲೆಯ ಮಟ್ಟಕ್ಕೆ ಏರಿಸಿದ್ದರೆ, ಇದೊಂದೇ ಕ್ರಮದಿಂದ 6308 ಕೋಟಿ ರೂ. ಸಂಗ್ರಹ ಸಾಧ್ಯವಿತ್ತು. ಈ ಹಿನ್ನೆಲೆಯಲ್ಲಿ ಈ ಬೆಲೆಯೇರಿಕೆ ಜನ-ವಿರೋಧಿ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ.

ತೈಲ ನಿಧಿ ಖಾತೆಯಲ್ಲಿ ಉಂಟಾದ ಈ ಹಿಂದಿನ ಕೊರತೆ ಹಣಕಾಸು ಇಲಾಖೆಯ ಕೆಲವು ಕ್ರಮಗಳಿಂದಾಗಿ ಉಂಟಾಗಿರುವುದರಿಂದ ಅದನ್ನು ತುಂಬಿಸಲು ಜನಗಳ ಮೇಲೆ ಹೊರೆ ಹಾಕುವ ಬದಲು ಹಣಕಾಸು ಇಲಾಖೆ ಅದನ್ನು ಹೊರಬೇಕು ಎಂದು ಸಿಪಿಐ(ಎಂ) ಪ್ರತಿಪಾದಿಸಿತ್ತು. ಸರಕಾರ ಈಗ ಪೆಟ್ರೋಲಿಯಂ ಕಂಪನಿಗಳಿಗೆ 18200 ಕೋಟಿ ರೂ.ಗಳ ಸೆಕ್ಯೂರಿಟಿಗಳು ಹಾಗೂ ಬಾಂಡುಗಳನ್ನು ನೀಡಲು ನಿರ್ಧರಿಸುವ ಮೂಲಕ ಸಿಪಿಐ(ಎಂ) ನ ಈ ನಿಲುವನ್ನು ಒಪ್ಪಿದಂತಾ ಗಿದೆ. ಆದರೆ ಇದು ಒಂದು ಸಾಲದ ರೂಪದಲ್ಲಿ ಇರುವುದರಿಂದ ಇದರ ಮೇಲೆ ಬಡ್ಡಿ ಇತ್ಯಾದಿಗಳಿಗೆಂದು 1800 ಕೋಟಿ ರೂ.ಗಳಷ್ಟು ಪ್ರತಿವರ್ಷ ತೈಲನಿಧಿಯೇ ಭರಿಸ ಬೇಕಾಗುತ್ತದೆ. ಅಂದರೆ ಈ ಹೊರೆ ಬಳಕೆದಾರರ ಮೇಲೆಯೇ ಬೀಳುತ್ತದೆ.

ಆಡಳಿತಾತ್ಮಕ ಬೆಲೆ ನಿರ್ಧಾರ ವ್ಯವಸ್ಥೆ (ಎಪಿಎಂ)ಯನ್ನು ಕಳಚಿ ಹಾಕುವುದು, ಭಾರತೀಯ ತೈಲ ಕಂಪನಿಗಳನ್ನು ತೆರೆಯುವುದು ಇತ್ಯಾದಿ ಕ್ರಮ ಗಳಂತೂ ವಿನಾಶಕಾರಿ ಪರಿಣಾಮ ಬೀರುವಂತಹವು ಎಂದು ಪೊಲಿಟ್ ಬ್ಯೂರೋ ಹೇಳಿದೆ. APM ವ್ಯವಸ್ಥೆ ಯನ್ನು ಕಳಚಿಹಾಕಿ ತೈಲ ಬೆಲೆಗಳನ್ನು ಅಂತರ್‍ರಾಷ್ಟ್ರೀಯ ಬೆಲೆಗಳಿಗೆ ನೇರವಾಗಿ ತಳುಕು ಹಾಕುವ ಕ್ರಮವನ್ನು ಜಾರಿಗೆ ತರುವ ಮೊದಲು ಸರಕಾರ ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ಹಾಕಿರುವ ವಿಪರೀತ ಅಬಕಾರಿ ಹಾಗೂ ಸೀಮಾ ಸುಂಕಗಳನ್ನು ತರ್ಕಬದ್ಧಗೊಳಿಸ ಬೇಕಾಗುತ್ತದೆ. ಈ ವರ್ಷ ಸರಕಾರ ಪೆಟ್ರೋಲಿಯಂ ವಲಯದಿಂದ 20000 ಕೋಟಿ ರೂ.ಗಳನ್ನು ಎತ್ತುವ ಗುರಿಯಿಟ್ಟುಕೊಂಡಿದೆ. ಈ ರೀತಿ ಸರಕಾರ ತನ್ನ ಆದಾಯ ಹೆಚ್ಚಿಸಲು ಪೆಟ್ರೋಲಿಯಂ ವಲಯವನ್ನು ಹಿಂಡುತ್ತಲೇ ಇದ್ದರೆ ಮತ್ತೆ ಮುಂಬರುವ ವರ್ಷಗಳಲ್ಲಿ ಕೊರತೆಯ ಪ್ರಮಾಣ ಹೆಚ್ಚುತ್ತಲೇ ಹೋಗುತ್ತದೆ. ಈ ತೆರಿಗೆಗಳಿಲ್ಲದಿದ್ದರೆ ತೈಲನಿಧಿ ಖಾತೆಯಲ್ಲಿ ಕೊರತೆಯೇ ಇರುವುದಿಲ್ಲ ಎಂಬುದನ್ನು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಮತ್ತೊಮ್ಮೆ ನೆನಪಿಸಿದೆ.

ಇದಲ್ಲದೆ ಈಗ ಮಾಡಿರುವ ಬೆಲೆಯೇರಿಕೆ ಜನಗಳನ್ನು ಸುಲಿದು ಹಣಕಾಸು ಇಲಾಖೆ ಅದರ ಅನಗತ್ಯ ಪ್ರಯೋಜನ ಪಡೆಯದಂತೆ ಸರಕಾರ ನೋಡಿಕೊಳ್ಳಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಹೇಳಿದೆ. ಹೀಗೆ ಅದು ಎಚ್ಚರಿಸಲು ಕಾರಣ ಕಳೆದ ವರ್ಷ ಈ ರೀತಿಯ ಬೆಲೆಯೇರಿಕೆಯಿಂದ ಪಡೆದ 7000 ಕೋಟಿ ರೂಗಳಲ್ಲಿ 4200 ಕೋಟಿ ರೂಗಳನ್ನು ಹಣಕಾಸು ಇಲಾಖೆ ಸೀಮಾ ಮತ್ತು ಅಬಕಾರಿ ಸುಂಕಗಳ ರೂಪದಲ್ಲಿ ಕಿತ್ತುಕೊಂಡಿದೆ.

ಸಂಯುಕ್ತ ರಂಗ ಸರಕಾರ ಬಂದ ಮೇಲೆ ಇದು ಎರಡನೇ ಬಾರಿ ತಂದಿರುವ ಬೆಲೆಯೇರಿಕೆ. ಮತ್ತೆ ಇದು ಸರ್ವವ್ಯಾಪಿ ಹಣದುಬ್ಬರವನ್ನು ಹರಿಯಬಿಡುವುದಲ್ಲದೆ ಜನಗಳ ಮೇಲೆ ನೇರ ಹೊರೆ ಹಾಕುತ್ತಿದೆ ಎಂದಿರುವ ಸಿಪಿಐ (ಎಂ) ಪೊಲಿಟ್ ಬ್ಯೂರೋ ಈ ಜನ-ವಿರೋಧಿ ಬೆಲೆ ಏರಿಕೆಯ ವಿರುದ್ಧ ಪ್ರತಿಭಟನೆಗಳನ್ನು ಸಂಘಟಿಸಬೇಕು ಎಂದು ತನ್ನ ಎಲ್ಲಾ ಘಟಕಗಳಿಗೆ ಕರೆ ನೀಡಿದೆ. □

ಸೆಪ್ಟೆಂಬರ್ 2ರಂದು ದೇಶದ ಮೂಲೆ-ಮೂಲೆಗಳಿಂದ ಬಂದ ಸಾವಿರಾರು ಕಾರ್ಮಿಕರು ಸಂಸತ್ತಿನೆದುರು ಸರಕಾರದ ಪ್ರತಿಗಾಮಿ "ನೌಕರ ಪೆನ್ಷನ್ ಯೋಜನೆ" ಯನ್ನು ಹೇರುತ್ತಿರುವುದರ ವಿರುದ್ಧ ತಮ್ಮ ತೀವ್ರ ಕ್ರೋಧವನ್ನು ವ್ಯಕ್ತಪಡಿಸಿದರು. ತಮ್ಮ ಪ್ರತಿರೋಧವನ್ನು ತೀವ್ರಗೊಳಿಸಿ ಡಿಸೆಂಬರ್ 17ರಂದು ಅಖಿಲ ಭಾರತ ಮುಷ್ಕರ ನಡೆಸುವ ಎಚ್ಚರಿಕೆಯನ್ನೂ ಅವರು ಸರಕಾರಕ್ಕೆ ನೀಡಿದರು. ವಿವರಗಳಿಗೆ ಪುಟ 8 ನೋಡಿ



"ಸಾಮೂಹಿಕ ಚಳುವಳಿಯನ್ನು ತೀವ್ರಗೊಳಿಸಿ"

ಸಿಪಿಐ(ಎಂ)ರಾಜ್ಯ ಸಮಿತಿ ಕರೆ

ಹೊಸ ಜಿಲ್ಲೆಗಳು

ಜಿಲ್ಲೆಗಳ ಪುನರ್ವಿಂಗಡಣೆ ಮಾಡುವಾಗ ಎಲ್ಲ ರಾಜಕೀಯ ಪಕ್ಷಗಳ ಜೊತೆ ಸಮಾಲೋಚನೆ ಮಾಡಿ ಸರ್ವ ಸಮ್ಮತ ಅಭಿಪ್ರಾಯ ರೂಪಿಸಲಿಕ್ಕೆ ರಾಜ್ಯ ಸರಕಾರ ವಿಫಲಗೊಂಡಿರುವುದರಿಂದಲೇ ಹೊಸ ಜಿಲ್ಲೆ ಮತ್ತು ತಾಲ್ಲೂಕುಗಳಿಗಾಗಿ ಹಾಗೂ ಯಾವ ತಾಲ್ಲೂಕು ಯಾವ ಜಿಲ್ಲೆಗೆ ಸೇರಿಸಬೇಕೆಂಬ ವಿಚಾರದಲ್ಲಿ ಮೂಡಬಿದರೆ, ನರಗುಂದ, ಜಮುಖಂಡಿ, ಚೆನ್ನಗಿರಿ, ಹರಪನ ಹಳ್ಳಿ, ಸಿಂಧನೂರು, ಗೋಕಾಕ, ರಾಮದುರ್ಗ, ಸವದತ್ತಿ ಮೊದಲಾದ ಸ್ಥಳಗಳಲ್ಲಿ ಹಿಂಸಾತ್ಮಕ ಚಳುವಳಿ ನಡೆಯುತ್ತಿರುವುದನ್ನು ಕಾಣುತ್ತಿದ್ದೇವೆ. ಜನವಿರೋಧಿ ನೀತಿಗಳ ವಿರುದ್ಧ ಹೋರಾಟ ತೀವ್ರವಾಗಿ ಮೂಡಿ ಬರಬಹುದೆಂಬ ಭೀತಿಯಿಂದ ಬಂಡವಾಳ ಶಾಹಿ ಪಕ್ಷಗಳು ಹೊಸ ಜಿಲ್ಲೆಗಳ ನಿರ್ಮಾಣ ದತ್ತ ಈ ರೀತಿಯ ಗೊಂದಲ ಉಂಟುಮಾಡುವ ಪ್ರವೃತ್ತಿಗಿಳಿದಂತೆ ಕಂಡು ಬರುತ್ತದೆ.

ನಿರಪರಾಧಿಗಳ ಸಾವು-ನೋವು

ಈ ಮೂರು ತಿಂಗಳಲ್ಲಿ ದಲಿತರ ಮೇಲೆ ದೌರ್ಜನ್ಯ, ಪೋಲೀಸ್ ಗೋಳೀಬಾರಿನಿಂದ ನಿರಪರಾಧಿಗಳ ಸಾವು ಹೆಚ್ಚಾಗುತ್ತಿದೆ. ಮೈಸೂರು ಜಿಲ್ಲೆಯ ಉದಬೂರು, ಗುಲ್ಬರ್ಗ ಜಿಲ್ಲೆಯ ಶಹಾಪುರ, ಕೋಲಾರ ಜಿಲ್ಲೆಯ ಚಿಂತಾ ಮಣಿ, ಬಿಲ್ಲಾಂಡಹಳ್ಳಿ, ರಾಯಚೂರು ಜಿಲ್ಲೆಯ ಕುಷ್ಟಗಿ, ಕೊಪ್ಪಳ, ಸಿಂಧನೂರ ಮುಂತಾದೆಡೆಗಳಲ್ಲಿ ದಲಿತ, ಸವರ್ಣೀಯ, ಪೋಲೀಸರ ಮಧ್ಯೆ ಘರ್ಷಣೆಗಳಾಗಿ ಜೀವಕ್ಕೂ, ಆಸ್ತಿಗೂ ಅಪಾರ ಹಾನಿ ಉಂಟಾಗಿ ಈ ಜನ ವಿಭಾಗಗಳ ಮಧ್ಯೆ ದ್ವೇಷ ಹೆಚ್ಚಾಗುತ್ತಿದ್ದು ಸಮಾಜದಲ್ಲಿ ಶಾಂತಿ ಪಾಲನೆಗೆ ಮಾರಕವಾಗುತ್ತಿರುವುದನ್ನು ಕಾಣುತ್ತಿದೇವೆ. ಇಂಥ ಘಟನೆಗಳು ಉಂಟಾದಾಗ ಪಕ್ಷದ ಘಟಕಗಳು ಮಧ್ಯ ಪ್ರವೇಶಿಸಿ ಜಾತಿ ಸೌಹಾರ್ದತೆ ಕಾಪಾಡಲು ಇಂಥ ಘರ್ಷಣೆಗಳಿಗೆ ಕಾರಣೀಭೂತರಾದ ವರನ್ನು ಗುರುತಿಸಿ ಶಿಕ್ಷೆಗೊಳಪಡಿಸಲು ಮುಂದಾಗಬೇಕೆಂದು ರಾಜ್ಯ ಸಮಿತಿ ಆದೇಶಿಸಿದೆ.

ಜನ-ವಿರೋಧಿ ನಿಲುವು

ಇದೇ ಸಮಯದಲ್ಲಿ ಟೊಮಟೊ, ತೊಗರಿ, ಬಟಾಟೆಗಳ ಬೆಲೆ ಕುಸಿದು ಬೆಳೆಗಾರರಿಗೆ ಅನ್ಯಾಯವಾಗುತ್ತಿರುವಾಗಲೇ ರಾಜ್ಯ ಸರ್ಕಾರ ವಿದ್ಯುತ್, ಪೆಟ್ರೋಲ್, ಡೀಸೆಲ್, ಅಡಿಗೆ ಅನಿಲಗಳ ಬೆಲೆ ಹೆಚ್ಚಿಸಿ, ರೇಶನ್ ಅಂಗಡಿಗಳಲ್ಲಿ ವಿತರಿಸುತ್ತಿದ್ದ ಸಕ್ಕರೆ, ಅಕ್ಕಿ, ಗೋಧಿಯ ಬೆಲೆ ಹೆಚ್ಚಿಸಿದಷ್ಟೆ ಅಲ್ಲದೆ, ಕಾರ್ಡುದಾರರಿಗೆ ಅದು ಸಿಗದಂತೆ ಮಾಡಿ ಗೊಂದಲ ಉಂಟು ಮಾಡಿದೆ. ಪಡಿತರ ಅಂಗಡಿಗಳಲ್ಲಿ ಆಹಾರ ಧಾನ್ಯ ಸಿಗದಂತಾಗಿದೆ.

ಹಾಗೆಯೇ ರಸ್ತೆ ಸಾರಿಗೆಯನ್ನು ಸುಧಾರಿಸಿ ಜನರಿಗೆ ಅನುಕೂಲತೆ ಮಾಡಿಕೊಡದೆ, ಕೆ.ಎಸ್.ಆರ್.ಟಿ.ಸಿ. ಯನ್ನು ವಿಭಜಿಸಿ ಕಾರ್ಮಿಕರು ಅದನ್ನು ವಿರೋಧಿಸಿದಾಗ, ಎಸ್ಮಾ ಕಾಯಿದೆಯನು ಪ್ರಯೋಗಿಸಿ ಕಾರ್ಮಿಕ ಮುಖಂಡರನ್ನು ಬಂಧಿಸಿ ದೌರ್ಜನ್ಯ ನಡೆಸಲಾಯಿತು. ಬೆಂಗಳೂರಿನಲ್ಲಿ ಬಿಡಿಎ ಪ್ರದೇಶದಲ್ಲಿರುವ ಸುಬ್ರಮಣ್ಯ ನಗರದಲ್ಲಿ ಮನೆ ಕಟ್ಟಿಕೊಂಡಿದ್ದ ಬಡವರ ಮನೆಗಳನ್ನು ನಿರ್ದಾಕ್ಷಿಣ್ಯವಾಗಿ ಒಡೆದು ಹಾಕಿ ಸರಕಾರ ಬಡವರ ಮೇಲೆ ಅನ್ಯಾಯವೆಸಗಿದ್ದು ಅದರ ವಿರುದ್ಧ ಪ್ರತಿಭಟನೆ ನಡೆದಿದೆ.

ಜನತಾದಳ ಸರಕಾರದಲ್ಲಿ ಹಲವಾರು ಭ್ರಷ್ಟಾಚಾರ ಪ್ರಕರಣಗಳು ಬಯಲಾಗಿವೆ. ಇಂಥ ಭ್ರಷ್ಟಾಚಾರಗಳ ಕುರಿತು ತೀವ್ರ ಗಮನ ಹರಿಸಿ ಅವುಗಳ ಮೇಲೆ ಕ್ರಮ ಕೈಗೊಳ್ಳದೆ, ತಮ್ಮ ಆಡಳಿತ ವೈಖರಿಯ ಕುರಿತು ಜನಸಾಮಾನ್ಯರಲ್ಲಿ ಮತ್ತಷ್ಟು ಅಸಮಾಧಾನ, ಅತೃಪ್ತಿಯನ್ನು ಉಂಟು ಮಾಡುತ್ತಿದೆ. ಕಾಂಗ್ರೆಸ್ ಮತ್ತು ಬಿಜೆಪಿ ಅದರ ಲಾಭ ಪಡೆಯುವ ಪ್ರಯತ್ನದಲ್ಲಿವೆ.

ಸಿಪಿಐ(ಎಂ) ಪಕ್ಷ ಜುಲೈ ತಿಂಗಳಲ್ಲಿ ಕೇಂದ್ರ ಮತ್ತು ರಾಜ್ಯ ಸರಕಾರಗಳ ಜನ ವಿರೋಧಿ ನೀತಿಗಳ ವಿರುದ್ಧ ನಡೆಸಿದ ಹೋರಾಟ ಜನರ ಗಮನ ಸೆಳೆದಿದ್ದು, ಅದನ್ನು ಸರಿಯಾಗಿ ಅರ್ಥೈಸಿಕೊಂಡು, ಸಿಪಿಐ(ಎಂ) ತನ್ನ ಸ್ವತಂತ್ರ ನಿಲುವನ್ನು ಪ್ರಚಾರಗೊಳಿಸುತ್ತ ಸಾಮೂಹಿಕ ಚಳುವಳಿಗಳನ್ನು ಮುಂದುವರಿಸಿಕೊಂಡು ಹೋಗಬೇಕೆಂದೂ, ಪಕ್ಷದ ಪ್ರಭಾವವನ್ನು ವಿಸ್ತರಿಸಬೇಕೆಂದೂ ಸಮಾಜದಲ್ಲಿ ಜಾತಿ ಸೌಹಾರ್ದತೆ ಕಾಪಾಡಲು ಮುಂದಾಗಬೇಕೆಂದೂ ರಾಜ್ಯ ಸಮಿತಿ ಕರೆಕೊಟ್ಟಿದೆ.

ಕಾಂ॥ ಫರೂಕಿ ನಿಧನ

ಸಿಪಿಐ ನ ಹಿರಿಯ ಮುಖಂಡ ಕಾಂ॥ ಎಂ.ಫರೂಕಿಯವರು ಸೆಪ್ಟೆಂಬರ್ 3, 1997 ರಂದು ನಿಧನರಾಗಿದ್ದಾರೆ. ಅವರ ಹಠಾತ್ ನಿಧನದ ಬಗ್ಗೆ ಆಘಾತ ವ್ಯಕ್ತಪಡಿಸಿರುವ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್‌ರವರು ಸ್ವಾತಂತ್ರ್ಯ ಹೋರಾಟದಲ್ಲಿ ಕಮ್ಯುನಿಸ್ಟ್ ಆಂದೋಲನದಲ್ಲಿ ಅವರ ಪಾತ್ರವನ್ನು ಸ್ಮರಿಸಿಕೊಂಡಿದ್ದಾರೆ. ಅಖಿಲ ಭಾರತ ವಿದ್ಯಾರ್ಥಿ ಫೆಡರೇಷನ್ ಮುಖಂಡರಾಗಿ ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದ ಅವರು 1930 ರ ದಶಕದ ಅಂತ್ಯದಲ್ಲಿ ಕಮ್ಯುನಿಸ್ಟ್ ಆಂದೋಲನವನ್ನು ಸೇರಿಸಿದರು. ನಂತರ ಅವರು ದಿಲ್ಲಿಯಲ್ಲಿ ಕಾರ್ಮಿಕ ವರ್ಗದ ಆಂದೋಲನ ಹಾಗೂ ಕಮ್ಯುನಿಸ್ಟ್ ಆಂದೋಲನವನ್ನು ಬೆಳೆಸುವಲ್ಲಿ ಪ್ರಮುಖ ಕಾಣಿಕೆ ನೀಡಿದ್ದರು.

ಸಿಪಿಐ ನ ರಾಷ್ಟ್ರೀಯ ಮುಖಂಡರಾಗಿ ಬೆಳೆದ ಅವರು ಸಮಾಜವಾದ ಮತ್ತು ಕಾರ್ಮಿಕ ವರ್ಗಕ್ಕೆ ಆಳವಾದ ಬದ್ಧತೆ ಹೊಂದಿದ್ದ ಸಂಗಾತಿ. ಇತ್ತೀಚಿನ ವರ್ಷಗಳಲ್ಲಿ ಅವರು ಎಡ ಐಕ್ಯತೆಯನ್ನು ಬಲಪಡಿಸುವಲ್ಲಿ ಮಹತ್ವದ ಕಾಣಿಕೆ ನೀಡಿದರು. ಅವರ ನಿಧನ ಸಿಪಿಐಗೆ ಮತ್ತು ದೇಶದ ಎಡ ಆಂದೋಲನಕ್ಕೊಂದು ದೊಡ್ಡ ಪೆಟ್ಟು ಎಂದಿರುವ ಸುರ್ಜಿತ್ ಸಿಪಿಐ(ಎಂ) ಪೊಲಿಟ್ ಬ್ಯೂರೋ ಪರವಾಗಿ ಶ್ರದ್ಧಾಂಜಲಿ ಅರ್ಪಿಸುತ್ತಾ ಅವರ ಪತ್ನಿ ವಿಮಲಾ ಫರೂಕಿ ಹಾಗೂ ಕುಟುಂಬದ ಇತರ ಸದಸ್ಯರಿಗೆ ಹಾರ್ದಿಕ ಸಂತಾಪ ವ್ಯಕ್ತಪಡಿಸಿದ್ದಾರೆ.

ಆರ್.ಎಸ್.ಎಸ್-ಬಿಜೆಪಿಯ ಹೇಯ ಪಿತೂರಿ ಸಾಬೀತು

ಪುಟ 1 ರಿಂದ

ಶಾಮೀಲು ಎಂತಹ ಮಟ್ಟದಲ್ಲಿತ್ತು ಎಂಬುದನ್ನು ಅರ್ಥ ಮಾಡಿಕೊಳ್ಳಬಹುದು" ಎಂದು ಸಿಪಿಐ(ಎಂ) ಹೇಳಿದೆ.

ಇಡೀ ಹಿಂದುತ್ವ ಪಡೆಯ ಮುಖಂಡತ್ವದ ಮೇಲೆಯೇ ಕಾನೂನಿನ ವಿವಿಧ ಕಲಮು ಗಳಡಿ ಆಪಾದನೆ ಬಂದಿರುವ ಸಂಗತಿಯ ಬಗ್ಗೆ ಟಿಪ್ಪಣಿ ಮಾಡುತ್ತಾ ಸಿಪಿಐ(ಎಂ) ಪತ್ರಿಕೆಯ ಸಂಪಾದಕೀಯ 'ಇವೆಲ್ಲಾ ಕಾವಿ ಪಡೆ ಯಾವ ರೀತಿಯಲ್ಲಿ ರಾಜಕೀಯವನ್ನು ಅಪರಧೀಕರಣಗೊಳಿಸಿದೆ ಎಂಬುದನ್ನು ಸಾಬೀತು ಪಡಿಸುತ್ತದಷ್ಟೆ. ಅದು ಧರ್ಮದ ಹೆಸರಲ್ಲಿ ಅತ್ಯಂತ ಹೇಯ ಅಪರಾಧಗಳನ್ನು ಎಸಗಿ ಕೋಮು ವಿಷವನ್ನು ಆಳವಾಗಿ ಹರಡಿ ಸಾವಿರಾರು ಜೀವಗಳನ್ನು ಬಲಿ ತೆಗೆದುಕೊಂಡಿದೆ. ಇನ್ನೂ ಹೊಲಸು ಸಂಗತಿಯೆಂದರೆ ಬಾಬ್ರಿ ಮಸೀದಿಯ ಧ್ವಂಸದ ನಂತರ ಅವರ ಹಲವಾರು ಮುಖಂಡರು ಕರಸೇವಕರನ್ನು ಹಾಡಿ ಹೊಗಳಿ ಅವರ ಕೃತ್ಯವನ್ನು ಅನುಮೋದಿಸಿದ್ದರು. ನಾವು ಆಧುನಿಕ ಭಾರತದ ಪ್ರಜಾಸತ್ತಾತ್ಮಕ ಮತ್ತು ಜಾತ್ಯಾತೀತ ಅಡಿಗಲ್ಲನ್ನು ಕಾಯ್ದುಕೊಳ್ಳ ಬೇಕಾದರೆ ಇಂತಹ ಅಪರಾಧೀಕರಣಕ್ಕೆ ಅವಕಾಶ ಕೊಡಲು ಸಾಧ್ಯವಿಲ್ಲ" ಎಂದು ಹೇಳಿದೆ.

ಕಾಂಗ್ರೆಸ್ ಅಪಲಾಪ ....

ಪುಟ 1 ರಿಂದ

ಸರಕಾರವನ್ನು ನಡೆಸುತ್ತಿದೆಯೋ ಅಲ್ಲೆಲ್ಲಾ ಹಿಂದಿನ ಕಾಂಗ್ರೆಸ್ ಆಳ್ವಿಕೆಗಿಂತ ಯಾವುದೇ ರೀತಿಯಲ್ಲಿ ತಾನು ಭಿನ್ನವಾಗಿಲ್ಲ ಎಂದು ತೋರಿಸಿಕೊಂಡಿದೆ. ಅಪರಾಧೀಕರಣ ಸಮೃದ್ಧವಾಗಿರುವ ಮಹಾರಾಷ್ಟ್ರದ ಶಿವಸೇನೆ-ಬಿಜೆಪಿ ಸರಕಾರದ ದಾಖಲೆಯಾಗಲೀ, ಖಾಸಗೀಕರಣದ ಭರದಲ್ಲಿರುವ ರಾಜಸ್ತಾನ ಸರಕಾರದ ದಾಖಲೆಯಾಗಲೀ, ಅಧಿಕಾರಕ್ಕಾಗಿ ಗುಂಪುಗಾರಿಕೆ ತುಂಬಿ ತುಳುಕುತ್ತಿರುವ ದಿಲ್ಲಿಯಾಗಲೀ ಎಲ್ಲವೂ ಬಿಜೆಪಿಯ ಪ್ರತಿಷ್ಠೆಗೆ ಮಸಿ ಬಳಿದಿವೆ.

ಎಲ್.ಕೆ.ಅಡ್ವಾಣಿಯವರ ರಥ ಯಾತ್ರೆಯ ಮೂಲಕ ತಾವೇ ಸ್ವಾತಂತ್ರ್ಯ ಹೋರಾಟದ ಪರಂಪರೆಯ ವಾರಸುದಾರರು ಎಂದು ಪೋಸು ಕೊಡುವ ಬಿಜೆಪಿ ಪ್ರಯತ್ನವನ್ನು ಸಿಪಿಐ(ಎಂ) ಕೇಂದ್ರ ಸಮಿತಿ ಗೇಲಿ ಮಾಡಿದೆ. ಸಾಮ್ರಾಜ್ಯ ಶಾಹಿ-ವಿರೋಧಿ ಆಂದೋಲನದಲ್ಲಿ ಆರ್.ಎಸ್.ಎಸ್. ಯಾವುದೇ ಪಾತ್ರ ವಹಿಸಿಲ್ಲ ಎಂದು ಎಲ್ಲರಿಗೂ ಗೊತ್ತು. ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸುವ ಬದಲು ಅವರು ಮುಸ್ಲಿಂ ಕೋಮುವಾದಿಗಳೊಂದಿಗೆ ಬ್ರಿಟಿಶ್ ಆಳ್ವಿಕೆಯ ವಿರುದ್ಧ ಹೋರಾಡುತ್ತಿರುವವರ ಐಕ್ಯತೆಯನ್ನು ಛಿದ್ರಗೊಳಿಸಲು ಪ್ರಯತ್ನಿಸಿದರು ಎಂಬ ಸಂಗತಿಯನ್ನು ಸಿಪಿಐ(ಎಂ) ಕೇಂದ್ರ ಸಮಿತಿ ನೆನಪಿಸಿದೆ.

ಸಂಯುಕ್ತ ರಂಗದ ಸ್ಥಿತಿ

ಎಡ, ಪ್ರಜಾಪ್ರಭುತ್ವವಾದಿ ಹಾಗೂ ಜಾತ್ಯಾತೀತ ಶಕ್ತಿಗಳ ಐಕ್ಯತೆಯ ಆಧಾರದಲ್ಲಿ ಒಂದು , ಮೂರನೇ ಪರ್ಯಾಯವನ್ನು ಬೆಳೆಸಲು ಸಿಪಿಐ(ಎಂ) ಬದ್ಧವಾಗಿದೆ. ಆದರೆ ಸಂಯುಕ್ತ ರಂಗದ ಹಲವು ಪಕ್ಷಗಳು ಇಂತಹ ಒಂದು ಪರ್ಯಾಯವನ್ನು ಕ್ರೋಢೀಕರಿಸುವ ಮತ್ತು ಬೆಳೆಸುವ ಅಗತ್ಯವನ್ನು ಮನಗಂಡಿಲ್ಲ ಎಂದು ಕೇಂದ್ರ ಸಮಿತಿ ಗಮನಿಸಿತು. ಈ ವಿಫಲತೆಗೆ ಮುಖ್ಯ ಕಾರಣ ಸಂಯುಕ್ತ ರಂಗ ಸರಕಾರ ಅನುಸರಿಸುತ್ತಿರುವ ಆರ್ಥಿಕ ನೀತಿಗಳು.

ಖಾಸಗೀಕರಣದ ವಿಪರೀತ ಹಾವಳಿ, ಬಹುರಾಷ್ಟ್ರೀಯ ಕಂಪನಿಗಳಿಗೆ ಯಾವುದೇ ವಿವೇಚನೆಯಿಲ್ಲದೆ ಅವಕಾಶ ತೆರೆದುಕೊಟ್ಟು ದೇಶೀ ಉದ್ದಿಮೆಗಳ ಮೇಲೆ ಪ್ರತಿಕೂಲ ಪರಿಣಾಮ ಬೀರುವಂತಹ ನೀತಿಗಳನ್ನು ತಾನು ಒಪ್ಪುವುದಿಲ್ಲ, ಅದನ್ನು ವಿರೋಧಿಸುತ್ತೇನೆ ಎಂದು ಹೇಳಿರುವ ಸಿಪಿಐ(ಎಂ) ಕೇಂದ್ರ ಸಮಿತಿ ವಿಮಾ ವಲಯವನ್ನು ತೆರೆಯುವ, ವಿಮಾ ನಿಯಂತ್ರಣ ಪ್ರಾಧಿಕಾರ ಮಸೂದೆ ತರುವ ಪ್ರಯತ್ನಗಳನ್ನು ಕೈ ಬಿಡಬೇಕು, ಕಲ್ಲಿದ್ದಲು ಗಣಿಗಾರಿಕೆ ಹಾಗೂ ವಿದ್ಯುತ್ ವಿತರಣೆಯ ವಲಯಗಳನ್ನು ಖಾಸಗೀಕರಿಸುವ ಮಸೂದೆಯನ್ನು ಕೈ ಬಿಡಬೇಕು ಎಂದು ಆಗ್ರಹಪಡಿಸಿದೆ. ರೋಗಗ್ರಸ್ತ ಕೈಗಾರಿಕಾ ಕಂಪನಿಗಳ ಶಾಸನವನ್ನು ತಿದ್ದುಪಡಿ ಮಾಡುವ ಮಸೂದೆ(ಸೀಕಾ ತಿದ್ದುಪಡಿ ಮಸೂದೆ) ಕೂಡಾ ಒಂದು ಪ್ರತಿಗಾಮಿ ಕ್ರಮ, ಏಕೆಂದರೆ ಅದು ರೋಗಗ್ರಸ್ತ ಘಟಕಗಳ ಪುನರುಜ್ಜೀವನಕ್ಕೆ ಅವಕಾಶ ಮಾಡಿಕೊಡುವುದಿಲ್ಲ, ಬದಲಾಗಿ ಅವನ್ನು ತ್ವರಿತವಾಗಿ ಮುಚ್ಚಿಬಿಡಲು ನೆರವಾಗುತ್ತದೆ ಎಂದು ಕೇಂದ್ರಸಮಿತಿ ಖಂಡಿಸಿದೆ.

ನೆಪಗಳು ಬೇಡ

ಸಂಯುಕ್ತ ರಂಗ ಸರಕಾರ 'ಸಮಾನ ಕನಿಷ್ಟ ಕಾರ್ಯಕ್ರಮ'ದ ಜನ-ಪರ ವಚನಗಳನ್ನು ಪಾಲಿಸುವಲ್ಲಿ ವಿಫಲವಾಗಿರುವುದು, ಅದರ ಬದಲು ಹಿಂದಿನ ಕಾಂಗ್ರೆಸ್ ಸರಕಾರದ ಆರ್ಥಿಕ ನೀತಿಗಳನ್ನು ಮುಂದುವರಿಸುವ ಕ್ರಮಗಳನ್ನು ತರಾತುರಿಯಿಂದ ಜಾರಿಗೆ ತರಲು ಪ್ರಯತ್ನಿಸುತ್ತಿರುವುದರಿಂದಲೇ ತನ್ನನ್ನು ಕ್ರೋಢೀಕರಿಸಿಕೊಳ್ಳುವಲ್ಲಿ ಹಾಗೂ ಜನರ ಆಕಾಂಕ್ಷೆಗಳನ್ನು ಈಡೇರಿಸುವಲ್ಲಿ ಅದು ಅಸಮರ್ಥವಾಗುತ್ತಿದೆ.

ಈ ಸಂಬಂಧದಲ್ಲಿ ಕೇಂದ್ರಸಮಿತಿ ಮೂರು ಪ್ರಮುಖ ಶಾಸನಗಳನ್ನು ಸಂಸತ್ತಿನ ಮುಂಗಾರು ಅಧಿವೇಶನದಲ್ಲಿ ಅಂಗೀಕರಿಸುವಂತೆ ಮಾಡುವಲ್ಲಿ ಸಂಯುಕ್ತ ರಂಗ ಸರಕಾರದ ವಿಫಲತೆಯ ಬಗ್ಗೆ ತನ್ನ ತೀವ್ರ ಅತೃಪ್ತಿಯನ್ನು ವ್ಯಕ್ತಪಡಿಸಿದೆ. ಸರಕಾರ ಮಹಿಳಾ ಮೀಸಲಾತಿ ಮಸೂದೆ, ಕೃಷಿ ಕಾರ್ಮಿಕರ ಮಸೂದೆ ಮತ್ತು ಪರಿಷ್ಕೃತ ಲೋಕಪಾಲ್ ಮಸೂದೆಯನ್ನು ಅಂಗೀಕರಿಸುವಂತೆ ಮಾಡುವುದಾಗಿ ವಚನ ನೀಡಿತ್ತು. ಮುಂದಿನ ಅಧಿವೇಶನದಲ್ಲಾದರೂ ಈ ಮಸೂದೆಗಳ ಅಂಗೀಕಾರಕ್ಕೆ ಯಾವುದೇ ನೆಪಗಳಿರಬಾರದು ಎಂದು ಕೇಂದ್ರ ಸಮಿತಿ ಹೇಳಿದೆ.

ಪಡಿತರ ವ್ಯವಸ್ಥೆಯನ್ನು ಬಲಪಡಿಸಿ

ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿ ತಂದ ಹೊಸ ಯೋಜನೆ ಪಡಿತರ ವ್ಯವಸ್ಥೆಯನ್ನು ಬಲವಡಿಸುವಲ್ಲಿ, ಅದನ್ನು ಉತ್ತಮ ಪಡಿಸುವಲ್ಲಿ ವಿಫಲವಾಗಿದೆ ಎಂದು ಕೇಂದ್ರ ಸಮಿತಿ ಆತಂಕ ವ್ಯಕ್ತಪಡಿಸಿದೆ. ಬಡತನದ ರೇಖೆಯ ಕೆಳಗಿರುವ ಕುಟುಂಬಗಳಿಗೆ ತಿಂಗಳಿಗೆ 10 ಕೆ.ಜಿ. ನೀಡಿಕೆ ಅತ್ಯಲ್ಪ. ರಾಜ್ಯಗಳಿಗೆ ಆಹಾರ ಧಾನ್ಯಗಳ ನೀಡಿಕೆಯಲ್ಲೂ ಕಡಿತ ಮಾಡಿರುವುದರಿಂದ ಹಲವೆಡೆ ಪಡಿತರ ವ್ಯವಸ್ಥೆ ಕುಸಿದು ಹೋಗಿದೆ. ಸಾರ್ವಜನಿಕ ವಿತರಣಾ ವ್ಯವಸ್ಥೆ ಅಥವಾ ಪಡಿತರ ವ್ಯವಸ್ಥೆಯನ್ನು ಬಲಪಡಿಸುವುದಕ್ಕೆ ಸಿಪಿಐ(ಎಂ) ಅತ್ಯಂತ ಹೆಚ್ಚಿನ ಆದ್ಯತೆ ನೀಡುತ್ತದೆ. ಇದಕ್ಕಾಗಿ ಸರಕಾರವು ಬಡತನದ ರೇಖೆಯ ಕೆಳಗಿರುವ ಕುಟುಂಬಗಳಿಗೆ ಸಬ್ಸಿಡಿ ದರದಲ್ಲಿ ಧಾನ್ಯ ನೀಡಿಕೆಯ ಪ್ರಮಾಣವನ್ನು 20. ಕೆ.ಜಿ.ಗೆ ಏರಿಸಬೇಕು. ಅಲ್ಲದೆ ರಾಜ್ಯಗಳಿಗೆ ನೀಡುವ ಪ್ರಮಾಣದಲ್ಲಿ ಹೆಚ್ಚಳವಾಗಬೇಕು. ಈ ಮೂಲಕ ಬಡತನದ ರೇಖೆಯ ಮೇಲಿರುವ ಕುಟುಂಬಗಳಿಗೂ ಪಡಿತರ ವ್ಯವಸ್ಥೆ ಉಪಯೋಗಕ್ಕೆ ಬರುವಂತಾಗಬೇಕು. ಏಕೆಂದರೆ ಈ ಕುಟುಂಬಗಳು ಸಿರಿವಂತ ಕುಟುಂಬಗಳೇನಲ್ಲ, ಸಾಮಾನ್ಯ ಕೂಲಿ ಆದಾಯದ ಕುಟುಂಬಗಳಿವು.

ದಲಿತರ ಹಕ್ಕುಗಳ ರಕ್ಷಣೆ

ದೇಶದ ವಿಭಿನ್ನ ಭಾಗಗಳಲ್ಲಿ ದಲಿತರಮೇಲೆ ಧಾಳಿಗಳು ಹೆಚ್ಚುತ್ತಿವೆ. ಮುಂಬೈಯಲ್ಲಿ ಹತ್ತು ಯುವಜನರ ಹತ್ಯೆಗೆ ಕಾರಣವಾದ ಪೋಲೀಸ್ ಅತ್ಯಾಚಾರವನ್ನು ಖಂಡಿಸಿದ ಕೇಂದ್ರಸಮಿತಿ ಶಿವಸೇನಾ ನೇತೃತ್ವದ ಸರಕಾರದ ದಲಿತ-ವಿರೋಧಿ ಪಕ್ಷಪಾತ ಈ ಘಟನೆಯಲ್ಲಿ ಎದ್ದು ಕಂಡಿದೆ ಎಂದು ಅಭಿಪ್ರಾಯ ಪಟ್ಟಿದೆ. ಪರಿಶಿಷ್ಟ ಜಾತಿಗಳ ಜನರು ತಮ್ಮ ಪ್ರಾಥಮಿಕ ಪ್ರಜಾಪ್ರಭುತ್ವ ಹಕ್ಕುಗಳನ್ನು ಕೇಳುವುದರ ಬಗ್ಗೆ, ಸಾಮಾಜಿಕ ಘನತೆಗಾಗಿ ಪ್ರಯತ್ನಿಸುವುದರ ಬಗ್ಗೆ ಮೇಲ್ಜಾತಿಗಳವರ ಅಸಹನೆ ಹೆಚ್ಚುತ್ತಿದ್ದು ಅದನ್ನು ಮೇಲ್ಜಾತಿಗಳ ಹಿಂಸಾಚಾರ ಹಾಗೂ ಭಯೋತ್ಪಾದನೆಯಿಂದ ಎದುರಿಸುವ ಪ್ರಯತ್ನ ನಡೆಯುತ್ತಿದೆ. ತಮಿಳು ನಾಡಿನಲ್ಲೂ ಈ ಪ್ರವೃತ್ತಿಯಿಂದಾಗಿ ಘರ್ಷಣೆಗಳು ನಡೆದಿವೆ. ಇಂತಹ ಸಂದರ್ಭದಲ್ಲಿ ದಲಿತರ ಮೂಲಭೂತ ಹಕ್ಕುಗಳ ರಕ್ಷಣೆಗೆ ದೃಢವಾಗಿ ನಿಲ್ಲಬೇಕು ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ತನ್ನೆಲ್ಲಾ ಘಟಕಗಳಿಗೆ ಕರೆ ನೀಡಿದೆ. ಜಾತಿ ದಮನ ಹಾಗೂ ಪಕ್ಷಪಾತವನ್ನು ತಡೆಯಲು ಎಲ್ಲಾ ಪ್ರಜಾಪ್ರಭುತ್ವ ವಾದಿ ಜನಾಭಿಪ್ರಾಯವನ್ನು ಅಣಿನೆರೆಸಬೇಕು ಎಂದೂ ಅದು ಕರೆ ನೀಡಿದೆ.

ಮುಷ್ಕರ ಹೋರಾಟಗಳಿಗೆ ಬೆಂಬಲ

ತಮ್ಮ ಬೇಡಿಕೆಗಳ ಮೇಲೆ ಎರಡು ದಿನಗಳ ದೇಶವ್ಯಾಪಿ ಮುಷ್ಕರ ನಡೆಸಿದ ಬ್ಯಾಂಕ್ ನೌಕರರನ್ನು ಕೇಂದ್ರ ಸಮಿತಿ ಅಭಿನಂದಿಸಿತು. ಸ್ಥಳೀಯ ಪ್ರದೇಶ ಖಾಸಗಿ ಬ್ಯಾಂಕುಗಳನ್ನು ರಚಿಸುವ ಯೋಜನೆಯನ್ನು ರದ್ದು ಮಾಡಬೇಕು ಎಂಬುದು ಈ ಮುಷ್ಕರದ ಬೇಡಿಕೆಗಳಲ್ಲಿ ಒಂದು ಎಂಬುದು ಗಮನಾರ್ಹ. ಬ್ಯಾಂಕ್ ಖಾಸಗೀಕರಣದ ಈ ಮುಂದಿನ ಹೆಜ್ಜೆ ಅನುಸರಿಸಿದರೆ ಗ್ರಾಮೀಣ ಪ್ರದೇಶಗಳಲ್ಲಿ ಅಲ್ಲಿನ ಶ್ರೀಮಂತರಿಂದ ಸಂಪನ್ಮೂಲಗಳನ್ನು ಸಂಗ್ರಹಿಸುವ ಖಾಸಗಿ ಬ್ಯಾಂಕುಗಳು ಆರಂಭವಾಗಿ ಸಹಕಾರಿ ಸಂಸ್ಥೆಗಳು ಛಿದ್ರಗೊಳ್ಳುತ್ತವೆ ಎಂಬ ಭಯವನು ಕೇಂದ್ರಸಮಿತಿ ವ್ಯಕ್ತಪಡಿಸಿದೆ.

ಸಿಪಿಐ(ಎಂ) ಕೇಂದ್ರಸಮಿತಿ ಸರಕಾರದ ಹೊಸ ಪೆನ್ಶನ್ ಯೋಜನೆಯ ವಿರುದ್ಧ ಸಿಐಟಿಯು ಮತ್ತಿತರ ಕೇಂದ್ರ ಕಾರ್ಮಿಕ ಸಂಘಟನೆಗಳು ಆರಂಭಿಸಿರುವ ಹೋರಾಟವನ್ನು ಬೆಂಬಲಿಸಿತು.

ಕೇಂದ್ರ ಸರಕಾರ ತನ್ನ ನೌಕರರ ಒಕ್ಕೂಟಗಳೊಂದಿಗೆ ವೇತನ ಆಯೋಗದ ಶಿಫಾರಸ್ಸುಗಳನ್ನು ಕುರಿತಂತೆ ಮಾತುಕತೆ ನಡೆಸಿ ಒಂದು ಇತ್ಯರ್ಥಕ್ಕೆ ಬರಲು ವಿಫಲವಾಗಿದ್ದನ್ನು ಕೇಂದ್ರ ಸಮಿತಿ ಟೀಕಿಸಿತು. ನೌಕರರ, ಅದರಲ್ಲೂ ಸಿ ಮತ್ತು ಡಿ ವಿಭಾಗದ ನೌಕರರ ನ್ಯಾಯಬದ್ಧ ಬೇಡಿಕೆಗಳನ್ನು ಕುರಿತು ಮಾತುಕತೆಗಳು ಸ್ಥಗಿತಗೊಂಡದ್ದರಿಂದ ನೌಕರರ ಸಂಘಟನೆಗಳು ಸೆಪ್ಟೆಂಬರ್ 24 ರಿಂದ ಮುಷ್ಕರಕ್ಕೆ ಕರೆ ನೀಡಿವೆ. ಈ ಪ್ರತಿಭಟನಾ ಕಾರ್ಯಾಚರಣೆಗೆ ಪೂರ್ಣ ಬೆಂಬಲ ವ್ಯಕ್ತಪಡಿಸಿರುವ ಸಿಪಿಐ(ಎಂ) ಕೇಂದ್ರ ಸಮಿತಿ ಕೇಂದ್ರ ಸರಕಾರ ನೌಕರರ ನ್ಯಾಯಬದ್ಧ ಬೇಡಿಕೆಗಳನ್ನು ಒಪ್ಪಿಕೊಂಡು ಈ ಮುಷ್ಕರವನ್ನು ತಡೆಯಬೇಕು ಎಂದು ಕರೆ ನೀಡಿದೆ.

ಸ್ವಾತಂತ್ರ್ಯದ ಐವತ್ತನೇ ವಾರ್ಷಿಕೋತ್ಸವ

ಸ್ವಾತಂತ್ರ್ಯದ ಐವತ್ತನೇ ವಾರ್ಷಿಕೋತ್ಸವವನ್ನು ವರ್ಷವಿಡೀ ನಡೆಸಬೇಕೆಂದು ಕೇಂದ್ರ ಸಮಿತಿ ನಿರ್ಧರಿಸಿದೆ. ಸ್ವಾತಂತ್ರ್ಯ ಹೋರಾಟದಲ್ಲಿ ಕಾರ್ಮಿಕರ, ರೈತರ ಸಮರಧೀರ ಹೋರಾಟಗಳು, ಕಮ್ಯುನಿಸ್ಟರು ಮತ್ತು ಸಾಮ್ರಾಜ್ಯಶಾಹಿ-ವಿರೋಧಿ ಆಂದೋಲನಗಳ ಇತರ ತೊರೆಗಳ ತ್ಯಾಗ-ಬಲಿದಾನಗಳು, ಕಾಣಿಕೆಗಳತ್ತ ಈ ಪ್ರಚಾರಾಂದೋಲನ ದೇಶಬಾಂಧವರ ಗಮನ ಸೆಳೆಯಲಿದೆ. ಅಲ್ಲದೆ ಸ್ವಾತಂತ್ರ್ಯಾನಂತರ ಬೂರ್ಜ್ವಾ-ಭೂಮಾಲಕ ಧೋರಣೆಗಳಲ್ಲಿನ ವರ್ಗ ಪಕ್ಷಪಾತವನ್ನು ಬಯಲಿಗೆಳೆದು ಎಡ ಮತ್ತು ಪ್ರಜಾಪ್ರಭುತ್ವವಾದೀ, ಶಕ್ತಿಗಳ ಪರ್ಯಾಯ ಧೋರಣೆಗಳನ್ನು ಜನಗಳ ಮುಂದಿಡುವ ಒಂದು ಪ್ರಚಾರವನ್ನು ಕೂಡಾ ಪಕ್ಷ ಈ ಅವಧಿಯಲ್ಲಿ ನಡೆಸಲಿದೆ.

ಅಕ್ಟೋಬರ್ ಕ್ರಾಂತಿಯ ಸ್ಮರಣೆ

ವಿಶ್ವದಲ್ಲಿ ಪ್ರಥಮ ಸಮಾಜವಾದಿ ಪ್ರಭುತ್ವವನ್ನು ರಚಿಸಿದ ರಶ್ಯಾದ ಅಕ್ಟೋಬರ್ ಕ್ರಾಂತಿಯ 80ನೇ ವಾರ್ಷಿಕೋತ್ಸವವನ್ನು ಆಚರಿಸಲು ಕೇಂದ್ರ ಸಮಿತಿ ನಿರ್ಧರಿಸಿದೆ. ಈ ಸಂದರ್ಭದಲ್ಲಿ ಪಕ್ಷ ಸಮಾಜವಾದ ಮತ್ತು ಮಾರ್ಕ್ಸ್‌ವಾದ-ಲೆನಿನ್‌ವಾದದ ಗುರಿಸಾಧನೆಗೆ ತನ್ನನ್ನು ಮತ್ತೆ ಸಮರ್ಪಿಸಿಕೊಳ್ಳುತ್ತದೆ ಎಂದಿರುವ ಕೇಂದ್ರ ಸಮಿತಿ ನವಂಬರ್ 7 ನ್ನು ಸುಯೋಗ್ಯ ರೀತಿಯಲ್ಲಿ ಆಚರಿಸಬೇಕು ಎಂದು ಪಕ್ಷದ ಘಟಕಗಳಿಗೆ ಕರೆ ನೀಡಿದೆ.

ಫೆಬ್ರವರಿ 17-23 : ಸಿಪಿಐ(ಎಂ)ನ 16ನೇ ಮಹಾಧಿವೇಶನ

ಸಿಪಿಐ(ಎಂ)ನ ಹದಿನಾರನೇ ಮಹಾಧಿವೇಶನವನ್ನು ಕಲ್ಕತ್ತೆಯಲ್ಲಿ ಫೆಬ್ರವರಿ 17 ರಿಂದ 22 ರವರೆಗೆ ನಡೆಸಲು ಆಗಸ್ಟ್ 29 ರಿಂದ ಸೆಪ್ಟೆಂಬರ್ 1 ರವರೆಗೆ ನಡೆದ ಸಿಪಿಐ(ಎಂ) ಕೇಂದ್ರ ಸಮಿತಿ ನಿರ್ಧರಿಸಿದೆ. ಈ ಮಹಾಧಿವೇಶನದಲ್ಲಿ ಚರ್ಚೆಗೆ ತೆಗೆದುಕೊಳ್ಳಬೇಕಾದ ಕರಡು ರಾಜಕೀಯ ವರದಿಯ ಒಂದು ರೂಪುರೇಷೆಯನ್ನು ಈ ಕೇಂದ್ರ ಸಮಿತಿಯ ಸಭೆಯಲ್ಲಿ ಚರ್ಚಿಸಲಾಯಿತು. ಈ ರೂಪುರೇಷೆ ಅಂತರ್ರಾಷ್ಟ್ರೀಯ ಹಾಗೂ ರಾಷ್ಟ್ರೀಯ ಸನ್ನಿವೇಶವನ್ನು ವಿಶ್ಲೇಷಿಸಿ ಪಕ್ಷ ಮುಂಬರುವ ದಿನಗಳಲ್ಲಿ ನಿರ್ವಹಿಸಬೇಕಾದ ಕೆಲಸ-ಕಾರ್ಯಗಳನ್ನು ಮುಂದಿಡುತ್ತಾ ಜಾಗತೀಕರಣ ಮತ್ತು ಸಾಮ್ರಾಜ್ಯಶಾಹಿ ಧಾಳಿಗಳ ವಿರುದ್ಧ ಹೋರಾಟವನ್ನು ಮುಂದುವರಿಸಲು ಕರೆ ನೀಡಿದೆ. ನವಂಬರ್ 9 ಹಾಗೂ 10 ರಂದು ನಡೆಯುವ ಕೇಂದ್ರ ಸಮಿತಿಯ ಸಭೆ ಈ ಕರಡು ರಾಜಕೀಯ ವರದಿಯನ್ನು ಅಂತಿಮಗೊಳಿಸುತ್ತದೆ. 16ನೇ ಮಹಾಧಿವೇಶನದ ಇತರ ಸಿದ್ಧತೆಗಳ ಬಗ್ಗೆಯೂ ಆ ಸಭೆ ಅಂತಿಮ ತೀರ್ಮಾನ ಕೈಗೊಳ್ಳಲಿದೆ.

ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಏನು ನಡೆಯುತ್ತಿದೆ?

ಎನ್.ಕೆ.ಉಪಾಧ್ಯಾಯ

ಜನರೆದುರಿಸುತ್ತಿರುವ ನೂರಾರು ಸಮಸ್ಯೆಗಳಿಗೆ ಮುಖ್ಯವಾಗಿ ನೀರು; ವಿದ್ಯುತ್, ರಸ್ತೆ, ಆರೋಗ್ಯ, ಒಳಚರಂಡಿ ಸಮಸ್ಯೆಗಳಂಥ ವಿಷಯಗಳ ಕುರಿತು ನಿರೀಕ್ಷಿತ ವೇಳೆಯಲ್ಲಿಯೇ ಪರಿಹಾರ ಒದಗಿಸಬೇಕೆಂಬ ಮಹೋದ್ದೇಶದಿಂದ ಅಧಿಕಾರ ವಿಕೇಂದ್ರೀಕರಣಗೊಳಿಸುವ ಸಲುವಾಗಿಯೇ ಸಂವಿಧಾನಕ್ಕೆ 73 ಮತ್ತು 74ನೇ ತಿದ್ದುಪಡಿಗಳನ್ನು ತಂದು ಮಹಾನಗರ ಸಭೆ, ನಗರಸಭೆ, ಗ್ರಾಮ ಪಂಚಾಯತ್, ಜಿಲ್ಲಾ ಪಂಚಾಯತ್‌ಗಳಿಗೆ ಸಂಪೂರ್ಣ ಅಧಿಕಾರ ಕೊಡಲಾಗಿದೆ. ಆ ತಿದ್ದುಪಡಿಗಳಿಗನುಸಾರವಾಗಿ ಬೆಂಗಳೂರು ಮಹಾನಗರ ಪಾಲಿಕೆಯ ಚುನಾವಣೆ ನಡೆಸಲಾಯಿತು.

ಜನಸೇವೆಯ ಮೂಲ ಅಂಶವನ್ನು ತಳ್ಳಿ ಹಾಕಿ ಅಧಿಕಾರ ಗ್ರಹಣ ಮತ್ತು ಅದರ ದುರುಪಯೋಗ ಒಂದೇ ತಮ್ಮ ಧ್ಯೇಯವಾಗಿದೆಯೆಂದು ತಿಳಿದ ಕಾಂಗ್ರೆಸ್ ಮತ್ತು ಜನತಾದಳ ಸರಕಾರಗಳು ಹೈಕೋರ್ಟಿನ ಆದೇಶವನ್ನೇ ಕಡೆಗಣಿಸಿ ಕುಂಟು ನೆವಗಳನ್ನು ಮುಂದೆ ಮಾಡಿ ಚುನಾವಣೆ ನಡೆಸುವುದನ್ನೇ ಮುಂದೂಡುತ್ತಾ ಬಂದು ಕೊನೆಗೆ ಅನಿವಾರ್ಯವಾಗಿ ಬೆಂಗಳೂರು ಮಹಾನಗರ ಪಾಲಿಕೆಯ ಚುನಾವಣೆ ನಡೆದು ಜನತಾದಳದ ಪದ್ಮಾವತಿ ಗಂಗಾಧರ ಗೌಡರು ಮೇಯರ್ ಆಗಿ ಆರಿಸಿಬಂದು ಎರಡು ವರ್ಷಗಳಾಗುತ್ತಾ ಬಂದಿದೆ. ಪದ್ಮಾವತಿ ಗಂಗಾಧರ ಗೌಡರು(ದೇವೇಗೌಡರ ಪ್ರಭಾವದಿಂದ ಆರಿಸಿ ಬಂದವರು) ಮೇಯರಾಗಿ ಆರಿಸಬಂದ ಕ್ಷಣದಿಂದಲೂ ಬೆಂಗಳೂರು ಮಹಾನಗರ ಪಾಲಿಕೆಗೆ ರಾಹುಕಾಲ ಹಿಡಿದಂತೆ ಕಂಡುಬರುತ್ತಿದೆ. ಮಹಾನಗರ ಪಾಲಿಕೆ ಕಟ್ಟಿದ್ದ ಹೊಸ ಕಟ್ಟಡ ಪ್ರವೇಶಿಸುತ್ತಿದ್ದಂತೆಯೇ ಆ ಕಟ್ಟಡದ ಮಹಾದ್ವಾರ "ವಾಸ್ತು ಶಿಲ್ಪಕ್ಕನುಸಾರವಾಗಿಲ್ಲ, ಅದು ಅವಲಕ್ಷಣ" ಎಂದು ಅದರ ಬದಲಾವಣೆಗಾಗಿ ಒತ್ತಾಯ ಬಂದಿತ್ತು. ಪದ್ಮಾವತಿಯವರು ಅಧಿಕಾರ ಸ್ವೀಕರಿಸಿದ ನಂತರ ಮೂರು ಜನ ಆಯುಕ್ತರು ಬಂದು ಹೋದರು, ಲಂಚಾವತಾರ ಮೆರೆಯುತ್ತಿತ್ತು. ಅಕ್ರಮ ಕಟ್ಟಡಗಳು ತಲೆಎತ್ತುತ್ತಿದ್ದವು. ಕಂಟ್ರಾಕ್ಟ್ ಪದ್ಧತಿ ಮೇಲೆ ಪೌರ ಕಾರ್ಮಿಕರ ಕೆಲಸ ನಿರ್ವಹಿಸಲು ಕೆಲಸಗಾರರನ್ನು ನೇಮಿಸಲಾಗುತ್ತಿತ್ತು. ಹೆಚ್ಚು ಕಡಿಮೆ ರಾಜ್ಯಸರಕಾರ ಆಡಳಿತೆಯ ವಿಧಿಸೌಧ ಪ್ರತೀಕವಾಗಿ ಆಡಳಿತೆ ನಡೆದಿತ್ತು.

ಡಾ|| ರವೀಂದ್ರ ಅವರು ಆಯುಕ್ತರಾಗಿ ಅಧಿಕಾರ ಸ್ವೀಕರಿಸಿದ ನಂತರ ಆಯುಕ್ತರು ಮತ್ತು ಮೇಯರ್ ಮಧ್ಯೆ ಶೀತಲ ಸಮರ ನಡೆದು ಈಗ ಅದು ಕೊನೆ ಘಟ್ಟ ತಲುಪಿ ಮೇಯರ್ ಅವರ ರಾಜೀನಾಮೆಯಲ್ಲಿ ಅಥವಾ ಆಯುಕ್ತ ರವೀಂದ್ರ ಅವರ ಎತ್ತಂಗಡಿಯಲ್ಲಿ ಪರ್ಯಾವಸಾನಗೊಳ್ಳಬಹುದಾಗಿದೆ. ಅಕ್ರಮ ಕಟ್ಟಡಗಳನ್ನು ನೆಲಸಮಗೊಳಿಸುವ ಆಯುಕ್ತರ ಕ್ರಮವನ್ನು ಮೇಯರ್ ಸಹಿಸಿಕೊಳ್ಳಲಾರದಾದರು. ಮೇಯರ್, ಕಾರ್ಪೊರೇಟರುಗಳ ಪ್ರತಿಭಟನೆಗಳ ಮಧ್ಯೆ ಕಟ್ಟಡ ಕೆಡಹುವ ಕಾರ್ಯ ಮುಂದುವರಿದಾಗ ಪ್ರಕರಣಗಳು ಕೋರ್ಟು ಕಟ್ಟೆ ಹತ್ತಿದವು. ಅಕ್ರಮವಾಗಿ ಕಟ್ಟಲ್ಪಟ್ಟ ದೇವರ ಗುಡಿಯ ಬಳಿಯ ಕಟ್ಟಡವನ್ನು ನೆಲಸಮ ಗೊಳಿಸುವ ಪ್ರಕರಣ ಗಂಭೀರ ಪ್ರಶ್ನೆಯಾಗಿ ಬಂತು. ಅಕ್ರಮ ಕಟ್ಟಡಗಳು ಅಧಿಕಾರಿಗಳ ಕುಮ್ಮಕ್ಕಿನಿಂದಲೇ ಕಟ್ಟಲ್ಪಡುತ್ತಿವೆ. ಅದು ಭ್ರಷ್ಟಾಚಾರದ ನೆಲಬೀಡಾಗಿದೆ. ಅಧಿಕಾರಿಗಳ ಕೈವಾಡದಿಂದಲೇ ಅವು ನಿರ್ಮಿಸಲ್ಪಟ್ಟಿರುವುದರಿಂದ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವ ವಿಚಾರ ಆಯುಕ್ತರದ್ದು. ಮತಗಳಿಕೆಯ ದೃಷ್ಟಿಯಿಂದ ಅಕ್ರಮ ಕಟ್ಟಡಗಳನ್ನು ಉಳಿಸಿಕೊಳ್ಳಬೇಕೆಂಬ ಉದ್ದೇಶ ಮೇಯರ್ ಮತ್ತು ಇತರ ಸದಸ್ಯರದ್ದು. ಇದರಲ್ಲಿ ಕಾಂಗ್ರೆಸ್, ಜನತಾದಳ, ಲೋಕಶಕ್ತಿ ಎಂಬ ಭೇದಭಾವವಿಲ್ಲ. ಕೈಚಾಚಿ ಕಿಸೆತುಂಬಿಸಿಕೊಳ್ಳಲಿಕ್ಕೆ ಎಲ್ಲರೂ ಸರಿಸಮಾನರೇ ಸರಿ. ಇದರಲ್ಲಿ ಸರಕಾರ ಮಧ್ಯೆ ಪ್ರವೇಶಿಸಲು ಹಿಂದೇಟು ಹಾಕಿದೆ.

ಈಗ ಶೀತಲ ಸಮರ ಕೊನೆ ಹಂತ ತಲುಪಿದೆ

1210 ಮಳಿಗೆಗಳಿದ್ದ ಸುಮಾರು 1500 ಮಂದಿ ವ್ಯಾಪಾರಸ್ಥರಿಗೆ ಮಂಜೂರಾತಿ ನೀಡಲಾಗಿರುವ ಕೆ.ಆರ್. ಮಾರುಕಟ್ಟೆಯ ನೂತನ ಕಟ್ಟಡದ ಉದ್ಘಾಟನೆ 1.9.97 ರಂದು ಮಾಜಿ ಪ್ರಧಾನ ಮಂತ್ರಿ ದೇವೇಗೌಡರಿಂದ ನೆರವೇರಿಸಲ್ಪಡಬೇಕಾಗಿತ್ತು. ದೇವೇಗೌಡರು ಅಕಸ್ಮಾತ್ತಾಗಿ ದೆಹಲಿಗೆ ಹೋದ ಕಾರಣದಿಂದಾಗಿ ಈ ಕಾರ್ಯಕ್ರಮವನ್ನು ರದ್ದು ಪಡಿಸಲಾಗಿದೆಯಂತೆ. ಈ ಕಾರ್ಯಕ್ರಮಕ್ಕೆ 5 ಲಕ್ಷಕ್ಕಿಂತಲೂ ಹೆಚ್ಚು ಖರ್ಚು ಮಾಡಲಾಗಿದೆ. ಕೆ.ಆರ್.ಮಾರುಕಟ್ಟೆಯ ಹೊಸ ಸಮುಚ್ಚಯ ನಿರ್ಮಾಣವಾಗಿ ಐದಾರು ತಿಂಗಳುಗಳು ಗತಿಸಿ ಹೋಗಿವೆ. ಮಾರ್ಚ್ ತಿಂಗಳಲ್ಲಿ ಕೂಡ ಇಂಥ ಕಾರ್ಯಕ್ರಮ ರದ್ದಾಗಿತ್ತು. ಈ ಬಂಡವಾಳಶಾಹಿ ಪಕ್ಷಗಳು, ಸರಕಾರ ಜನರ ಸಲುವಾಗಿ ನಿರ್ಮಿಸಿದ ಮಾರ್ಕೆಟು, ಆಸ್ಪತ್ರೆ, ಶಾಲೆ, ರೈಲ್ವೆ ಹಾಗೆಯೇ ಇತರ ಕಟ್ಟಡ, ನೀರಾವರಿ, ವಿದ್ಯುತ್ ಯೋಜನೆಗಳೆಲ್ಲ ಮಂತ್ರಿ ಮಹಾಶಯರುಗಳ ಅಮೃತ ಹಸ್ತ ಲಭ್ಯವಿಲ್ಲದೆ ಜನೋಪಕಾರಿಯಾಗದೆ ನೆನೆಗುದಿಗೆ ಬಿದ್ದಿರುವ ಹಲವಾರು ಪ್ರಕರಣಗಳು ಇಂದಿಗೂ ಜೀವಂತವಾಗಿಯೇ ಉಳಿದಿವೆ. ಅಧಿಕಾರಿಗಳೂ ಆಳುವವರೂ ಸಾರ್ವಜನಿಕರಿಗೆ ಈ ರೀತಿ ಅಪಾರ ಮೋಸ ಮಾಡುತ್ತಿದ್ದಾರೆ. ಸಾರ್ವಜನಿಕ ಹಣ ಲೂಟಿ ಮಾಡುತ್ತಿದ್ದಾರೆ. ಜನತಾದಳ ಸರಕಾರದ, ಪಕ್ಷದ ಅಧಿಕಾರ ಸ್ಥಾನದಲ್ಲಿದ್ದವರ ಈ ನಿಲುವು ಅಕ್ಷಮ್ಯ. ಬೆಂಗಳೂರು ನಗರ ಕೇಂದ್ರದಲ್ಲಿರುವ ಮಾರುಕಟ್ಟೆ ಸಮುಚ್ಚಯದ ಕಟ್ಟಡವನ್ನು ದೇವೇಗೌಡರ ಬದಲಾಗಿ ಒಬ್ಬ ಬಡ ಬೋರೆಗೌಡನಿಂದ ನೆರವೇರಿಸುತ್ತಿದ್ದರೆ ಆಳುವ ಪಕ್ಷಕ್ಕೆ ಗೌರವ ಬರುತ್ತಿತ್ತು. ನಾಗರೀಕರೂ, ವ್ಯಾಪರಸ್ಥರು ಆ ಕ್ರಮವನ್ನು ಹೊಗಳುತ್ತಿದ್ದರು. ಪ್ರಶಂಸೆ ಮಾಡುತ್ತಿದ್ದರು. ಈಗ ಈ ಘಟನೆಯ ಕುರಿತು ಸಂಬಂಧಪಟ್ಟ ಮಂತ್ರಿ ಅನಂತ್ ನಾಗ್ ಅವರನ್ನು ಹಿಡಿದು ಮೇಯರ್, ಆಯುಕ್ತರನ್ನೊಳಗೊಂಡು ಒಬ್ಬರಿಗೊಬ್ಬರು ಕೆಸರೆರಚುವ ಹೀನ ಕೃತ್ಯದಲ್ಲಿ ತೊಡಗಿರುವುದು ಅತ್ಯಂತ ಅಸಹನೀಯ ಮತ್ತು ಖಂಡನೀಯ.

ಸಂವಿಧಾನಕ್ಕೆ 74ನೇಯ ತಿದ್ದುಪಡಿಯಾದ ನಂತರ ಅದನ್ನು ರಾಜ್ಯದಲ್ಲಿ ಅನುಷ್ಠಾನದಲ್ಲಿ ತರಲು ಸಿದ್ಧಪಡಿಸಿದ ಮಸೂದೆಯಲ್ಲಿ ಮಹಾನಗರ ಪಾಲಿಕೆ, ನಗರ ಸಭೆಗಳಲ್ಲಿ ಚುನಾವಣೆಯಲ್ಲಿ ಆರಿಸಿಬರುವ ಸದಸ್ಯರಲ್ಲದೆ, ಸರಕಾರದಿಂದ ನಾಮಕರಣ ಹೊಂದಿದ ಹಾಗೆಯೇ ಪಾಲಿಕೆ-ನಗರ ಸಭೆಗಳ ಪರಿಧಿಯಲ್ಲಿ ಆರಿಸಿ ಬಂದಿರುವ ಶಾಸಕರೂ ಈ ಸಂಸ್ಥೆಗಳಲ್ಲಿ ಸದಸ್ಯರಾಗಿ ಪರಿಗಣಿಸಬೇಕೆಂದಿದೆ. ಆದರೆ ಈ ಸದಸ್ಯರಿಗೆ ಮತದಾನದ ಹಕ್ಕನ್ನು ಕೊಟ್ಟಿಲ್ಲ. ಸರಕಾರದಿಂದ ನಾಮಕರಣಗೊಂಡಿರುವ ಐದು ಸದಸ್ಯರಿಗೆ ಮತದಾನದ ಹಕ್ಕು ಕೊಡಬೇಕೆಂಬ ನಿರ್ಣಯವನ್ನು ಮೇಯರ್ ಅವರು ಕಾರ್ಪೊರೇಶನ್ ಸಭೆಯಲ್ಲಿ ಮಂಡಿಸಿ ಗೊಂದಲ ಉಂಟು ಮಾಡಿದ್ದರು. ಅವಕ್ಕೆ ಕಾರಣವೇನಂದರೆ ಬೆಂಗಳೂರು ನಗರ ಗ್ರಂಥಾಲಯ ಪ್ರಾಧಿಕಾರ ಮತ್ತು ಕರ್ನಾಟಕ ಮಾಂಸ ಮತ್ತು ಕೋಳಿ ಮಾರಾಟ ನಿಗಮ ಸಂಚಾಲನ ಮಂಡಳಿಗೆ ನಗರ ಪಾಲಿಕೆ ಪರವಾಗಿ ಸದಸ್ಯರನ್ನು ಆಯ್ಕೆ ಮಾಡಬೇಕಾಗಿದ್ದು, ಚುನಾಯಿತ ಸದಸ್ಯ ಬಲದಿಂದಲೇ ಈ ಮಂಡಳಿಗಳಿಗೆ ಜನತಾದಳದ ಸದಸ್ಯರನ್ನು ಆಯ್ಕೆ ಮಾಡುವ ಸಾಧ್ಯತೆ ಇರದ್ದರಿಂದ ನಾಮಕರಣ ಹೊಂದಿ ಜನತಾದಳ ಪರಮಾಗಿರುವ ಸದಸ್ಯರಿಗೂ ಮತದಾನದ ಹಕ್ಕು ನೀಡುವ ಪ್ರಯತ್ನ ಮೇಯರದಾಗಿತ್ತು. ಅದು ಸಂವಿಧಾನ ಬದ್ಧವಾಗಿಲ್ಲೆಂಬ ತಿಳುವಳಿಕೆ ಮೇಯರಿಗೆ ಇದ್ದರೂ ಕೂಡ ಆಡಳಿತ ವ್ಯವಸ್ಥೆಯನ್ನು ತಮ್ಮ ಅಂಕುಶದಲ್ಲಿಟ್ಟುಕೊಳ್ಳುವ ದುರುದ್ದೇಶದಿಂದ ಈ ಪ್ರಯತ್ನ ನಡೆದಿದ್ದೆಂಬುದು ಸ್ಪಷ್ಟ. ಇಂಥ ಸಂವಿಧಾನ ವಿರೋಧಿ ಕ್ರಮಗಳನ್ನು ರಾಜ್ಯ ಸರಕಾರ ಅನುಮೋದಿಸುತ್ತಿರುವುದು ಖಂಡನೀಯ.

ಅಧಿಕಾರ ವಿಕೇಂದ್ರೀಕರಣದ ಹೆಸರಿನಲ್ಲಿ ಚುನಾಯಿತ ಸದಸ್ಯರೆಲ್ಲ ಸರ್ವತಂತ್ರ ಸ್ವತಂತ್ರರಾಗಿ ವರ್ತಿಸುತ್ತಿರುವುದು, ನಾಗರೀಕರ ಹಣವನ್ನು ಪೋಲು ಮಾಡುತ್ತಿರುವುದು ಖಂಡನೀಯ. ರಾಜ್ಯದ ಕೇಂದ್ರವಾದ ಬೆಂಗಳೂರಿನ ಮಹಾನಗರ ಪಾಲಿಕೆ ಬಹಳ ಮಹತ್ವ ಪಡೆದಿದೆ. ಅದರ ಆಡಳಿತೆ, ಅದರ ಸದಸ್ಯರ ನಡಾವಳಿ ಇತರ ನಗರ ಪಾಲಿಕೆಗಳಿಗೆ ಮಾದರಿಯಾಗ ಬೇಕಾಗಿದೆ, ಆದರ್ಶ ಪ್ರಾಯವಾಗಬೇಕಾಗಿದೆ. ಮೇಯರ್ ಮತ್ತು ಆಯುಕ್ತರ ಮಧ್ಯೆ ಹೊಂದಾಣಿಕೆ ಅಗತ್ಯ. ಇಲ್ಲವಾದಲ್ಲಿ ಪಾಲಿಕೆಯ ನೌಕರರು, ಅಧಿಕಾರಿಗಳ ಮಧ್ಯೆ ಶಿಸ್ತು ಉಳಿಯಲು ಸಾಧ್ಯವಿಲ್ಲ. ಶಿಸ್ತಿನ ಅಭಾವ ಆಡಳಿತೆಯ ಮೇಲೆ ಕೆಟ್ಟ ಪರಿಣಾಮ ಬೀರಿ ಇಡೀ ಆಡಳಿತೆ ಕುಸಿದು ಬಿದ್ದು ಇಡೀ ಬೆಂಗಳೂರು ನಗರದ 50 ಲಕ್ಷ ಜನರಿಗೆ ಅನ್ಯಾಯ ಮಾಡಿದಂತಾಗುತ್ತದೆ. ಆಯುಕ್ತರಲ್ಲಿಯೂ ಸಂಯಮ ಬೇಕು. ಮೇಯರಲ್ಲಿಯೂ ಕಾಯಿದೆ ಕಾನೂನುಗಳ ತಿಳುವಳಿಕೆ ಬೇಕು. ಅವುಗಳ ಆಯಕಟ್ಟಿನೊಳಗೆ ಜನಸೇವೆ ಮಾಡುವ ಪ್ರವೃತ್ತಿ ಬೇಕು, ಅಂಥ ಮಹೋದ್ದೇಶದಿಂದ ಬೆಂಗಳೂರು ನಗರ ಮಹಾಪಾಲಿಕೆಯ ಆಡಳಿತೆ ನಡೆಯಲೆಂದು ನಮ್ಮ ಹಾರೈಕೆ. ○

ಪೆಟ್ರೋಲ್ ಬೆಲೆಏರಿಕೆ ವಿರುದ್ಧ ಪ್ರತಿಭಟನೆ

ಕೇಂದ್ರ ಸರ್ಕಾರ ಸೆಪ್ಟೆಂಬರ್ 2 ರಿಂದ ಪೆಟ್ರೋಲಿಯಂ ಉತ್ಪನ್ನಗಳಾದ ಪೆಟ್ರೋಲ್, ಡೀಸೆಲ್, ಅಡಿಗೆ ಅನಿಲಗಳ ಬೆಲೆ ಏರಿಸಿರುವುದನ್ನು ವಿರೋಧಿಸಿ ರಾಜ್ಯದ ವಿವಿಧೆಡೆಗಳಲ್ಲಿ ನಡೆದ ಪ್ರತಿಭಟನಾ ಕಾರ್ಯಕ್ರಮಗಳು.

ಬೆಂಗಳೂರು:

ಸೆಪ್ಟೆಂಬರ್ 3 ರಂದು ಬೆಂಗಳೂರು ಜಿಲ್ಲಾ ಸಿಪಿಐ(ಎಂ) ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಕೇಂದ್ರ ಅಂಚೆ ಕಛೇರಿಯಿಂದ ಪ್ರತಿಭಟನಾ ಮೆರವಣಿಗೆ ನಡೆಸಿದ ಸಿಪಿಐ(ಎಂ)ನ ನೂರಾರು ಕಾರ್ಯಕರ್ತರು ಪೆಟ್ರೋಲಿಯಂ ಬೆಲೆಯೇರಿಕೆಯನ್ನು ಕೈಬಿಡುವಂತೆ ಒತ್ತಾಯಿಸಿ ರಾಜ್ಯಪಾಲರ ಮೂಲಕ ಕೇಂದ್ರ ಸರಕಾರಕ್ಕೆ ಮನವಿ ಪತ್ರವನ್ನು ಸಲ್ಲಿಸಿದರು.

ಈ ಪ್ರತಿಭಟನಾ ಮೆರವಣಿಗೆಯಲ್ಲಿ ಪಕ್ಷದ ಹಿರಿಯ ಮುಖಂಡರಾದ ಕಾಂ|| ಎನ್.ಕೆ.ಉಪಾಧ್ಯಾಯ, ಆರ್.ಶ್ರೀನಿವಾಸ್, ಇ.ಕೆ.ಎನ್.ರಾಜನ್, ಪಿ.ಜಗನ್ನಾಥ್, ಪಿ.ಕೆ.ಸುಬ್ರಮಣಿ, ಹೆಚ್.ಎಲ್.ಗೋಪಾಲಗೌಡ ಮತ್ತು ಆಟೋ ಚಾಲಕ ಸಂಘದ ಸುಬ್ಬರಾವ್ ಮುಂತಾದವರು ಪಾಲ್ಗೊಂಡು ರಾಜ್ಯಪಾಲರಿಗೆ ಮನವಿ ಸಲ್ಲಿಸಿದರು.

ರೈತ ಸಂಘದ ಖಂಡನೆ

ಸರ್ಕಾರ ಪೆಟ್ರೋಲಿಯಂ ಬೆಲೆ ಏರಿಸಿರುವುದರಿಂದ ಜನಸಾಮಾನ್ಯರು ಹಾಗೂ ರೈತರು ಮತ್ತಷ್ಟು ಸಂಕಷ್ಟಕ್ಕೆ ಸಿಲುಕಿದ್ದಾರೆ. ಕೂಡಲೇ ಬೆಲೆ ಏರಿಕೆಯನ್ನು ವಾಪಸ್ಸು ಪಡೆಯಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘದ ಬೆಂಗಳೂರು ಜಿಲ್ಲಾ ಸಮಿತಿ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆ.

ಗುಲ್ಬರ್ಗ:

ರೈಲು ತಡೆ: ಕೇಂದ್ರ ಸರ್ಕಾರ ಪೆಟ್ರೋಲ್ ಬೆಲೆ ಏರಿಸುವುದನ್ನು ವಿರೋಧಿಸಿ ಸಿಪಿಐ(ಎಂ) ಗುಲ್ಬರ್ಗಾ ಜಿಲ್ಲಾ ಸಮಿತಿಯು ರೈಲು ತಡೆ ಮಾಡುವ ಮೂಲಕ ಪ್ರತಿಭಟನೆಯನ್ನು ವ್ಯಕ್ತಪಡಿಸಿತು.

ಕಾಳಸಂತೆಯ ಕಪ್ಪು ಹಣವನ್ನು ಬಯಲಿಗೆಳೆಯುವ ಬದಲು, ಶ್ರೀಮಂತರಿಂದ ಸರಿಯಾಗಿ ಕರ ವಸೂಲು ಮಾಡುವ ಬದಲಿಗೆ ದೇಶದ ಜನ ಸಾಮಾನ್ಯರ ಕಿಸೆಯನ್ನು ಕತ್ತರಿಸಿದೆ ಎಂದು ಜಿಲ್ಲಾ ಕಾರ್ಯದರ್ಶಿ ಮಾರುತಿ ಮಾನ್ಪಡೆ ಹೇಳಿದರು.

ಬಾಂಬೆ-ಮದ್ರಾಸ್ ಮೇಲ್ ರೈಲನ್ನು ಅರ್ಧ ಗಂಟೆಗೂ ಹೆಚ್ಚು ಕಾಲ ತಡೆದು ಪ್ರತಿಭಟಿಸಿದ ಸಿಪಿಐ(ಎಂ)ನ ನೂರಾರು ಕಾರ್ಯಕರ್ತರು "ಚಿದಂಬರಂ ಕ್ಯಾ ಕರೇಗ" "ದೇಶ್ ಕೋ ಸತ್ಯನಾಶ್ ಕರೇಗ" ಎಂಬ ಘೋಷಣೆಗಳನ್ನು ಕೂಗುತ್ತಿದ್ದರು.

ಪ್ರತಿಭಟನಾಕಾರರನ್ನುದ್ದೇಶಿಸಿ ಕಾಂ|| ಮೇಘರಾಜ ಕಠಾರೆ, ನೀಲಾ.ಕೆ ಮತ್ತು ಅಂಗನವಾಡಿ ಸಂಘಟನೆಯ ಎಸ್.ವರಲಕ್ಷ್ಮಿ ಮಾತನಾಡಿ ಕೂಡಲೇ ಬೆಲೆ ಏರಿಕೆಯನ್ನು ವಾಪಸ್ಸು ಪಡೆಯಬೇಕೆಂದು ಒತ್ತಾಯಿಸಿದರು.

ಮಂಗಳೂರು:

ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಸದೆ, ತೈಲನಿಧಿ ಕೊರತೆ ತುಂಬಲು ಸಮರ್ಪಕವಾದ ಪರ್ಯಾಯಗಳನ್ನು ಸಿಪಿಐ(ಎಂ) ಪಕ್ಷ ಕೇಂದ್ರ ಸರ್ಕಾರದ ಮುಂದಿಟ್ಟರು ಅದನ್ನು ಪರಿಗಣಿಸದೇ ಬೆಲೆ ಏರಿಕೆಯಂತಹ ದಾಳಿಯನ್ನು ಸಾಮಾನ್ಯರ ಮೇಲೆ ನಡೆಸಿರುವುದರಿಂದ ಪ್ರಯಾಣ ದರ ಮತ್ತು ಎಲ್ಲಾ ಅವಶ್ಯಕ ವಸ್ತುಗಳ ಮೇಲೆ ಭಾರಿ ಪರಿಣಾಮ ಬೀರುವುದರಿಂದ ಪಕ್ಷದ ಎಲ್ಲಾ ಘಟಕಗಳು ಪ್ರತಿಭಟಿಸಬೇಕೆಂದು ದ.ಕನ್ನಡ ಜಿಲ್ಲಾ ಸಮಿತಿಯು ಪ್ರತಿಭಟನೆಗೆ ಕರೆ ನೀಡಿದೆ.

ಹುಬ್ಬಳ್ಳಿ:

ಸಿಪಿಐ(ಎಂ) ಇತರ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಸಾಮೂಹಿಕ ಸಂಘಟನೆಗಳ ಮತ್ತು ವ್ಯಾಪಕ ಜನಾಭಿ ಪ್ರಾಯವನ್ನು ಧಿಕ್ಕರಿಸಿ ಸಂಯುಕ್ತ ರಂಗ ಸರಕಾರವು ಈ ತಿಂಗಳ ಪ್ರಾರಂಭದಿಂದ ಡಿಸೇಲ್, ಅಡಿಗೆ ಅನಿಲ, ಪೆಟ್ರೋಲಿಯಂ ಬೆಲೆಗಳನ್ನು ಗಣನೀಯವಾಗಿ ಏರಿಸಿದು ದನ್ನು ಪ್ರತಿಭಟಿಸಿ ಸಿಪಿಐ(ಎಂ) ಧಾರವಾಡ ಜಿಲ್ಲಾ ಸಮಿತಿಯು ಆಶ್ರಯದಲ್ಲಿ ಹುಬ್ಬಳ್ಳಿಯ ತಾಲ್ಲೂಕು ಅಫೀಸಿನ ಮುಂದೆ ಈ ದಿನ ಸಂಜೆ ಮತ ಪ್ರದರ್ಶನ ನಡೆಸಲಾಯಿತು.

ಸ್ಥಳೀಯ ತೆರಿಗೆಗಳು ಸೇರಿದಂತೆ ಡಿಸೇಲ್, ಅಡಿಗೆ ಅನಿಲ ಮತ್ತು ಪೆಟ್ರೋಲ್ ಬೆಲೆಗಳಲ್ಲಿ ಅನುಕ್ರಮವಾಗಿ ಶೇಕಡಾ 34, ಶೇ 23, ಶೇ 13.6 ರಷ್ಟು ಬೆಲೆಯೇರಿಕೆಯಾಗಿದ್ದು, ಮುಂದಿನ ದಿನಗಳಲ್ಲಿ ರಸ್ತೆ ಮತ್ತು ರೈಲು ಪ್ರಯಾಣ ಹಾಗೂ ಸಾರಿಗೆಯ ವೆಚ್ಚ ಹೆಚ್ಚಾಗಿ ಜೀವನಾವಶ್ಯಕ ವಸ್ತುಗಳ ಬೆಲೆಗಳು ಬಿರುಗಾಳಿಯಂತೆ ಏರಲಿದ್ದು, ಬಡ ಕಾರ್ಮಿಕರು, ರೈತರ ಜೀವನಾವಶ್ಯಕ ತೀವ್ರ ಕಷ್ಟ ನಷ್ಟಗಳಿಗೆ ಒಳಗಾಗುವರೆಂದು ಸಿಪಿಐ(ಎಂ) ತೀವ್ರ ಆತಂಕ ವ್ಯಕ್ತಪಡಿಸಿದೆ. ಪೆಟ್ರೋಲಿಯಂ ಪದಾರ್ಥಗಳ ಬೆಲೆ ಏರಿಕೆಯ ಬದಲು ಸಿಪಿಐ(ಎಂ) ಕಳೆದ 5-6 ತಿಂಗಳುಗಳಿಂದ ಸೂಕ್ತ ಪರ್ಯಾಯ ಮಾರ್ಗೋಪಾಯಗಳನ್ನು ಸಂಯುಕ್ತ ರಂಗದ ಚಾಲನಾ ಸಮಿತಿಯಲ್ಲಿ ಸೂಚಿಸಿದ್ದು, ಅವುಗಳನ್ನು ಪರಿಶೀಲಿಸಿ ಕೂಡಲೇ ಜಾರಿಗೊಳಿಸಬೇಕೆಂದು ಒತ್ತಾಯಿಸಿದೆ. ಈ ಕುರಿತು ಪ್ರಧಾನ ಮಂತ್ರಿಗಳಿಗೆ ಲಿಖಿತ ಮನವಿಯನ್ನು ಸಿಪಿಐ(ಎಂ) ಧಾರವಾಡ ಜಿಲ್ಲಾ ಸಮಿತಿ ಕಾರ್ಯದರ್ಶಿ ನಿತ್ಯಾನಂದ ಸ್ವಾಮಿಯವರು ತಹಶೀಲ್ದಾರರ ಮುಖಾಂತರ ಸಲ್ಲಿಸಿದರು.

ಪ್ರತಿಭಟನಾ ಪ್ರದರ್ಶನದಲ್ಲಿ ಸಿಪಿಐ (ಎಂ) ಧಾರವಾಡ ಜಿಲ್ಲಾ ಸಮಿತಿಯ ಸದಸ್ಯರಾದ ಸಿ.ಆರ್.ಭಟ್, ಎಂ.ಬಿ.ಕಟ್ಟಿ, ಡಿ.ಜಿ.ಗೋಂದಕರ್, ವಿವಿಧ ಸಾಮೂಹಿಕ ಸಂಘಟನೆಗಳ ಮುಖಂಡರಾದ ಹರಿದಾಸ, ಮಹೇಶ್ ಪತ್ತಾರ, ಕೆ.ವಿ.ಜೋಶಿ, ಡಿ.ಎಂ.ದೊಡ್ಡಮನಿ, ಎ.ಎ. ಮುಲ್ಲಾ, ಹುಸೇನ ಬಿ.ಗಿರಣಿ ಹಾಗೂ ಪಕ್ಷದ ಸದಸ್ಯರು ಹಾಗೂ ಹಿತೈಷಿಗಳು ಭಾಗವಹಿಸಿದ್ದರು.

ಚಿಂತಾಮಣಿಯಲ್ಲಿ ಗಲಭೆ ಸಿಪಿಐ(ಎಂ) ಖಂಡನೆ


ಚಿಂತಾಮಣಿಯ ಸಮೀಪದ ಬೆಲ್ಲಂಡಹಳ್ಳಿಯಲ್ಲಿ ದಲಿತ ಕಲಾ ಮಂಡಳಿಯ ಶಾಖೆಯ ಆರಂಭ ಹಾಗೂ ಅಂಬೇಡ್ಕರ್ ದಿನಾಚರಣೆಯನ್ನು ತಡೆಯುವ ಸಂಬಂಧದಲ್ಲಿ ಮೂರು ಜನ ಪೋಲೀಸರ ಹಾಗೂ ಒಬ್ಬ ನಾಗರೀಕನ ಹತ್ಯೆಯನ್ನು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಸೆಪ್ಟೆಂಬರ್ 2 ರಂದು ನೀಡಿದ ಪತ್ರಿಕಾ ಹೇಳಿಕೆಯೊಂದರಲ್ಲಿ ತೀವ್ರವಾಗಿ ಖಂಡಿಸಿದೆ.

ಈ ಸಂದರ್ಭದಲ್ಲಿ ಪೋಲೀಸ್ ಆಡಳಿತ ವ್ಯವಸ್ಥೆ ಮುನ್ನೆಚ್ಚರಿಕೆ ತೆಗೆದುಕೊಳ್ಳದೆ ಹಾಗೂ ಅಂದಿನ ಕಾರ್ಯಕ್ರಮಕ್ಕಿರುವ ವಿರೋಧವನ್ನು ತಿಳಿಗೊಳಿಸುವ ಪ್ರಯತ್ನ ಮಾಡದೆ ಪರಿಸ್ಥಿತಿಯ ಗಂಭೀರತಗೆ ತಕ್ಕ ಸಿದ್ಧತೆ ಮಾಡಲು ಬೇಜವಾಬ್ದಾರಿಯಿಂದ ವರ್ತಿಸಿದೆ. ಅದರಲ್ಲಿಯೂ ಪೋಲೀಸರು ಆ ಘಟನೆ ಮೂಡಿಸಿರುವ ಪ್ರಕ್ಷುಬ್ಧ ಮಾನಸಿಕ ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಳ್ಳದೇ ಹೋದದ್ದು, ದುರದೃಷ್ಟಕರ ಎಂದು ಸಿಪಿಐ(ಎಂ) ಖೇದ ವ್ಯಕ್ತಪಡಿಸಿದೆ.

ಇತ್ತೀಚೆಗೆ ಸಾಲು ಸಾಲಾಗಿ ಮೈಸೂರು ಜಿಲ್ಲೆಯ ಉದ್ಭೂರಿನಲ್ಲಿ, ಗುಲ್ಬರ್ಗಾ ಜಿಲ್ಲೆಯ ಮಹಾಪುರದಲ್ಲಿ ಹಾಗೂ ಚಿಂತಾಮಣಿ ನಗರದಲ್ಲಿ ನಡೆದ ಈ ಘಟನೆಗಳನ್ನು ವಿಶ್ಲೇಷಿಸಿದರೆ, ಪ್ರತಿ ಸಣ್ಣ, ದೊಡ್ಡ ಘಟನೆಯಲ್ಲಿ ದಲಿತರು ಹಾಗೂ ದಲಿತೇತರ ಜಾತಿಗಳ ನಡುವೆ ಸಂಘರ್ಷಗಳಾಗಿ ಪರಿವರ್ತಿತವಾಗುತ್ತಿರುವುದನ್ನು ಗಮನಿಸಬಹುದು. ಈ ವಿಭಜನೆ ಒಂದು ಕಡೆ ಎಚ್ಚರಗೊಳ್ಳುತ್ತಿರುವ ಹಾಗೂ ಸಂಘಟನೆ ಹಾಗೂ ಅಭಿವ್ಯಕ್ತಿಯ ಹಕ್ಕನ್ನು ಸ್ಥಾಪಿಸಲು ಪ್ರಯತ್ನಿಸುತ್ತಿರುವ ಶತಮಾನಗಳಿಂದ ತುಳಿತಕ್ಕೊಳಗಾದ ದಲಿತರ ಬಗ್ಗೆ ಮೇಲ್ವರ್ಗಗಳ ಅಸಹನೆಯಿಂದಾಗಿದೆ. ಅವರ ಮೇಲೆ ತಮ್ಮ ರಾಜಕೀಯ ಹಿತಾಸಕ್ತಿಯಿಂದ ಈ ಕಂದರವನ್ನು ಹೆಚ್ಚಿಸಲು ಹಾಗೂ ಸ್ವಾರ್ಥಕ್ಕೆ ಬಳಸಲು ಪ್ರಯತ್ನಿಸುತ್ತಿರುವುದು ಈ ಘಟನೆಗಳ ಹಿನ್ನೆಲೆಯಲ್ಲಿದೆ. ಇದರ ಬಗ್ಗೆ ಇಡೀ ಸಮಾಜ ಹೆಚ್ಚು ಹೆಚ್ಚರಿಕೆಯಿಂದ ಹಾಗೂ ಸಹಾನುಭೂತಿಯಿಂದ ವರ್ತಿಸಬೇಕಾಗಿದೆ ಎಂದು ಸಿಪಿಐ(ಎಂ) ಸಮಿತಿ ಅಭಿಪ್ರಾಯ ಪಟ್ಟಿದೆ.

ಆದರೆ ಅದೇ ಸಮಯದಲ್ಲಿ ದಲಿತ ಸಂಘರ್ಷ ಸಮಿತಿ ಮತ್ತಿತರ ದಲಿತ ಸಂಘಟನೆಗಳು ದಲಿತರನ್ನು ಸಮಾಜದ ಇತರೆಲ್ಲಾ ವಿಭಾಗಗಳಿಂದ ಪ್ರತ್ಯೇಕಿಸಿ, ಪ್ರತ್ಯೇಕ ಗುಂಪಾಗುವಂತೆ ಮಾಡುತ್ತಿರುವುದು, ಈ ಸಂಘಟನೆಗಳ ಕೆಲಸದ ವಿಧಾನ, ನಡುವಳಿಕೆಗಳು, ಪಾಳೆಯಗಾರಿ ಶೋಷಕ ಶಕ್ತಿಗಳಲ್ಲಿ ಮಾತ್ರವೇ ಅಲ್ಲದೆ, ಜನ ಸಾಮಾನ್ಯರಲ್ಲೂ, ಪ್ರಜಾಸತ್ತಾತ್ಮಕ ಶಕ್ತಿಗಳಲ್ಲಿಯೂ ಅಸಹನೆಯನ್ನು ಉಂಟು ಮಾಡುತ್ತಿರುವುದು ರಾಜ್ಯದ ಅನೇಕ ಕಡೆಗಳಲ್ಲಿ ಕಾಣುತ್ತಿದೆ. ಇದರಿಂದ ದಲಿತ ಸಂಘಟನೆಗಳು ಅದರ ವಿವಿಧ ಹಂತದ ನಾಯಕರು, ತಮ್ಮ ಗುರಿ, ಕೆಲಸದ ವಿಧಾನ ಹಾಗೂ ನಡವಳಿಕೆಗಳ ಬಗ್ಗೆ ಪರಿಶೀಲನೆ ನಡೆಸಬೇಕಾಗಿದೆಯೆಂದಿರುವ ಸಿಪಿಐ(ಎಂ) ರಾಜ್ಯ ಸಮಿತಿ ಇಂತಹ ಪರಿಶೀಲನೆ ನಡೆಯದೇ ಹೋದಲ್ಲಿ ಹಾಗೂ ಸೂಕ್ತ ಮಾರ್ಪಾಟುಗಳಾಗದೇ ಹೋದಲ್ಲಿ ದಲಿತ ಜನ ಸಮೂಹಗಳಿಗೇ ಹಾನಿಯುಂಟಾಗುತ್ತದೆ ಎಂದು ಅಭಿಪ್ರಾಯ ಪಟ್ಟಿದೆ. ○

ಅಡ್ವಾಣಿಯವರ ಹತಾಶ ಕುತ್ಸಿತ ಪ್ರಚಾರಕ್ಕೆ ಸೀತಾರಾಮ್ ಯೆಚೂರಿಯವರ ಉತ್ತರ



ಸುಳ್ಳುಗಳು ಆರ್.ಎಸ್.ಎಸ್. ನ ನಿಜ ಸ್ವರೂಪವನ್ನು ಮರೆಮಾಚಬಲ್ಲವೇ?

ಬಿಜೆಪಿ ಅಧ್ಯಕ್ಷ ಎಲ್.ಕೆ.ಅಡ್ವಾಣಿ ದೇಶದಲ್ಲಿ ಅತ್ಯುನ್ನತ ರಾಜಕೀಯ ಆಕಾಂಕ್ಷೆಯನ್ನು ಹೊತ್ತಿರುವ ಒಬ್ಬ ವ್ಯಕ್ತಿ. ಆದರೆ ತನ್ನ ಈ ಮಹತ್ವಾಕಾಂಕ್ಷೆಗೆ ತಕ್ಕುದಲ್ಲದ ಒದರಾಟಕ್ಕೆ ಅವರು ಇಳಿದಿದ್ದಾರೆ. ಕಮ್ಯುನಿಸ್ಟರ ವಿರುದ್ಧ, ಅದರಲ್ಲೂ ವಿಶೇಷವಾಗಿ ಸಿಪಿಐ(ಎಂ)ನ ವಿರುದ್ಧ ನಿಂದನೆಯ ಅಪಪ್ರಚಾರಕ್ಕೆ ಕೈ ಹಾಕಿದ್ದಾರೆ. "ಆರ್ಗನೈಸರ್" ಪತ್ರಿಕೆಯ ಆಗಸ್ಟ್ 17 ರ ಸಂಚಿಕೆಯಲ್ಲಿ ಅವರ ಒಂದು ಲೇಖನ ಪ್ರಕಟವಾಗಿದೆ. "ಕಮ್ಯುನಿಸ್ಟರ ಮಾರಕ ಪಾತ್ರ" ಎನ್ನುವುದು ಅದರ ಶಿರೋನಾಮೆ. ಅದರಲ್ಲಿ ಈಗಾಗಲೇ ಹಲವು ಬಾರಿ ಮಾಡಿರುವ ನಿಂದನೆಗಳ ಸುರಿಮಳೆಯೇ ಆಗಿದೆ. ಇಂತಹ ಹತಾಶ ಒದರಾಟ ಏಕೆ ಎಂದು ಅರ್ಥ ಮಾಡಿಕೊಳ್ಳುವುದು ಕಷ್ಟವೇನಲ್ಲ. ಏಕೆಂದರೆ ಸಿಪಿಐ(ಎಂ) ಜನಗಳನ್ನು ಧರ್ಮನಿರಪೇಕ್ಷತೆಯ ರಕ್ಷಣೆಗಾಗಿ ಅಣಿನೆರೆಸುವಲ್ಲಿ ಅವ್ಯಾಹತವಾಗಿ ತೊಡಗಿದೆ. ಇದುವರೆಗೆ ಕೋಮುವಾದಿ ಶಕ್ತಿಗಳ ವಿರುದ್ಧ ಭಾರತೀಯ ಜನತೆ ಸಾಧಿಸಿದ ಮುನ್ನಡೆ ಬಿಜೆಪಿ ಮುಖಂಡರನ್ನು ಹತಾಶಗೊಳಿಸಿದೆ.

ಅಡ್ವಾಣಿಯವರ ಈ ಲೇಖನದಲ್ಲಿ ವ್ಯಕ್ತಪಡಿಸಿರುವ ತಕ್ಕುತನದಲ್ಲಿ ಮೂರು ಅಂಶಗಳು ಎದ್ದು ಕಾಣುತ್ತವೆ - 1. ಕ್ವಿಟ್ ಇಂಡಿಯಾ ಆಂದೋಲನಕ್ಕೆ ಕಮ್ಯುನಿಸ್ಟರು ವಿಶ್ವಾಸಘಾತ ಮಾಡಿರುವ 2. ಕಮ್ಯುನಿಸ್ಟರು ತುರ್ತು ಪರಿಸ್ಥಿತಿಯನ್ನು ಬೆಂಬಲಿಸಿ ಪ್ರಜಾಪ್ರಭುತ್ವಕ್ಕೆ ವಿಶ್ವಾಸಘಾತ ಮಾಡಿದರು. ಇದರಲ್ಲಿ ಸಿಪಿಐ(ಎಂ) ನಿಷ್ಕ್ರಿಯವಾಗಿ ಒಪ್ಪಿಗೆ ನೀಡಿತು 3. ಬಿಜೆಪಿ ಬಗ್ಗೆ ಕಮ್ಯುನಿಸ್ಟರ ವಿರೋಧ ಕೇವಲ ತಮ್ಮ ಉಳಿವು ಹಾಗೂ ಸ್ವಯಂ ಪೋಷಣೆಗಾಗಿ"

ಈ ಪ್ರತಿಯೊಂದನ್ನೂ ಪರೀಕ್ಷಿಸೋಣ ಮೊದಲಿಗೆ ಒಂದಂಶವನ್ನು ಹೇಳಲೇಬೇಕು. ಅದೇನೆಂದರೆ ಸ್ವಾತಂತ್ರ್ಯ ಹೋರಾಟದಲ್ಲಿ ಕಮ್ಯುನಿಸ್ಟರ ಪಾತ್ರವೇನು ಎಂಬುದನ್ನು ತೋರಿಸುವ ದಸ್ತಾವೇಜುಗಳು ಬಹಳಷ್ಟಿವೆ. ಆದ್ದರಿಂದ ಯಾವುದೇ ಕುತ್ಸಿತ ಪ್ರಚಾರದಿಂದಲೂ ಅದನ್ನು ನಿರಾಕರಿಸಲಾಗದು. ವಾಸ್ತವ ಸಂಗತಿಯೆಂದರೆ ಸಂಪೂರ್ಣ ಸ್ವಾತಂತ್ರ್ಯದ ಘೋಷಣೆಯನ್ನು ಮೊದಲು ಎತ್ತಿದವರು ಕಮ್ಯುನಿಸ್ಟರು. ಅಸಂಖ್ಯ ಕಮ್ಯುನಿಸ್ಟರು ಸ್ವಾತಂತ್ರ್ಯಕ್ಕಾಗಿ ತಮ್ಮ ಜೀವವನ್ನೇ ಬಲಿದಾನ ಮಾಡಿದರು. ಇನ್ನೂ ಹಲವರು ಅಂಡಮಾನ್ ಸೆಲ್ಯುಲರ್ ಜೈಲಿನಲ್ಲಿ ತಮ್ಮ ಬದುಕು ಕಳೆಯಬೇಕಾಗಿ ಬಂತು. ಆದರೆ ಈ ಐತಿಹಾಸಿಕ ಸಂಗತಿಗಳು ಇತಿಹಾಸ ಮತ್ತು ವಾಸ್ತವತೆಯನ್ನು ವಿಕೃತಗೊಳಿಸುವುದರ ಮೇಲೆಯೇ ಯಾರ ರಾಜಕೀಯ ಆಕಾಂಕ್ಷೆಗಳು ನಿಂತಿವೆಯೋ ಅಂತಹವರಿಗೆ ಕಾಣದಿದ್ದರೆ ಅದರಲ್ಲಿ ಆಶ್ಚರ್ಯವೇನು?

ನಿಜವಾದ ವಿಶ್ವಾಸ ಘಾತುಕರು ಯಾರು?

ಎರಡನೇ ಮಹಾಯುದ್ಧದ ವೇಳೆಯಲ್ಲಿ, ಇಡೀ ವಿಶ್ವದ ಜನಗಳು ಫ್ಯಾಸಿಸಂ ಎದುರು ಸೆಟೆದು ನಿಂತಿದ್ದಾಗ ಈ ಯುದ್ಧದ ಫಲಿತಾಂಶ ಭಾರತೀಯ ಜನರ ಸ್ವಾತಂತ್ರ್ಯ ಸಂಗ್ರಾಮದ ಮೇಲೆ ನಿರ್ಣಾಯಕ ಪ್ರಭಾವ ಬೀರಲಿದೆ ಎಂದು ಕಮ್ಯುನಿಸ್ಟರು ಮಾತ್ರವಲ್ಲ ಜವಾಹರಲಾಲ್ ನೆಹರೂರಂತಹ ಕಾಂಗ್ರೆಸ್ ಮುಖಂಡರ ಅರಿವಿಗೂ ಬಂದಿತ್ತು. ಅಂತರ್ರಾಷ್ಟ್ರೀಯ ರಂಗದಲ್ಲಿ ಫ್ಯಾಸಿಸಂನ್ನು ಸೋಲಿಸಲು ಎಲ್ಲರನ್ನು ಅಣಿನೆರೆಸುವ ಪ್ರಯತ್ನ ನಡೆಯಬೇಕಾಗಿತ್ತು. ಅದರಲ್ಲಿ ಬ್ರಿಟಿಶರದ್ದೂ ಒಂದು ಮಿತ್ರ ಶಕ್ತಿಯಾಗಿತ್ತು. ಅದೇ ವೇಳೆಗೆ ರಾಷ್ಟ್ರಮಟ್ಟದಲ್ಲಿ ಬ್ರಿಟಿಶರಿಂದ ಭಾರತೀಯ ಜನತೆಯ ಸ್ವಾತಂತ್ರ್ಯಕ್ಕಾಗಿ ಹೋರಾಟವನ್ನು ತೀವ್ರಗೊಳಿಸಬೇಕಾಗಿತ್ತು. ಈ ಎರಡು ಹೋರಾಟಗಳನ್ನು ಸಮ್ಮಿಳಿತಗೊಳಿಸುವಲ್ಲಿ ಕಮ್ಯುನಿಸ್ಟರು ಕೆಲವು ಕಡೆ ಎಡವಿದರು, ನಿಜ. ಇದನ್ನು ಕಮ್ಯುನಿಸ್ಟರು ಆಗಿನಿಂದಲೇ ಒಪ್ಪಿಕೊಂಡಿದ್ದಾರೆ, ಅಷ್ಟೇ ಅಲ್ಲ, ಮತ್ತೆ-ಮತ್ತೆ ಸ್ಪಷ್ಟಪಡಿಸಿದ್ದಾರೆ.

ಹಾಗಿದ್ದಾಗ್ಯೂ 1942 ರಲ್ಲಿ ಕಮ್ಯುನಿಸ್ಟರ ಪಾತ್ರ ಇತಿಹಾಸದಿಂದ ಅಳಿಸಿಹಾಕಲಾರದ ಒಂದು ಪಾತ್ರ. ನಿಜ ಸಂಗತಿಯೆಂದರೆ 1942 ರ ಸಮರದ ಹಲವಾರು ವೀರರು ಕಮ್ಯುನಿಸ್ಟರೊಂದಿಗೆ ನಿಕಟ ಸಹಯೋಗ ಹೊಂದಿದ್ದವರು. ಇವರಲ್ಲಿ ಗಮನಾರ್ಹರಾದವರೆಂದರೆ ಭಾರತ ರತ್ನ ಅರುಣಾ ಆಸಫ್ ಆಲಿ. ಬಹುಶಃ ಇಲ್ಲಿ ಆಗಸ್ಟ್ 8, 1992 ರಂದು ಕ್ವಿಟ್ ಇಂಡಿಯಾ ಆಂದೋಲನದ 50ನೇ ವಾರ್ಷಿಕೋತ್ಸವದ ಮುನ್ನಾದಿನ ಸಂಸತ್ತಿನ ಕೇಂದ್ರ ಸಭಾಂಗಣದಲ್ಲಿ ಮಾಡಿದ ರಾಷ್ಟ್ರಪತಿ ಡಾ|| ಶಂಕರ್ ದಯಾಳ್ ಶರ್ಮರವರ ಭಾಷಣದಲ್ಲಿ ಬಂದ ಈ ಉದ್ಗಾರವನ್ನು ಉಲ್ಲೇಖಿಸುವುದು ಸೂಕ್ತ

- "ಕಾನ್ಪುರ, ಜಮ್‌ಶೆಡ್ ಪುರ ಮತ್ತು ಅಹಮದಾಬಾದ್‌ಗಳಲ್ಲಿ ವ್ಯಾಪಕ ರೀತಿಯ ಮುಷ್ಕರಗಳ ನಂತರ ಸೆಪ್ಟೆಂಬರ್ 5, 1942 ರಂದು ದಿಲ್ಲಿಯಿಂದ ಲಂಡನ್ನಿನಲ್ಲಿದ್ದ ಗೃಹ ಕಾರ್ಯದರ್ಶಿಯೊಂದಿಗೆ ಕಳಿಸಿದ ತಂತಿ ಸಮಾಚಾರ ಭಾರತ ಕಮ್ಯುನಿಸ್ಟ್ ಪಾರ್ಟಿಯನ್ನು ಕುರಿತಂತೆ ಅದರ ಬಹಳಷ್ಟು ಸದಸ್ಯರ ವರ್ತನೆಯಿಂದ ಆ ಪಕ್ಷ ಬ್ರಿಟಿಶ್ - ವಿರೋಧಿ ಕ್ರಾಂತಿಕಾರಿಗಳಿಂದ ಕೂಡಿದೆ ಎಂಬ ಈಗಾಗಲೇ ಸ್ಪಷ್ಟವಾಗಿರುವ ಸಂಗತಿಯನ್ನು ಸಾಬೀತುಪಡಿಸಿದೆ"- ಎಂದು ವರದಿ ಮಾಡಿತ್ತು.

ಇದಕ್ಕೆ ತದ್ವಿರುದ್ಧವಾದ ಪಾತ್ರವನ್ನು ಆರ್.ಎಸ್.ಎಸ್. ಆ ಅವಧಿಯಲ್ಲಿ ವಹಿಸಿತ್ತು. ಮುಂಬೈ ಗೃಹ ಇಲಾಖೆ 1947 ರಲ್ಲಿ ಗಮನಿಸಿದ ಸಂಗತಿಯಿದು

-"ಸಂಘ ಅತ್ಯಂತ ಜಾಗರೂಕತೆಯಿಂದ ಕಾನೂನಿನ ಮಿತಿಯೊಳಗೆ ತನ್ನನ್ನು ಇರಿಸಿಕೊಂಡಿದೆ. ವಿಶೇಷವಾಗಿ ಆಗಸ್ಟ್ 1942 ರಲ್ಲಿ ಭುಗಿಲೆದ್ದ ಗಲಭೆಗಳಲ್ಲಿ ಭಾಗವಹಿಸದೆ ದೂರ ನಿಂತಿತು'!

ಆರ್.ಎಸ್.ಎಸ್. ನ ಪ್ರಮುಖ ನೇತಾರರಲ್ಲಿ ಒಬ್ಬರಾದ ನಾನಾಜಿ ದೇಶ್ ಮುಖ್‌ರವರೂ ಕೂಡಾ ಒಂದು ಬಾರಿ "ಆರ್.ಎಸ್.ಎಸ್. ಒಂದು ಸಂಘಟನೆಯಾಗಿ ಏಕೆ ವಿಮೋಚನಾ ಹೋರಾಟದಲ್ಲಿ ಭಾಗವಹಿಸಲಿಲ್ಲ?" ಎಂಬ ಪ್ರಶ್ನೆಯನ್ನೆತ್ತಿದ್ದರು. ಹೀಗಿರುವಾಗ ಶ್ರೀಯುತ ಅಡ್ವಾಣಿಯವರೇ, ಸ್ವಾತಂತ್ರ್ಯ ಹೋರಾಟಕ್ಕೆ ವಿಶ್ವಾಸಘಾತ ಬಗೆದ ಜನರು ನಿಜವಾಗಿ ಯಾರು?

ರಣಹೇಡಿಗಳ ಸರ್ಟಿಫಿಕೇಟ್ ಕಮ್ಯುನಿಸ್ಟರಿಗೆ ಬೇಕಿಲ್ಲ

ಕಮ್ಯುನಿಸ್ಟರ ಶೌರ್ಯ, ಅತ್ಯುನ್ನತ ತ್ಯಾಗ-ಬಲಿದಾನಗಳ ಅಸಂಖ್ಯ ಉದಾಹರಣೆಗಳಿವೆ. ಆದರೆ ಜನವರಿ 26, 1974 ರಲ್ಲಿ ಬ್ಲಿಟ್ಜ್ ಪ್ರತಿಕೆ ಪ್ರಕಟಿಸಿದ ಈ ಒಂದು ವರದಿಯನ್ನು ನೆನಪಿಸಿಕೊಳ್ಳಿ

-"ಅಟಲ್ ಬಿಹಾರಿ ವಾಜಪೇಯಿ 1942 ರ ಸ್ವಾತಂತ್ರ್ಯ ಹೋರಾಟದಲ್ಲಿ ತನ್ನ ಕ್ರಾಂತಿಕಾರಿ ಸಹಯೋಗಿಗಳಿಗೆ ವಿಶ್ವಾಸಘಾತ ಬಗೆದು ಅವರ ಹೆಸರುಗಳನ್ನು ಪೋಲೀಸರಿಗೆ ತಿಳಿಸಿ, ಜೈಲಿನಿಂದ ಹೊರಬರಲು ಕ್ಷಮೆ ಕೇಳಿದ್ದರು"- ಎಂದು ಆ ವರದಿ ಹೇಳಿತ್ತು.

ಆ ಇಡೀ ಘಟನೆ ಹಾಗೂ ಅದರ ಕೋರ್ಟ್ ಕಲಾಪಗಳ ವಿವರಗಳನ್ನು ನೀಡಿದ್ದ ಈ ವರದಿ ಈ ಶಾಮೀಲಿನ ಪಾತ್ರವನ್ನು ಬಯಲಿಗೆಳೆದಿತ್ತು. ನಾನಾಜಿ ದೇಶಮುಖ್ ಮತ್ತು ಇತರ ಆರ್.ಎಸ್.ಎಸ್. ಮಂದಿ ಈ ವರದಿಯ ವಿರುದ್ಧ ನ್ಯಾಯಾಲಯದಲ್ಲಿ ದಾವೆ ಹೂಡಿದ್ದರು. ನ್ಯಾಯಾಲಯ ಆ ಮೊಕದ್ದಮೆಯನ್ನು ವಜಾ ಮಾಡಿತು. ವಾಜಪೇಯಿಯವರು ಈ ವಿಷಯದಲ್ಲಿ ತನ್ನನ್ನು ಸಮರ್ಥಿಸಿಕೊಳ್ಳಲೂ ಪ್ರಯತ್ನಿಸಲಿಲ್ಲ, ಮಾನನಷ್ಟ ಮೊಕದ್ದಮೆಯನ್ನೂ ಹಾಕಲಿಲ್ಲ.

ಇಡೀ ಸ್ವಾತಂತ್ರ್ಯ ಹೋರಾಟದಿಂದ ದೂರ ನಿಂತ ಇಂತಹ ಶಕ್ತಿಗಳಿಂದ ಕಮ್ಯುನಿಸ್ಟರಿಗೆ ಸರ್ಟಿಫಿಕೇಟ್‌ಗಳೇನೂ ಬೇಕಿಲ್ಲ. ಅಂಡಮಾನ್ ಸೆಲ್ಯೂಲರ್ ಜೈಲಿನಲ್ಲಿ ಜೀವಾವಧಿ ಶಿಕ್ಷೆಗೊಳಗಾದ ಭಗತ್ ಸಿಂಗ್‌ರ ಇಬ್ಬರು ನಿಕಟ ಸಹಯೋಗಿಗಳಾದ ಪಂಡಿತ್ ಕಿಶೋರಿ ಲಾಲ್ ಮತ್ತು ಕಾಂ|| ಶಿವವರ್ಮ ಕೊನೆಯುಸಿರಿರುವರೆಗೂ ಸಿಪಿಐ(ಎಂ)ನ ಪ್ರಮುಖ ಸದಸ್ಯರಾಗಿ ಸೇವೆ ಸಲ್ಲಿಸಿದರು ಎಂಬ ಬಗ್ಗೆ ನಮಗೆ ಸಹಜವಾಗಿಯೇ ಹೆಮ್ಮೆಯಿದೆ. ಅದೇ ಹೆಮ್ಮೆ ಆಝಾದ್ ಹಿಂದ್ ಸೇನೆಯ ಝಾನ್ಸಿ ರಾಣಿ ರೆಜಿಮೆಂಟಿನ ಕ್ಯಾಪ್ಟನ್ ಡಾ|| ಲಕ್ಷ್ಮಿಸೆಹಗಲ್ ಅವರ ಬಗೆಗೂ ನಮಗಿದೆ. ಅವರು ಈಗಲೂ ಸಿಪಿಐ(ಎಂ) ನ ಉತ್ತರ ಪ್ರದೇಶ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಆದರೆ ಸ್ವಾತಂತ್ರ್ಯ ಹೋರಾಟದ ಉದ್ದಕ್ಕೂ ಆರ್.ಎಸ್.ಎಸ್. ಮತ್ತು ಕೋಮುವಾದಿ ಶಕ್ತಿಗಳು ಮಾತ್ರ ಅದು 'ಹಿಂದೂ ರಾಷ್ಟ್ರ' ಸ್ಥಾಪಿಸುವ ತಮ್ಮ ಗುರಿಯಿಂದ ತಮ್ಮನ್ನು ಬೇರೆಡೆ ಸೆಳೆಯುವ ದಾರಿ ಎಂದು ಬಗೆದರು. ತಮ್ಮ ಗುರಿ ಸಾಧಿಸಬೇಕಾದರೆ ಅವರು ಮುಸಲ್ಮಾನರ ಸಮುದಾಯದ ವಿರುದ್ಧ ದ್ವೇಷವನ್ನು ಹರಡಬೇಕಾಗಿತ್ತೇ ಹೊರತು ಬ್ರಿಟಿಶರ ವಿರುದ್ಧ ಅಲ್ಲ. ಬ್ರಿಟಿಶರ ವಿರುದ್ಧ ಹೋರಾಟದಲ್ಲಿ ಎಲ್ಲಾ ಭಾರತೀಯರು, ಜಾತಿ-ಮತದ ಭೇದ-ಭಾವವಿಲ್ಲದೆ ಒಂದಾಗಿದ್ದರು ತಾನೆ? ಅಂತಹ ಹೋರಾಟದಲ್ಲಿ ಆರ್.ಎಸ್.ಎಸ್. ಭಾಗಿಯಾಗುವುದು ಹೇಗೆ? ಸ್ವಾತಂತ್ರ್ಯ ಹೋರಾಟದ ಬಗ್ಗೆ ಅವರಿಗೆ ಎಷ್ಟೊಂದು ವೈರವಿತ್ತೆಂದರೆ ಕಾಂಗ್ರೆಸ್ ಸಂಪೂರ್ಣ ಸ್ವಾತಂತ್ರ್ಯದ ಘೋಷಣೆಯನ್ನು ಅಂಗೀಕರಿಸಿ 1930ರ ಜನವರಿ 26 ರನ್ನು ಸ್ವಾತಂತ್ರ್ಯ ದಿನವಾಗಿ ಆಚರಿಸುವುದಾಗಿ ಸಾರಿದಾಗ ಆರ್.ಎಸ್.ಎಸ್. ತನ್ನ ಎಲ್ಲಾ ಘಟಕಗಳಿಗೆ ಒಂದು ಸುತ್ತೋಲೆ ಕಳಿಸಿ "26.1.1930 ರ ಸಂಜೆ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಎಲ್ಲಾ ಶಾಖೆಗಳು ತಂತಮ್ಮ ಸ್ಥಳಗಳಲ್ಲಿ ರ್‍ಯಾಲಿಗಳನ್ನು ನಡೆಸಿ ರಾಷ್ಟ್ರೀಯ ಧ್ವಜ ಅಂದರೆ ಭಗವಾಧ್ವಜವನ್ನು ಪೂಜಿಸಬೇಕು" ಎಂದು ತಿಳಿಸಿತ್ತು. ಹೀಗಿತ್ತು ಅವರ ದೇಶಪ್ರೇಮ! ರಾಷ್ಟ್ರೀಯ ಧ್ವಜದ ಬಗ್ಗೆ ಅವರಿಗಿದ್ದ ಗೌರವ! ಅವರ ಪಾತ್ರ ಎಂತಹದಿತ್ತೆಂದರೆ ಜವಹರ ಲಾಲ್ ನೆಹರೂ ತನ್ನ 'ಡಿಸ್ಕವರಿ ಆಫ್ ಇಂಡಿಯಾ' ದಲ್ಲಿ 'ಈ ಕೋಮುವಾದಿ ಸಂಘಟನೆಗಳು ಮಾತಿನಲ್ಲಿ ಸ್ವಾತಂತ್ರ್ಯದ ಪರವಾಗಿ ನಿಂತರೂ, ಅವರಿಗೆ ತಂತಮ್ಮ ಗುಂಪುಗಳಿಗೆ ರಕ್ಷಣೆ ಅಥವಾ ವಿಶೇಷ ಸೌಕರ್ಯಗಳಲ್ಲೇ ಹೆಚ್ಚು ಆಸಕ್ತಿ. ಇದಕ್ಕಾಗಿ ಅನಿವಾರ್ಯವಾಗಿ ಅವರು ಬ್ರಿಟಿಶ್ ಸರಕಾರದತ್ತವೇ ನೋಡಬೇಕಾಗುತ್ತದೆ. ಆದ್ದರಿಂದ ಅದರೊಡನೆ ಅವರು ತಿಕ್ಕಾಟಕ್ಕೆ ಇಳಿಯಬಯಸುವುದಿಲ್ಲ" ಎಂದು ಗಮನಿಸಬೇಕಾಗಿ ಬಂದಿತ್ತು.

ಪರಮ ನೀಚ ಮಾತು

ಶ್ರೀಯುತ ಅಡ್ವಾಣಿಯವರು ಎಂತಹ ಮಟ್ಟಕ್ಕೆ ಹೋಗುತ್ತಾರೆಂದರೆ ದೇಶದ ವಿಭಜನೆಯಾದದ್ದು ಕಮ್ಯುನಿಸ್ಟರ ನಿಲುವಿನಿಂದಾಗಿ ಎಂಬ ಪರಮ ನೀಚ ಮಾತು ಹೇಳಿದ್ದಾರೆ. ದೇಶದ ವಿಭಜನೆಯ ಬಗ್ಗೆ ಬ್ರಿಟಿಶರ ವಿರುದ್ಧ ಒಂದೇ ಒಂದು ಮಾತಿಲ್ಲ! ತಮ್ಮ ಸಾಮ್ರಾಜ್ಯಶಾಹಿ ಹಿತಾಸಕ್ತಿಗಳಿಗನುಗುಣವಾಗಿ ಹೇಗೆ ಅವರು ದೇಶ ವಿಭಜನೆಯ ತಂತ್ರ ಹೂಡಿದರು ಎಂಬ ಬಗ್ಗೆ ಒಂದೇ ಒಂದು ಮಾತಿಲ್ಲ! ಸಾಮ್ರಾಜ್ಯಶಾಹಿಯ ಈ ಕುತಂತ್ರವನ್ನು ಕೋಮುವಾದಿ ಶಕ್ತಿಗಳು ಉದ್ದೇಶಪೂರ್ವಕವಾಗಿಯೇ ನಿರ್ಲಕ್ಷಿಸುತ್ತವೆ. ಏಕೆಂದರೆ ಹಿಂದುಗಳು ಅಥವಾ ಮುಸ್ಲಿಮರ ವಿರುದ್ಧ ಕೋಮು ಭಾವೋದ್ವೇಗವನ್ನು ಬಡಿದೆಬ್ಬಿಸಿ ಅವರ ರಾಜಕೀಯ ಪ್ರಯೋಜನ ಗಿಟ್ಟಿಸುವುದೇ ಅವರ ಗುರಿ.

ತನ್ನ ಅನುಯಾಯಿಗಳ ಸಂಖ್ಯೆ ಭಾರೀ ದೊಡ್ಡದು ಎನ್ನುವ ಆರ್.ಎಸ್.ಎಸ್. ದೇಶದ ವಿಭಜನೆಯನ್ನು ತಡೆಯಲು ಯಾವುದೇ ಪ್ರಯತ್ನ ಏಕೆ ನಡೆಸಲಿಲ್ಲ? ಅದರ ಹಿಂದಿನ ಮುಖ್ಯಸ್ಥ ಬಾಳಾಸಾಹೇಬ್ ದೇವರಸ್ ಆ ಸ್ಥಾನ ವಹಿಸಿಕೊಂಡ ತಕ್ಷಣ 'ಆರ್ಗನೈಸರ್' ಪತ್ರಿಕೆಯಲ್ಲಿ ನೀಡಿದ ಸಂದರ್ಶನದಲ್ಲಿ ನಿಜ ಉದ್ದೇಶವನ್ನು ಮುಚ್ಚಿ ಹಾಕಲು ಪ್ರಯತ್ನಿಸಿದರು. "ಸಂಘದ ಹಿರಿಯ ಕಾರ್ಯಕರ್ತರು ವಿಭಜನೆಯಿಂದ ದೇಶದ ಭವಿಷ್ಯದ ಮೇಲಾಗುವ ಅನಪೇಕ್ಷಿತ ಪರಿಣಾಮಗಳ ಬಗ್ಗೆ ಯೋಚಿಸಿರಲಿಲ್ಲ ಎಂದು ನೇರವಾಗಿ ಒಪ್ಪಿಕೊಳ್ಳಲೇಬೇಕು. ಸಂಘ ಅದನ್ನು ತಡೆಯಲು ಯೋಜನೆಯನ್ನು ತಯಾರಿಸಿರಲಿಲ್ಲ. ನಾವು ಚಕಿತರಾಗುವಂತಾಯಿತು. ಸಮಗ್ರ ಯೋಜನೆಯಲ್ಲಿ ನಾವು ಹಿಂದೆ ಬಿದ್ದೆವು ಎಂದೂ ಹೇಳಬಹುದು" ಎಂದಿದ್ದರು ಅವರು (ಡಿ.ಆರ್.ಗೋಯಲ್‌ರವರ ಪುಸ್ತಕ 'ರಾಷ್ಟ್ರೀಯ ಸ್ವಯಂ ಸೇವಕ ಸಂಘ' ದಿಂದ ಉದ್ಧೃತ ಇತರ ಕೆಲವು ಉದ್ಧರಣೆಗಳೂ ಅದೇ ಪುಸ್ತಕದಿಂದ ಆಯ್ದುಕೊಂಡಿವೆ)

ದೇಶದ ಸ್ವಾತಂತ್ರ್ಯವಾಗಲೀ, ಜನಗಳ ಸ್ವಾತಂತ್ರ್ಯವಾಗಲೀ ಕೋಮುವಾದಿ ಶಕ್ತಿಗಳ ಗುರಿಯಾಗಿರಲೇ ಇಲ್ಲ. ತಮ್ಮ ರಾಜಕೀಯ ಸ್ವಾರ್ಥ ಸಾಧಿಸಿಕೊಳ್ಳಲು ಕೋಮು ವಿಷ ಹರಡುವುದೇ ಅವರ ಮುಖ್ಯ ಗುರಿಯಾಗಿತ್ತು. ಇಂತಹ ಕೋಮು ವಿಷವೇ ಕೊನೆಗೆ ಮಹಾತ್ಮ ಗಾಂಧಿಯವರ ಜೀವವನ್ನೇ ಬಲಿತೆಗೆದುಕೊಂಡಿತು.

ಮಹಾತ್ಮ ಗಾಂಧೀಜಿಯ ಕೊಲೆಗಡುಕರು ಇಂದು ಸ್ವಾತಂತ್ರ್ಯ ಹೋರಾಟದ ವಾರಸುದಾರರು ತಾವು ಎಂದು ಹೇಳಿಕೊಳ್ಳುವುದಕ್ಕಿಂತ ದೊಡ್ಡ ವಿಪರ್ಯಾಸ ಏನಿರಲು ಸಾಧ್ಯ? ಅವರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಲಿಲ್ಲ, ಮಾತ್ರವಲ್ಲ ಈಗ ಸ್ವಾತಂತ್ರ್ಯದ ವರ್ಷಗಳಲ್ಲಿ ಭಾರತೀಯ ಜನತೆಯ ಸಾಧನೆಗಳನ್ನು ಕೂಡಾ ನಾಶ ಮಾಡಲು ಅದೇ ಪರಂಪರೆಯ ಮಾತಾಡುತ್ತಿದ್ದಾರೆ. ಕಮ್ಯುನಿಸ್ಟರು ಸದಾ ವಿರೋಧಿಸಿಕೊಂಡು ಬಂದದ್ದು ಈ ದುಷ್ಟ ಪಾತ್ರ ಹಾಗೂ ಇಬ್ಬಂದಿತನವನ್ನೇ. ಮುಂದೆಯೂ ಇದನ್ನು ನಾವು ವಿರೋಧಿಸುತ್ತಲೇ ಇರುತ್ತೇವೆ. ಇದು ಒಂದು ಆಧುನಿಕ ಧರ್ಮನಿರಪೇಕ್ಷ ಭಾರತೀಯ ರಾಷ್ಟ್ರದ ಹಿತಾಸಕ್ತಿಗಳನ್ನು ಕಾಪಾಡಲು ಅಗತ್ಯ. ಜನಗಳ ಮುನ್ನಡೆಗೂ ಅಗತ್ಯ.

ಇಡೀ ಸ್ವಾತಂತ್ರ್ಯ ಹೋರಾಟದಿಂದ ದೂರ ನಿಂತ ಕೋಮುವಾದಿ ಶಕ್ತಿಗಳಿಂದ ಕಮ್ಯುನಿಸ್ಟರಿಗೆ ದೇಶಪ್ರೇಮದ ಸರ್ಟಿಫಿಕೇಟ್‌ಗಳೇನೂ ಬೇಕಿಲ್ಲ.

ತುರ್ತುಪರಿಸ್ಥಿತಿಯಲ್ಲಿ ಮತ್ತೆ ಹೇಡಿತನ

ಈಗ ಅಡ್ವಾಣಿಯವರ ಇನ್ನೊಂದು ಹಾಸ್ಯಾಸ್ಪದ ಆರೋಪವನ್ನು ನೋಡೋಣ. ಸಿಪಿಐ(ಎಂ) ಇಂದಿರಾಗಾಂಧಿಯವರ ತುರ್ತುಪರಿಸ್ಥಿತಿಗೆ 'ಮೌನಸಮ್ಮತಿ' ನೀಡಿತು ಎಂಬುದು ಅವರ ಇನ್ನೊಂದು ಆರೋಪ. ತುರ್ತುಪರಿಸ್ಥಿತಿಯನ್ನು ವಿರೋಧಿಸುವಲ್ಲಿ ಸಿಪಿಐ(ಎಂ) ನ ಪಾತ್ರ, ಅದು ಒಡ್ಡಿದ ಪ್ರತಿರೋಧ, ಎಷ್ಟೊಂದು ಸಿಪಿಐ(ಎಂ) ಕಾರ್ಯಕರ್ತರು ಈ ಇಡೀ ಅವಧಿಯಲ್ಲಿ ಜೈಲುಗಳಲ್ಲಿ ಕಳೆಯಬೇಕಾಯಿತು ಎಂಬುದು ಎಲ್ಲರಿಗೂ ತಿಳಿದ ವಿಷಯ. ಅವನ್ನಿಲ್ಲಿ ಮತ್ತೆ ಹೇಳುವ ಅಗತ್ಯವಿಲ್ಲ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಒಬ್ಬನೇ ಒಬ್ಬ ಸಿಪಿಐ(ಎಂ) ಸದಸ್ಯನೂ ಒತ್ತಡಕ್ಕೆ ಬಲಿಯಾಗಿ ತುರ್ತುಪರಿಸ್ಥಿತಿ ಆಡಳಿತಕ್ಕೆ ಶರಣಾಗಲಿಲ್ಲ. ತದ್ವಿರುದ್ಧವಾಗಿ, ಆರ್.ಎಸ್.ಎಸ್. ಮತ್ತು ಕಾವಿ ಪಡೆಯ ಮಂದಿ ಶ್ರೀಮತಿ ಗಾಂಧಿಯವರೊಡನೆ ಸಮಾಧಾನ ಮಾಡಿಕೊಳ್ಳಲು ಸರ್ವಪ್ರಯತ್ನ ನಡೆಸಿದರು. ಆರ್.ಎಸ್.ಎಸ್. ನ ಮುಖ್ಯಸ್ಥ ದೇವರಸ್‌ರಂತೂ ಜೈಲಿನಿಂದ ಎರಡು ಬಾರಿ ಶ್ರೀಮತಿ ಗಾಂಧಿಗೆ ಪತ್ರ ಬರೆದು ಆರ್.ಎಸ್.ಎಸ್. ಮೇಲಿನ ನಿಷೇಧವನ್ನು ತೆಗೆಯಬೇಕೆಂದು ಕೇಳಿಕೊಂಡರು. ಮಹಾತ್ಮ ಗಾಂಧಿಯವರ ಹತ್ಯೆಯ ಸಮಯದಲ್ಲಿ ಅದರ ಮೇಲೆ ನಿಷೇಧ ಬಂದಾಗಲೂ, ಆರ್.ಎಸ್.ಎಸ್. ಇದೇ ರೀತಿಯ ಮಾತುಕತೆ ನಡೆಸಿತ್ತು. ಹಲವಾರು ಮೋಸದ ರಾಜಿಗಳ ಮೂಲಕ ಅದು ಈ ನಿಷೇಧವನ್ನು ತೆಗೆಸಿತು.

ಅಲಹಾಬಾದ್ ಹೈಕೋರ್ಟ್ ಶ್ರೀಮತಿ ಇಂದಿರಾಗಾಂಧಿಯ ಚುನಾವಣೆಯನ್ನು ರದ್ದು ಮಾಡಿ ತೀರ್ಪಿತ್ತುದರಿಂದ ಅವರು ತುರ್ತುಪರಿಸ್ಥಿತಿಯನ್ನು ಹೇರಿದಾಗ ಇಡೀ ದೇಶ ಅವರಿಗೆ ಎದುರು ಬಿತ್ತು. ಅಂತಹ ಸಮಯದಲ್ಲಿ ಬಾಳಾಸಾಹೇಬ್ ದೇವರಸ್ ಯೆರವಾಡ ಸೆಂಟ್ರಲ್ ಜೈಲಿನಿಂದ 10.11.1975 ರಂದು ಒಂದು ಪತ್ರ ಬರೆದು

"ಕಾನ್ಪುರ, ಜಮ್‌ಶೆಡ್ ಪುರ ಮತ್ತು ಅಹಮದಾಬಾದ್‌ಗಳಲ್ಲಿ ವ್ಯಾಪಕ ರೀತಿಯ ಮುಷ್ಕರಗಳ ನಂತರ ಸೆಪ್ಟೆಂಬರ್ ೫, ೧೯೪೨ ರಂದು ದಿಲ್ಲಿಯಿಂದ ಲಂಡನ್ನಿನಲ್ಲಿದ್ದ ಗೃಹ ಕಾರ್ಯದರ್ಶಿಯೊಂದಿಗೆ ಕಳಿಸಿದ ತಂತಿ ಸಮಾಚಾರ ಭಾರತ ಕಮ್ಯುನಿಸ್ಟ್ ಪಾರ್ಟಿಯನ್ನು ಕುರಿತಂತೆ ಅದರ ಬಹಳಷ್ಟು ಸದಸ್ಯರ ವರ್ತನೆಯಿಂದ ಆ ಪಕ್ಷ ಬ್ರಿಟಿಶ್ - ವಿರೋಧಿ ಕ್ರಾಂತಿಕಾರಿಗಳಿಂದ ಕೂಡಿದೆ ಎಂಬ ಈಗಾಗಲೇ ಸ್ಪಷ್ಟವಾಗಿರುವ ಸಂಗತಿಯನ್ನು ಸಾಬೀತುಪಡಿಸಿದೆ"-ಎಂದು ವರದಿ ಮಾಡಿತ್ತು.

ಇದಕ್ಕೆ ತದ್ವಿರುದ್ಧವಾದ ಪಾತ್ರವನ್ನು ಆರ್.ಎಸ್.ಎಸ್. ಆ ಅವಧಿಯಲ್ಲಿ ವಹಿಸಿತ್ತು. ಮುಂಬೈ ಗೃಹ ಇಲಾಖೆ ೧೯೪೭ ರಲ್ಲಿ ಗಮನಿಸಿದ ಸಂಗತಿಯಿದು

-"ಸಂಘ ಅತ್ಯಂತ ಜಾಗರೂಕತೆಯಿಂದ ಕಾನೂನಿನ ಮಿತಿಯೊಳಗೆ ತನ್ನನ್ನು ಇರಿಸಿಕೊಂಡಿದೆ. ವಿಶೇಷವಾಗಿ ಆಗಸ್ಟ್ ೧೯೪೨ ರಲ್ಲಿ ಭುಗಿಲೆದ್ದ ಗಲಭೆಗಳಲ್ಲಿ ಭಾಗವಹಿಸದೆ ದೂರ ನಿಂತಿತು'!

ಶ್ರೀಯುತ ಅಡ್ವಾಣಿಯವರೇ, ಸ್ವಾತಂತ್ರ್ಯ ಹೋರಾಟಕ್ಕೆ ವಿಶ್ವಾಸಘಾತ ಬಗೆದ ಜನರು ನಿಜವಾಗಿ ಯಾರು?

ಬಡವರೊಡಲಿಗೆ ಹಚ್ಚಿದರೊ ಬೆಂಕಿ

ವಾರದ ಆರ್ಥಿಕ ಟಿಪ್ಪಣಿಗಳು
ಜಿ.ಎಸ್.ಮಣಿ

ಹೊರಗಿನಿಂದ ಕಂಡೀತೆ ಈ ಬೆಂಕಿ? ಇಲ್ಲ. ಒಡಲೊಳಗಿನ ಬೆಂಕಿಯಿಂದ ಬಳಲುವವನಿಗೆ ಮಾತ್ರ ಗೊತ್ತಾಗುವಂತಹುದು. ಬಡವರು ಜನಸಾಮಾನ್ಯರು ಮಾತ್ರ ಈ ಬೆಂಕಿಗೆ ತುತ್ತಾಗುವವರು.

ಕೇಂದ್ರ ಸರ್ಕಾರ ಪೆಟ್ರೋಲಿಯಂ ಮತ್ತು ಇತರ ತೈಲೋತ್ಪನ್ನಗಳ ಬೆಲೆಗಳನ್ನು ಹೆಚ್ಚಿಸಿದೆ. ಬೆಲೆ ಹೆಚ್ಚಿಸದೆ ತೈಲಖಾತೆಯ ಕೊರತೆ ನೀಗಿಸಲು ಬೇರೆ ದಾರಿ ಇದೆ ಎಂಬುದನ್ನು ಸ್ಪಷ್ಟವಾಗಿ ಸಿಪಿಐ(ಎಂ) ತೋರಿಸಿಕೊಟ್ಟ ಮೇಲೆ ಸರ್ಕಾರ ಸ್ವಲ್ಪ ಹಿಂಜರಿದಂತೆ ಕಂಡರೂ ಈಗ ಏರಿಸಿದೆ. ಸಂಯುಕ್ತ ರಂಗ ಸರ್ಕಾರ ಬಂಡವಾಳಿಗರ ಸರ್ಕಾರ, ಬಂಡವಾಳಶಾಹಿಗಳ ಪರವಾದ ಸರ್ಕಾರ ಎಂಬುದನ್ನು ಇದು ಒಡೆದು ತೋರಿಸಿದೆ. ತನ್ನ ವರ್ಗ ಗುಣ ತೋರಿದ ಈ ಸರ್ಕಾರ ಹೊರೆ ಎಂತಹದ್ದೇ ಇದ್ದರು ಜನಸಾಮಾನ್ಯರ ಹೆಗಲಿಗೆ, ಭೋಗ, ಐಷಾರಾಮ ಬದುಕು ಬಂಡವಾಳಶಾಹಿಗಳ ಪಾಲಿಗೆ ಎಂಬ ತನ್ನ ವರ್ಗ ಸಿದ್ಧಾಂತವನ್ನೇ ಮೆರೆದಿದೆ. ಬೆಲೆ ಏರಿಸದೆ ಇರುವ ದಾರಿ ಯಾಕೆ ಬೇಡವಾಯಿತು ಈ ಸರ್ಕಾರಕ್ಕೆ?

ಮುಖ್ಯವಾಗಿ ಶ್ರೀಮಂತರಿಗೆ ನೀಡಿರುವ ಅನುಕೂಲ ರಿಯಾಯಿತಿಗಳನ್ನು ಹಿಂತೆಗೆದುಕೊಳ್ಳುವ ಅಥವಾ ಅವರ ಮೇಲಿನ ತೆರಿಗೆ ಭಾರವನ್ನು ಹೆಚ್ಚಿಸುವ ಯಾವುದೇ ಪ್ರಸ್ತಾಪ ಸರ್ಕಾರಕ್ಕೆ ಬೇಕಾಗಿರಲಿಲ್ಲ. ಇನ್ನುಳಿದಿರುವ ದಾರಿ ಯಾವುದು? ಜನಸಾಮಾನ್ಯರ ಮೇಲೆ ಹೊರೆ ಹೇರುವುದು! ಇದಕ್ಕೆ ಮುಖ್ಯವಾಗಿ ಸಿಪಿಐ(ಎಂ) ಅಡ್ಡಗಾಲು ಹಾಕಿತು. ಶ್ರೀಮಂತರಿಗೆ ಬಹಳ ಅನುಕೂಲವಿರುವುದರಿಂದ ಅವರ ಮೇಲೆ ಹೊರೆ ಹೇರಿದರೂ ಅವರಿಗೆ ಭಾರವಾಗುವುದಿಲ್ಲ. ನಿಜದಲ್ಲಿ ಇದು ಶ್ರೀಮಂತರು ದೇಶದ ಮೇಲೆ ಹೇರಿದ ಹೊರೆ. ಆದ್ದರಿಂದ ಅವರೇ ಈ ಹೊರೆ ಹೊರುವುದು ನ್ಯಾಯ ಎಂಬುದನ್ನು ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯ ಕಾಂ. ಸೀತಾರಾಮ್ ಯೆಚೂರಿ ತರ್ಕಬದ್ಧವಾಗಿ ವಿವರಿಸಿದ್ದರು.

ಆದರೇನು? ಚಿದಂಬರಂಗೆ ಜನಸಾಮಾನ್ಯರ ಹಿತ ರಕ್ಷಣೆ ಮುಖ್ಯವಲ್ಲ, ಬಂಡವಾಳಿಗರ ಹಿತ ಕಾಯುವುದು ಮುಖ್ಯ. ಬೆಲೆ ಹೆಚ್ಚಳ ಇಂದು ಮಾಡಲೋ ನಾಳೆ ಮಾಡಲೋ ಎಂದು ತೊನೆದಾಡುತ್ತಾ ಕೊನೆಗೆ ಬೆಲೆ ಹೆಚ್ಚಳವನ್ನು ಅವರು ತಂದರು. ಈ ಹೆಚ್ಚಳದಿಂದಾಗಿ

- ಡೀಸೇಲ್ ಪ್ರತಿ ಲೀಟರಿಗೆ 1.80 ರೂ.ನಷ್ಟು ದುಬಾರಿ ಹಾಗೂ ಅಡುಗೆ ಅನಿಲದ ಸಿಲಿಂಡರ್‌ವೊಂದು 15 ರೂನಷ್ಟು ದುಬಾರಿ- ಸರಕಾರದ ಪ್ರಕಟಣೆಯ ಪ್ರಕಾರ. ಆದರೆ ಕರ್ನಾಟಕದಲ್ಲಿ ಅನುಕ್ರಮವಾಗಿ ರೂ. 2.16, ರೂ.3.43 ಹಾಗೂ 38 ರೂ.ಗಳಷ್ಟು ದುಬಾರಿ.
- ಡಿಸೀಲ್ ಬೆಲೆ ಆಮದು ಬೆಲೆಯ ಮೇಲೆ ಅವಲಂಬಿಸಿ ಹೆಚ್ಚು ಕಡಿಮೆ ಆಗುವುದು.
- ಇಂಧನ ತೈಲ, ನಾಫ್ತಾ, ಬಿಟುಮನ್ ಇತ್ಯಾದಿಗಳು ಆಮದು ಬೆಲೆಯಲ್ಲೇ ಉದ್ಯಮಿಗಳಿಗೆ ಲಭ್ಯ
- ರಸಗೊಬ್ಬರಗಳ ಮೇಲಿನ ಸಹಾಯಧನ ಬಜೆಟ್ಟಿನಿಂದ ನೇರವಾಗಿ ಬರುವುದು.
- ಆಡಳಿತಾತ್ಮಕ ಬೆಲೆ ಪದ್ಧತಿಯನ್ನು ಕಳಚುವುದು
- ಡೀಸಲ್ ಕಾರುಗಳ ಮೇಲಿನ ಅಬ್ಕಾರಿ ಸುಂಕವನ್ನು ವಿಮರ್ಶಿಸಲಾಗುವುದು.
- ನೈಸರ್ಗಿಕ ಅನಿಲದ ಬೆಲೆಯನ್ನು (ರಸಗೊಬ್ಬರ ಕಾರ್ಖಾನೆಗೆ ಹೊರತುಪಡಿಸಿ) ಪರಿಷ್ಕರಿಸುವುದು ಇತ್ಯಾದಿ.

ಆದರೆ ಇಲ್ಲಿ ಏನೂ ಆಗಲೇ ಇಲ್ಲ ಎನ್ನುವಂತಿಲ್ಲ. ಸಿಪಿಐ(ಎಂ) ಇಂತಹ ದೃಢ ನಿಲುವು ತೆಗೆದುಕೊಂಡಿದ್ದರಿಂದ ಆದ ದೊಡ್ಡ ಲಾಭವೆಂದರೆ ಸರ್ಕಾರ ಬೆಲೆ ಏರಿಕೆಯನ್ನು ಅತಿ ಕಡಿಮೆ ಮಟ್ಟದಲ್ಲಿ ಮಾತ್ರ ಮಾಡುವಂತಾಗಿದ್ದು ಸಿಪಿಐ(ಎಂ)ನ ಪ್ರತಿರೋಧ ಇರದೇ ಹೋಗಿದ್ದಲ್ಲಿ ಸರ್ಕಾರ ಬೆಲೆಗಳನ್ನು ಬೇಕಾಬಿಟ್ಟಿ ಏರಿಸುತ್ತಿತ್ತು. ಈಗ ಅದು ಸಾಧ್ಯವಾಗಿಲ್ಲ. ಬದಲಿಗೆ ಬೆಲೆ ಹೆಚ್ಚಳ ಅತಿ ಕಡಿಮೆ ಪ್ರಮಾಣದಲ್ಲಿ ಆಗಿದೆ.

ಜನಸಾಮಾನ್ಯರು ಖಂಡಿತ ಇದನ್ನು ವಿರೋಧಿಸಿ ಹೋರಾಡಬೇಕು. ಅದೊಂದೇ ಸರಿಯಾದ ದಾರಿ. ಅಲ್ಲವೇ?

"ಈತ ದಾರಿ ತಪ್ಪಿದ ಉದಾರೀಕರಣಕಾರ"

ಇದನ್ನು ಬಂಡವಾಳಿಗರೇ ಹೇಳಬೇಕಲ್ಲವೇ? ಹೌದು. ಯಾಕೆಂದರೆ ನಾವು ಹೇಳುವುದು ಉದಾರೀಕರಣ ಜನವಿರೋಧಿ ಆರ್ಥಿಕ ನೀತಿ ಎಂದು. ಅಂದರೆ ದಾರಿತಪ್ಪಿದ ಆರ್ಥಿಕ ನೀತಿಯೆಂದು. ಇಲ್ಲಿ ಈ ಮಾತನ್ನು ಹೇಳುವವ ದೇಶದ ದೊಡ್ಡ ಬಂಡವಾಳಿರಲ್ಲೊಬ್ಬನಾದ 'ಬಜಾಜ್' ಮಹಾಶಯ. ಯಾರ ಬಗ್ಗೆ ಎಂದಿರಾ? ಕೇಂದ್ರ ಅರ್ಥ ಮಂತ್ರಿ ಪಿ.ಚಿದಂಬರಂ ಬಗ್ಗೆ.

ಇದರಿಂದ ಒಂದು ವಿಷಯ ಬಹಳ ಸ್ಪಷ್ಟವಾಗುತ್ತದೆ. ಉದಾರೀಕರಣ ದೇಶದ ಎಲ್ಲ ಬಂಡವಾಳಿಗರನ್ನು ಸಂತೋಷಗೊಳಿಸಿಲ್ಲ. ಕೆಲವು ಬಂಡವಾಳಿಗರಿಗೆ ಈ ಉದಾರೀಕರಣದ ಬಗ್ಗೆ ಅಸಮಾಧಾನವಿದೆ.

ಈ ಬಜಾಜ್ ಮಹಾಶಯ ಹೇಳುವುದನ್ನು ನೋಡಿ. - "ಕೇಂದ್ರ ಹಣಕಾಸು ಮಂತ್ರಿ ಪಿ.ಚಿದಂಬರಂ ಸರಿಯಾದ ತಿಳುವಳಿಕೆಯಿಲ್ಲದ ಉದಾರೀಕರಣಕಾರ. ಬಂಡವಾಳಕ್ಕೆ ಬಣ್ಣವೆಂಬುದು ಸರಿಯಲ್ಲ. ಅದಕ್ಕೆ ಬಣ್ಣವಿದೆ. ಮಾಲಿಕತ್ವ ಬಹಳ ಮುಖ್ಯವಾದದ್ದು. ನಾವು ಯಾವುದೇ ವಿದೇಶೀ ಕಂಪನಿಗೂ ಹೂಡಿಕೆಗೆ ಅವಕಾಶ ನೀಡದ ಸ್ಥಿತಿಯಿಂದ ಈಗ ವಿದೇಶೀ ಹೂಡಿಕೆಗೆ ಮುಕ್ತ ದ್ವಾರ ತೆರೆದಿರುವ ಸ್ಥಿತಿಗೆ ಹೋಗಿದ್ದೇವೆ.

"ಜಗತ್ತಿಗೆ ಭಾರತ ಬೇಕಾಗಿರುವುದಕ್ಕಿಂತ ಹೆಚ್ಚು ಭಾರತಕ್ಕೆ ಜಗತ್ತು ಬೇಕಾಗಿದೆ. ಆದರೆ ಜಗತ್ತಿಗೂ ಭಾರತ ಬೇಕಾಗಿದೆ. ವಿದೇಶೀ ಕಂಪನಿಗಳಿಗೆ ಬರೀ ಶೇ.40 ರಷ್ಟು ಹೂಡಿಕೆಗೆ ಅವಕಾಶ ನೀಡಿದರೂ ಅವರು ಒಂದು ಹೂಡಿಕೆ ಮಾಡುತ್ತಾರೆ. ಹೆಚ್ಚಿಗೆ ಹೂಡಲು ಅವಕಾಶ ನೀಡಿದರೂ ಹೂಡಿಕೆ ಮಾಡುತ್ತಾರೆ. ಆದ್ದರಿಂದ ಹಂತ ಹಂತವಾಗಿ ಅವರಿಗೆ ಹೆಚ್ಚೆಚ್ಚು ಅವಕಾಶ ನೀಡಬಹುದು."......ಇತ್ಯಾದಿ.

ಬಂಡವಾಳಿಗರ ಒಂದು ವಿಭಾಗಕ್ಕೆ ವಿದೇಶೀ ಬಂಡವಾಳದಿಂದ ಮತ್ತು ಉದಾರೀಕರಣದಿಂದ ಭಯವಾಗಿರುವುದಂತೂ ಇದರಿಂದ ಸ್ಪಷ್ಟ. ದೇಶದ ಶೇ. 99 ಕ್ಕೂ ಹೆಚ್ಚು ಜನ ಉದಾರೀಕರಣವನ್ನು ವಿರೋಧಿಸುವವರು ಎನ್ನಬಹುದಲ್ಲವೇ?

ಫೆರಾ ಬದಲಿಗೆ ಮೊಂಡು ಫೆಮಾ

ಫೆರಾ ಎಂಬುದು ವಿದೇಶಿ ವಿನಿಮಯ ನಿಯಂತ್ರಣ ಕಾಯಿದೆ. ಈಗ ಈ ಕಾಯಿದೆಯ ಬದಲಿಗೆ ಮೊಂಡಾಗಿರುವ ಫೆಮಾ ಎಂಬ ಕಾಯಿದೆ ಬರಲಿದೆ. ಉದಾರೀಕರಣದ ಭಾಗವಾಗಿ ಬಂದಿರುವ ಈ ಫೆಮಾವನ್ನು ಜಾರಿಗೆ ತರುವುದಾಗಿ ಹಿಂದಿನ ಬಜೆಟ್‌ನಲ್ಲಿ ಕೇಂದ್ರ ಹಣಕಾಸು ಮಂತ್ರಿ ಪಿ.ಚಿದಂಬರಂ ಘೋಷಿಸಿದ್ದರು.

ಫೆರಾ ಕಾಯಿದೆ ಓಬಿರಾಯನ ಕಾಲದ್ದು, ಈ ಕಾಲದ ವಿದೇಶೀ ವ್ಯವಹಾರಗಳಿಗೆ ಇದು ತಕ್ಕುದ್ದಲ್ಲ ಎಂದು ಬಂಡವಾಳಿಗರು ತೆಗಳುತ್ತಲೇ ಇದ್ದರು.

ಈಗ ಕೇಂದ್ರ ಮಂತ್ರಿ ಮಂಡಳ ಫೆಮಾ ಕಾಯಿದೆಯನ್ನು ಅನುಮೋದಿಸಿದೆ. ಫೆರಾ ಎಂದರೆ ಫಾರಿನ್ ಎಕ್ಸ್‌ಚೇಂಜ್ ರೇಗ್ಯುಲೇಷನ್ ಆಕ್ಟ್ (FERA) ಫೆಮಾ ಎಂದರೆ ಫಾರಿನ್ ಎಕ್ಸ್‌ಚೇಂಜ್ ಮ್ಯಾನೇಜ್‌ಮೆಂಟ್ ಆಕ್ಟ್(FEMA) ಈ ಹೆಸರಿನಲ್ಲೇ ವ್ಯತ್ಯಾಸ ಗೊತ್ತಾಗುತ್ತದೆ. ಫೆರಾ ನಿಯಂತ್ರಣ ಮಾಡುವ ಕಾಯಿದೆ. ಫೆಮಾ ಮ್ಯಾನೇಜ್(ನಿರ್ವಹಣೆ) ಮಾಡುವ ಕಾಯಿದೆ.

ಫೆಮಾ ಬಂಡವಾಳಿಗರಿಗೆ ಮತ್ತು ಬಹುರಾಷ್ಟ್ರೀಯ ಕಂಪನಿಗಳಿಗೆ ವಿದೇಶೀ ವಿನಿಮಯ ವ್ಯವಹಾರಗಳನ್ನು ಸುಲಭಗೊಳಿಸುತ್ತದೆ. ಬಂಡವಾಳ ದೇಶದೊಳಗೆ ಹರಿದು ಬರಲು ಮತ್ತು ಹರಿದು ಹೋಗಲು ಅನುಕೂಲ ಮಾಡಿಕೊಡುತ್ತದೆ. ಶ್ರೀಮಂತಿಕೆ ಹರಿದು ಹೋಗಲು ಬಡತನ ಹೆಚ್ಚಾಗಲು ಸಹಾಯ ಮಾಡುತ್ತದೆ ಎಂದರೂ ತಪ್ಪೇನಿಲ್ಲ.

ಉದಾರೀಕರಣದ ಭಾಗವಾಗಿ ಬರುವ ಕಾಯಿದೆ ಇನ್ನೇನನ್ನು ತಾನೆ ಮಾಡುತ್ತದೆ? ನೀವೇ ಹೇಳಿ.

ಸಕ್ಕರೆ ಕಾಯಿಲೆ?

ದೇಶದಲ್ಲಿ ಸಕ್ಕರೆಯ ಅಭಾವವಂತೂ ಇಲ್ಲ. ಆದರೆ ಹಲವು ವ್ಯಾಪಾರಿ ಕಂಪನಿಗಳು ಭಾರತಕ್ಕೆ ಸಕ್ಕರೆ ಆಮದು ಮಾಡುವ ಒಪ್ಪಂದಗಳನ್ನು ಮಾಡಿಕೊಂಡುಬಿಟ್ಟಿದ್ದಾರಂತೆ. ಹೀಗೆ ವಿದೇಶೀ ಸಕ್ಕರೆ ಹೊಳೆಯಾಗಿ ಹರಿದು ಬಂದರೆ ಸಕ್ಕರೆ ಬೆಲೆ ಒಂದು ಕ್ಷಣ ಇಳಿದೀತು ನಿಜ. ಆದರೆ ದೇಶದ ಸಕ್ಕರೆ ಉದ್ಯಮವನ್ನೇ ಹಾಳುಗೆಡವುತ್ತದೆ. ದೇಶೀ ಸಕ್ಕರೆ ಉತ್ಪಾದಕರೂ ಈ ಬಗ್ಗೆ ಚಿಂತಿತರಾಗಿದ್ದಾರೆ.

ಅಮೆರಿಕದ ಕಾರ್ಗಿಲ್, ಲಂಡನ್ನಿನ ಗ್ಲೆಂಕೊರ್, ಫ್ರಾನ್ಸಿನ ಸುಗ್ಡೆನ್ ಭಾರತಕ್ಕೆ ಸಕ್ಕರೆ ಪೂರೈಸಲು ಒಪ್ಪಂದ ಮಾಡಿಕೊಂಡಿರುವ ಬೃಹತ್ ಕಂಪನಿಗಳು ಕಾರ್ಗಿಲ್ ಈಗಾಗಲೇ 5000 ಟನ್ನುಗಳಷ್ಟು ವಿದೇಶೀ ಸಕ್ಕರೆಯನ್ನು ಭಾರತಕ್ಕೆ ತಂದುಬಿಟ್ಟಿದೆಯಂತೆ.

ಈ ಕಂಪನಿಗಳು ಎಂತಹವೆಂದರೆ ತಮ್ಮ ವ್ಯಾಪಾರ ಕುದುರಲು ಕೃತಕವಾಗಿ ಅಭಾವ ಪರಿಸ್ಥಿತಿಯನ್ನು ಬೆಲೆ ಹೆಚ್ಚಳವನ್ನು ಉಂಟುಮಾಡಬಲ್ಲಂತಹವು. ಆಗಲೇ ಒಪ್ಪಂದವಾಗಿರುವಾಗ ಅವು ಸುಮ್ಮನೆ ಕೂರಲಾರವು. ಉದಾರೀಕರಣ ಒಂದೊಂದು ಕ್ಷೇತ್ರದಲ್ಲೂ ತರುವ ಗಂಡಾಂತರ ಎಂತಹದೆನ್ನುವುದಕ್ಕೆ ಇದು ಒಳ್ಳೆಯ ಉದಾಹರಣೆ.

- "ಸುಪ್ರೀಂ ಕೋರ್ಟಿನ ಐವರು ನ್ಯಾಯಾಧೀಶರು ನಿಮ್ಮ ಚುನಾವಣೆಯನ್ನು ಸಿಂಧುಗೊಳಿಸಿದಕ್ಕೆ ನನ್ನ ಅಭಿನಂದನೆಗಳು" ಎಂದರು.

ಆಗ ಇಂದಿರಾಗಾಂಧಿಯವರು ಕಾನೂನಿನ ಕಸರತ್ತು ನಡೆಸಿ ತನ್ನ ಚುನಾವಣೆಯನ್ನು ಕಾನೂನುಬದ್ಧಗೊಳಿಸಲು ಸಂವಿಧಾನ ತಿದ್ದುಪಡಿ ಮಾಡಿದ್ದನ್ನು ಇಡೀ ದೇಶ ಪ್ರತಿಭಟಿಸುತ್ತಿದ್ದ ಸಮಯವದು. ಆಚಾರ್ಯ ವಿನೋಬಾಭಾವೆಯವರಿಗೆ ಜೈಲಿನಿಂದ ಬರೆದ ಇನ್ನೊಂದು ಪತ್ರದಲ್ಲಿ ದೇವರಸ್ ಏನು ಹೇಳಿದ್ದರು ನೋಡಿ

-"......ನಿಮ್ಮಲ್ಲಿ ನನ್ನದೊಂದು ಪ್ರಾರ್ಥನೆ. *ಪ್ರಧಾನ ಮಂತ್ರಿಗಳಲ್ಲಿ ಸಂಘದ ಬಗೆಗಿರುವ ತಪ್ಪು ಭಾವನೆಯನ್ನು ಹೋಗಲಾಡಿಸಲು ದಯವಿಟ್ಟು ಪ್ರಯತ್ನಿಸಿ. ಇದರಿಂದ ಆರ್.ಎಸ್.ಎಸ್. ಸ್ವಯಂಸೇವಕರು ಮುಕ್ತವಾಗಿ, ಸಂಘದ ಮೇಲಿನ ನಿಷೇಧ ತೆಗೆಯುವಂತಾಗಿ ದೇಶದ ಪ್ರಗತಿ ಮತ್ತು ಸಮೃದ್ಧಿಗೆ ಸಂಬಂಧಪಟ್ಟಂತೆ ಪ್ರಧಾನ ಮಂತ್ರಿಗಳ ಮುಖಂಡತ್ವದಲ್ಲಿ ಯೋಜಿಸಿದ ಕಾರ್ಯಾಚರಣೆಯ ಕಾರ್ಯಕ್ರಮದಲ್ಲಿ ಸಂಘದ ಕಾರ್ಯಕರ್ತರು ಭಾಗವಹಿಸಲು ಸಾಧ್ಯವಾಗುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ*"

ಇಲ್ಲಿ ದೇವರಸ್ ಇಂದಿರಾಗಾಂಧಿಯವರ ತುರ್ತುಪರಿಸ್ಥಿತಿಯ ಕುಖ್ಯಾತ ಇಪ್ಪತ್ತಂಶದ ಕಾರ್ಯಕ್ರಮದ ಬಗ್ಗೆ ಹೇಳುತ್ತಿದ್ದಾರೆಂಬುದು ವೇದ್ಯ. ದೇಶದ ಪ್ರಜಾಪ್ರಭುತ್ವವಾದಿ ಜನಸಮೂಹಗಳು ಈ ಕಾರ್ಯಕ್ರಮವನ್ನು ಖಂಡಿಸುತ್ತಿದ್ದಾಗ ಆರ್.ಎಸ್.ಎಸ್. ನ ಮುಖಂಡತ್ವ ಶ್ರೀಮತಿ ಇಂದಿರಾಗಾಂಧಿಯ ಮುಖಂಡತ್ವವನ್ನು ಸ್ವೀಕರಿಸಲು ಸಿದ್ಧವಾಗಿತ್ತು!

ತುರ್ತುಪರಿಸ್ಥಿತಿಯಲ್ಲಿ ಕಾವಿಪಡೆಗಳ ಪಾತ್ರದ ಬಗ್ಗೆ ಇನ್ನೂ ಏನಾದರೂ ಪುರಾವೆಗಳು ಬೇಕಿದ್ದರೆ ದಿವಂಗತ ಮಧು ಲಿಮಯೆಯವರು "ಸೆಕ್ಯೂಲರ್ ಡೆಮಾಕ್ರಸಿ" ಯಲ್ಲಿ ಬರೆದ ಈ ಮಾತುಗಳನ್ನು ನೋಡಿ -"ತುರ್ತುಪರಿಸ್ಥಿತಿ-ವಿರೋಧಿ ಹೋರಾಟದ ಮುಂಚೂಣಿಯಲ್ಲಿ ತಾವಿದ್ದೆವು ಎಂದು ಆರ್.ಎಸ್.ಎಸ್. ಮಂದಿ ಹೇಳಿಕೊಳ್ಳುತ್ತಾರೆ. ಇದಕ್ಕಿಂತ ಸತ್ಯದೂರವಾದ ಮಾತು ಬೇರಿಲ್ಲ. ಆರ್.ಎಸ್.ಎಸ್. ಮೇಲಿನ ನಿಷೇಧದಿಂದ ಅವರು ಭಯಭೀತರಾದರು. ಬಂಧಿತರಾದ ಅವರ ಕಾರ್ಯಕರ್ತರ ಸ್ಥೈರ್ಯ ತುರ್ತುಪರಿಸ್ಥಿತಿ ಘೋಷಣೆಯ ಕೆಲವೇ ದಿನಗಳಲ್ಲಿ ಕುಸಿದು ಬಿತ್ತು. ಇದರಲ್ಲಿ ಹೆಚ್ಚಿನವರು ಅಧಿಕಾರಿಗಳೆದುರು ಕ್ಷಮಾಯಾಚನೆಗಿಳಿದರು. ಹಲವರು ಬಂಧನ ತಪ್ಪಿಸಿಕೊಳ್ಳಲು ಆರ.ಎಸ್.ಎಸ್. ಮತ್ತು ಜನಸಂಘವನ್ನು ಕೈ ಬಿಟ್ಟರು" ಶ್ರೀಯುತ ಅಡ್ವಾಣಿಯವರಿಗೆ ಈಗ ಸಿಪಿಐ(ಎಂ) ವಿರುದ್ಧ ಸುಳ್ಳು ಆರೋಪ ಹೊರಿಸಲು ಸ್ಫೂರ್ತಿ ನೀಡುವಂತಹ ಹೇಡಿತನದ ಶರಣಾಗತಿಯ ಪರಂಪರೆ ಎಂದರೆ ಇದೇ!

ದೇಶದ ಉಳಿವಿಗಾಗಿ

ಕೊನೆಯದಾಗಿ, ಸಿಪಿಐ(ಎಂ) ಕೋಮುವಾದಿ ಶಕ್ತಿಗಳನ್ನು ವಿರೋಧಿಸುವುದು "ತನ್ನ ಉಳಿವಿಗಾಗಿ, ಸ್ವಯಂ ಪೋಷಣೆಗಾಗಿ" ಎಂಬ ದೂಷಣೆಯನ್ನು ನೋಡೋಣ. ನಮ್ಮ ಈ ವಿರೋಧ ಭಾರತ ಮತ್ತು ಅದರ ಜನತೆಯ ಉಳಿವು ಮತ್ತು ಸ್ವಯಂಪೋಷಣೆಗಾಗಿ, ಕಾವಿ ಪಡೆಗಳ ಇಂದಿನ ಅಜೆಂಡಾವೆಂದರೆ ಆಧುನಿಕ ಭಾರತದ ಅಡಿಗಲ್ಲನ್ನೇ ನಾಶ ಮಾಡುವ ಕಾರ್ಯಕ್ರಮ. ತಮ್ಮ ರಾಜಕೀಯ ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳುವ ನಿರಂತರ ಪ್ರಯತ್ನದಲ್ಲಿ ಅವರು ಒಂದು ಐಕ್ಯಭಾರತದ ಸಾಮಾಜಿಕ ಹಂದರವನ್ನೇ ಚಿಂದಿ ಚಿಂದಿ ಮಾಡಲು ಹೊರಟಿದ್ದಾರೆ. ಅವರ ಕೋಮುವಿಷ ಈಗಾಗಲೇ ಹಲವಾರು ಮುಗ್ಧರ ಬಲಿ ತೆಗೆದುಕೊಂಡಿದೆ. ಅಲ್ಪಸಂಖ್ಯಾತರ ನಡುವೆ ಅಭದ್ರತೆಯ ಬೀಜವನ್ನು ಆಳವಾಗಿ ಬಿತ್ತಿದೆ. ಆದರೆ ಕಾವಿ ಪಡೆಗಳ ಕಮ್ಯುನಿಸ್ಟರ ವಿರೋಧ ಧರ್ಮನಿರಪೇಕ್ಷತೆಯನ್ನು ರಕ್ಷಿಸಲಿಕ್ಕಾಗಿಯಷ್ಟೇ ಅಲ್ಲ, ಮೂಲಭೂತ ಆರ್ಥಿಕ ಧೋರಣೆಗಳಲ್ಲಿ ಕಾವಿಪಡೆ ಸದಾ ಅತ್ಯಂತ ಪ್ರತಿಗಾಮಿ ನಿಲುವುಗಳನ್ನೇ ತಗೊಂಡಿದೆ. ಈಗ ಅದು ಹೊಸ ಆರ್ಥಿಕ ನೀತಿಗಳೊಂದಿಗೆ ಶಾಮೀಲಾಗಿದೆ. ಹೀಗೆ ರಾಷ್ಟ್ರೀಯ ಆಂದೋಲನದ ಉದ್ದಕ್ಕೂ ಅವರು ಸಂಸ್ಥಾನಗಳ ಆಳರಸರೊಂದಿಗೆ ಕೈ ಮಿಲಾಯಿಸಿ ಅಲ್ಲಿನ ಸ್ವಾತಂತ್ರ್ಯ ಹೋರಾಟಗಳನ್ನು ವಿರೋಧಿಸಿದ್ದರು. ಭಾರತವನ್ನು ಸೇರುವ ಮನಸ್ಸಿಲ್ಲದ ಕಾಶ್ಮೀರದ ರಾಜ ಹರಿಸಿಂಗ್ ಅವರ ನಿಕಟ ಮಿತ್ರರಲ್ಲಿ ಒಬ್ಬನಾಗಿದ್ದ ಎಂಬುದನ್ನು ನೆನಪಿಸಿಕೊಳ್ಳೋಣ.

ಪ್ರತಿಗಾಮಿ ನೀತಿಗಳ ಪ್ರತಿಪಾದಕರಿವರು

ಸ್ವಾತಂತ್ರ್ಯದ ನಂತರವೂ, "ಸಂಘ ಮುಖಂಡರು ಉದ್ದಿಮೆಗಳ ರಾಷ್ಟ್ರೀಕರಣವನ್ನು ವಿರೋಧಿಸಿದ್ದಾರೆ. ಭೂಮಾಲಕತ್ವದ ರದ್ದತಿಗೂ ಅವರ ಆಕ್ಷೇಪಣೆಯಿದೆ....." ಎಂದು ಟೈಂಸ್ ಆಫ್ ಇಂಡಿಯಾ(ಸೆಪ್ಟೆಂಬರ್ 2, 1949) ಒಂದು ವರದಿ ಹೇಳಿತ್ತು. ಭಾರತ ಆರ್ಥಿಕ ಸ್ವಾವಲಂಬನೆ ಸಾಧಿಸಲು ಪ್ರಯತ್ನಿಸುತ್ತಿದ್ದಾಗ ಕೋಟಿಗಟ್ಟಲೆ ಭಾರತೀಯ ರೈತರು ಉಳುವವನಿಗೇ ಭೂಮಿಯೆಂಬ ತಮ್ಮ ಕನಸನ್ನು ನನಸಾಗಿಸಲು ಹೋರಾಟನಿರತರಾಗಿದ್ದಾಗ ಕಾವಿಪಡೆಗಳು ನೇರವಾಗಿಯೇ ದುಡಿಯುವ ಜನಗಳ ಈ ಬೇಡಿಕೆಯನ್ನು ವಿರೋಧಿಸಿ ನಿಂತಿದ್ದವು. ಈಗಲೂ ಅದೇ ತತ್ವವನ್ನು ಅವರು ಪ್ರತಿಪಾದಿಸುತ್ತಿದ್ದಾರೆ. ಒಂದೆಡೆ ಆಧುನಿಕ ಭಾರತದ ಅಡಿಗಲ್ಲನ್ನೇ ಧ್ವಂಸ ಮಾಡಲು ತುದಿಗಾಲ ಮೇಲೆ ನಿಂತಿದ್ದಾರೆ. ಇನ್ನೊಂದೆಡೆ ಬಹುಪಾಲು ಭಾರತೀಯ ಜೀವನವನ್ನು ಇನ್ನಷ್ಟು ನರಕವನ್ನಾಗಿಸುವ ಪ್ರತಿಗಾಮಿ ಆರ್ಥಿಕ ನೀತಿಗಳನ್ನು ಹೇರಲು ಪ್ರಯತ್ನಿಸುತ್ತಿದ್ದಾರೆ.

ಕಮ್ಯುನಿಸ್ಟರು ಸದಾ ಕಾವಿ ಪಡೆಗಳ ಈ ನೀತಿಗಳನ್ನು ವಿರೋಧಿಸುತ್ತಿರುವುದರಿಂದಲೇ ಅವರಿಗೆ ಸಹಜವಾಗಿಯೇ ಕಮ್ಯುನಿಸ್ಟರೆಂದರೆ ಆಗದು. ಗಾಂಧೀಜಿಯ ಹತ್ಯೆಯ ಹಿನ್ನೆಲೆಯಲ್ಲಿ ಆರ್.ಎಸ್.ಎಸ್. ಮೇಲೆ ನಿಷೇಧ ಹಾಕಿದಾಗ ಸೆಪ್ಟೆಂಬರ್ 24, 1948 ರಂದು ಆರ್.ಎಸ್.ಎಸ್. ಮುಖ್ಯಸ್ಥ ಗೋಲ್ವಾಲ್ಕರ್ ಜವಾಹರ್ ಲಾಲ್ ನೆಹರೂರವರಿಗೆ ಬರೆದ ಪತ್ರದಲ್ಲಿ ಕಮ್ಯುನಿಸ್ಟ್ ವಿಚಾರಗಳು ತ್ವರಿತವಾಗಿ ಹರಡುತ್ತಿವೆ ಎಂದು ಗೋಳಿಟ್ಟಿದ್ದರು. ಅದೇ ದಿನ ಸರ್ದಾರ್ ಪಟೇಲರಿಗೆ ಬರೆದ ಇನ್ನೊಂದು ಪತ್ರದಲ್ಲಿ *"ದಕ್ಷಿಣ ಮತ್ತು ಸಂಯುಕ್ತ ಪ್ರಾಂತ್ಯ(ಈಗಿನ ಉತ್ತರ ಪ್ರದೇಶ) ಗಳಿಂದ ಬರುವ ವರದಿಗಳನ್ನು ನೋಡಿದರೆ ಯುವಜನ, ವಿಶೇಷವಾಗಿ ವಿದ್ಯಾರ್ಥಿ ವಿಭಾಗ ಸಂಘದ ಮೇಲಿನ ನಿಷೇಧದ ನಂತರ ಹೆಚ್ಚೆಚ್ಚಾಗಿ ಕಮ್ಯುನಿಸಂನತ್ತ ವಾಲುತ್ತಿರುವುದು ಕಂಡು ಬರುತ್ತಿದೆ ...... ನೀವು ನಿಮ್ಮ ಸರಕಾರದ ಅಧಿಕಾರ ಶಕ್ತಿಯಿಂದ ಹಾಗೂ ನಮ್ಮ ಸಂಘಟಿತ ಸಾಂಸ್ಕೃತಿಕ ಶಕ್ತಿಯನ್ನು ಬೆಸೆದು ಈ ಪಿಡುಗನ್ನು ನಿರ್ಮೂಲ ಮಾಡಬಹುದು ಎಂದು ಭಾವಿಸುವಾತ ನಾನು"* ಎಂದಿದ್ದರು.

ಈ ಗರಡಿಯಲ್ಲಿ ತರಬೇತಿ ಪಡೆದ ಶ್ರೀಯುತ ಅಡ್ವಾಣಿ ಕಮ್ಯುನಿಸ್ಟರನ್ನು 'ನಿರ್ಮೂಲ' ಮಾಡುವ ಕಾವಿ ಪಡೆಗಳ ಅಯಶಸ್ವೀ ಹೋರಾಟವನ್ನು ಮುಂದೊಯ್ಯುವಲ್ಲಿ ಈಗ ಮಗ್ನರಾಗಿದ್ದಾರೆ. ಕಮ್ಯುನಿಸ್ಟರ ವಿರುದ್ಧ ಅವರ ಬೊಬ್ಬಾಟ, ಸುಳ್ಳುಗಳ, ವಿಕೃತಿಗಳ ಸರಮಾಲೆ ಹಿಂದೆ ಯಶಸ್ವಿಯಾಗಿರಲಿಲ್ಲ, ಇಂದೂ ಭಾರತೀಯ ಜನತೆ ಅದಕ್ಕೆ ಸವಾಲು ಹಾಕದೆ ಬಿಡುವುದಿಲ್ಲ. ಕೋಮುವಾದಿ ಪಿಡುಗಿನಿಂದ ಭಾರತವನ್ನು ರಕ್ಷಿಸುವ ಹೋರಾಟ ತೀವ್ರಗೊಳ್ಳುತ್ತಲೇ ಹೋಗುವ ಒಂದು ಹೋರಾಟ.

ಮಹಾತ್ಮ ಗಾಂಧೀಜಿಯ ಕೊಲೆಗಡುಕರು ಇಂದು ಸ್ವಾತಂತ್ರ್ಯ ಹೋರಾಟದ ವಾರಸುದಾರರು ತಾವು ಎಂದು ಹೇಳಿಕೊಳ್ಳುವುದಕ್ಕಿಂತ ದೊಡ್ಡ ವಿಪರ್ಯಾಸ ಏನಿರಲು ಸಾಧ್ಯ?



ಕೋಮುವಾದಿಯ ಗುಂಡಿಗೆ ಬಲಿಯಾದ ಗಾಂಧೀಜಿ

ಗಾಂಧೀಜಿಯ ಕೊಲೆ ಮೊಕದ್ದಮೆಯಲ್ಲಿ ಕಟಕಟೆಯಲ್ಲಿ ನಿಂತಿರುವ ಗೋಡ್ಸೆ(x ಗುರುತು) ಹಾಗೂ ಇತರರು



ದೇಶದೊಳಗೆ



ಬಿಹಾರದಲ್ಲಿ ಭೂಮಾಲಕರಿಂದ ಹತ್ಯಾಕಾಂಡ

ದೇಶ ಸ್ವಾತಂತ್ರ್ಯದ ಚಿನ್ನದ ಹಬ್ಬವನ್ನು ಆಚರಿಸುತ್ತಿದ್ದರೂ ಭೂ ಸಮಸ್ಯೆ ಇನ್ನೂ ಪರಿಹಾರ ಆಗಿಲ್ಲ. ಇದು ಸಾಮಾಜಿಕ ಸಂಘರ್ಷಕ್ಕೆ ಎಡೆಮಾಡಿಕೊಡುತ್ತಿದೆ. ಒಂದು ರೀತಿಯಲ್ಲಿ ಭೂ ರಹಿತರ ಮೇಲೆ ಭೂ ಮಾಲಕರ ಧಾಳಿ ಏಕಪಕ್ಷೀಯವಾಗಿ ನಡೆಯುತ್ತಿದೆ. ಬಿಹಾರದಿಂದ ಅಂಥ ಒಂದು ಘೋರ ಪ್ರಕರಣ ವರದಿಯಾಗಿದೆ.

ಭಾಗಲ್ಪುರ ಜಿಲ್ಲೆಯ ಝುರ್ಕುಸಿಯಾ ಗ್ರಾಮದಲ್ಲಿ ಆಗಸ್ಟ್ 23 ರಂದು ಬೆಳಿಗ್ಗೆ ಕುಖ್ಯಾತ ಭೂಮಾಲಿಕ ಹಿತ ನಾರಾಯಣ ಸಿಂಗ್‌ನ ಬೆಂಬಲಿಗರು ಐವರು ಸಂತಾಲರನ್ನು ಗುಂಡಿಟ್ಟು ಹಾಗೂ ಕೊಚ್ಚಿ ಕೊಂದು ಹಾಕಿದರು.

ಬಿಹಾರ ವಿಧಾನಸಭೆಯಲ್ಲಿ ಸಿಪಿಐ (ಎಂ) ನಾಯಕರಾಗಿರುವ ರಾಮದೇವ ವರ್ಮಾ ಮತ್ತು ಭಾಗಲ್ಪುರ ಜಿಲ್ಲಾ ಸಿಪಿಐ (ಎಂ) ಕಾರ್ಯದರ್ಶಿ ಹರವಂಶ್ ಸಿಂಗ್ ನೇತೃತ್ವದ ನಿಯೋಗವೊಂದು ಈ ಹೇಯ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿದ್ದು ಅದರ ಅಧ್ಯಯನದ ಪ್ರಕಾರ ದೌರ್ಜನ್ಯದ ವಿವರ ಹೀಗಿದೆ-

ಆ ಕರಾಳ ದಿನವಂದು ಬೆಳಿಗ್ಗೆ ಸುಮಾರು ಎಂಟು ಗಂಟೆಗೆ ನುಗ್ಗಿದ ಹಿತನಾರಾಯಣ ಸಿಂಗ್‌ನ ಕುಟುಂಬದ ಸದಸ್ಯರು ಸಂತಾಲರ ಗದ್ದೆಗಳಲ್ಲಿ ಬೆಳೆದು ನಿಂತಿದ್ದ ಪೈರನ್ನು ಅಕ್ರಮವಾಗಿ ಕೊಯ್ಯಲು ಆರಂಭಿಸಿದರು. ಸಂತಾಲರಲ್ಲೇ ಒಬ್ಬನಾದ ಭೋಟೆಸಿಂಗ್ ಎಂಬ ಲೇವಾದೇವಿ ದಾರನೂ ಭೂಮಾಲಕನ ಕುಕೃತ್ಯಕ್ಕೆ ಬೆಂಬಲ ನೀಡಿದ್ದನು. ಅಕ್ರಮವಾಗಿ ಫಸಲು ಕೊಯ್ಯುವುದನ್ನು ಸಂತಾಲರು ಪ್ರತಿಭಟಿಸಿದ್ದಕ್ಕೆ ದುಷ್ಪರಿಣಾಮ ಉಂಟಾಗುವುದೆಂದು ದುಷ್ಕರ್ಮಿಗಳು ಬೆದರಿಕೆ ಹಾಕಿ ಅಲ್ಲಿಂದ ತೆರಳಿದರು.

ಅನಂತರ ಭೂ ಮಾಲಿಕ ಕ್ರಿಮಿನಲ್‌ಗಳು ಮತ್ತಿತರ ಸಮಾಜವಿರೋಧಿ ಶಕ್ತಿಗಳ ಬೆಂಬಲ ಪಡೆದನು. ಪ್ರದೇಶದ ಹಲವು ಕುಖ್ಯಾತ ಭೂಮಾಲಕರ ನೇತೃತ್ವದಲ್ಲಿ ಸುಮಾರು 3000 ಗೂಂಡಾಗಳು ಅದೇ ದಿನ ಮಧ್ಯಾಹ್ನ ಎರಡು ಗಂಟೆಗೆ ಹಳ್ಳಿಗೆ ನುಗ್ಗಿದರು. ಮಾರಕ ಶಸ್ತ್ರಾಸ್ತ್ರಗಳು ಮತ್ತು ಬಂದೂಕುಗಳಿಂದ ಅವರು ಸಜ್ಜಿತರಾಗಿದ್ದರು.

ಭೂಮಾಲ[illegible] ಗೂಂಡಾಗಳ ಆಕ್ರಮಣದಿಂದ ಭಯಭೀತರಾದ ಸಂತಾಲರು ತಮ್ಮ ಸಾಂಪ್ರದಾಯಿಕ ಅಸ್ತ್ರಗಳಾದ ಬಿಲ್ಲು-ಬಾಣಗಳಿಂದ ಪ್ರತಿಧಾಳಿ ಮಾಡಿ ತಮ್ಮನ್ನು ರಕ್ಷಿಸಿಕೊಳ್ಳಲು ಪ್ರಯತ್ನಿಸಿದರು. ಆದರೆ ಕರುಣಾಹೀನ ಭೂ ಮಾಲಕರು ಬೇಕಾಬಿಟ್ಟಿಯಾಗಿ ಗುಂಡು ಹಾರಿಸಿದರು. ಭವನ್ ಮರಂಡಿ ಮತ್ತು ತಲ್ಲುಸೂರೇನ್ ಎಂಬಿಬ್ಬರು ಸಂತಾಲರು ಸ್ಥಳದಲ್ಲೇ ಮೃತರಾದರು. ಈ ರಕ್ತ ದೋಕುಳಿಯಿಂದ ತೃಪ್ತರಾಗದ ದುರುಳರು ಹೆಪಿನಿ ಹೆಂಬ್ರಂ ಎಂಬ 10 ವರ್ಷದ ಬಾಲಕ ಮತ್ತು ಸಂರ್ಝಾ ಹಂಫ್ ಕೇಸರ ಎಂಬುವರ ತಲೆಗಳನ್ನು ಖಡ್ಗದಿಂದ ಕಡಿದು ಹಾಕಿದರು.

ಜೀವವುಳಿಸಿಕೊಳ್ಳಲು ಸಂತಾಲರು ಗ್ರಾಮಬಿಟ್ಟು ಓಡಿಹೋದರು. ಆಗ ಅವರ ಆಸ್ತಿಪಾಸ್ತಿಯನ್ನು ಲೂಟಿ ಮಾಡಲಾಯಿತು. ಹಾಗೂ ಅವರ ಜಮೀನಿನ ಹಕ್ಕು ಪತ್ರಗಳನ್ನು ಭೂಮಾಲಕರು ಅಪಹರಿಸಿದರು.

ಈ ಭಯಾನಕ ಕೃತ್ಯ ಮಧ್ಯಾಹ್ನ 2 ರಿಂದ ಸಂಜೆ 5 ರವರೆಗೆ ಅವ್ಯಾಹತವಾಗಿ ನಡೆಯಿತು. ಆದರೆ ಪೋಲೀಸರು ಸಂಜೆ 5 ಕ್ಕೆ ಬಂದು ತಲುಪಿದರು. ಊರು ಕೊಳ್ಳೆ ಹೋದ ಮೇಲೆ ದಿಡ್ಡಿ ಬಾಗಿಲು ಮುಚ್ಚಿದರು ಎಂಬಂತೆ!

ಭೂ ಮಾಲಕರೊಂದಿಗೆ ಸ್ಥಳೀಯ ಅಧಿಕಾರಿಗಳೂ ಶಾಮೀಲಾಗಿದ್ದಾರೆ ಎಂದು ಸ್ಥಳೀಯ ಜನರು ಆಪಾದಿಸಿರುವುದಾಗಿ ಸಿಪಿಐ(ಎಂ) ಸತ್ಯಶೋಧನ ಸಮಿತಿ ತಿಳಿಸಿದೆ.

ಭೂವಿವಾದ ಕಾರಣ

ಈ ಹೇಯ ಕೃತ್ಯಕ್ಕೆ ಭೂವಿವಾದವೇ ಮೂಲಕಾರಣವಾಗಿದೆ. ಸುಮಾರು ಒಂದು ಶತಮಾನದಿಂದಲೂ ಸಂತಾಲರು ಉಳುತ್ತಿದ್ದ ಜಮೀನನ್ನು ಕಸಿದು ಕೊಳ್ಳುವುದು ಭೂಮಾಲಕರ ಬಹುದಿನಗಳ ಬಯಕೆಯಾಗಿತ್ತು. 1905 ರಷ್ಟು ಹಿಂದಿನ ಸರ್ವೆ ಪ್ರಕಾರ ಈ ಜಮೀನು ಸಂತಾಲರಿಗೆ ಸೇರಿದ್ದಾಗಿದೆ. ಆದರೆ 1970-71 ರಲ್ಲಿ ನಡೆಸಲಾದ ಸರ್ವೆಯಲ್ಲಿ ಸಂತಾಲರ ಸುಮಾರು 600 ಎಕರೆ ಜಮೀನನ್ನು ಭೂ ಮಾಲಿಕರು ಕಾನೂನು ಬಾಹಿರವಾಗಿ ತಮ್ಮ ಹೆಸರಿಗೆ ವರ್ಗಾಯಿಸಿಕೊಂಡಿದ್ದರು.

ಭೂಮಾಲಕರ ದೌರ್ಜನ್ಯದಲ್ಲಿ ಮೃತಪಟ್ಟವರ ಹತ್ತಿರ ಸಂಬಂಧಿಗಳಿಗೆ ಎರಡು ಲಕ್ಷ ರೂಪಾಯಿ ಪರಿಹಾರ ನೀಡಬೇಕು, ಗಾಯಗೊಂಡವರಿಗೆ 50 ಸಾವಿರ ರೂ. ನೀಡಬೇಕು ಎಂದು ಸಿಪಿಐ (ಎಂ) ಒತ್ತಾಯಿಸಿದೆ. ಭೂಮಾಲಕರು ಅಪಹರಿಸಿರುವ ಭೂ ಮಾಲಕತ್ವದ ಹಕ್ಕು ಪತ್ರಗಳನ್ನು ಸಂತಾಲರಿಗೆ ತಕ್ಷಣವೇ ವಾಪಸು ಮಾಡಬೇಕು; ಆರೋಪಿಗಳ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳ ಬೇಕು; ಜಿಲ್ಲೆಯ ತಪ್ಪಿತಸ್ಥ ಅಧಿಕಾರಿಗಳನ್ನು ಅಮಾನತುಗೊಳಿಸಬೇಕು ಹಾಗೂ ಪ್ರಕರಣದ ಬಗ್ಗೆ ಉನ್ನತ ಮಟ್ಟದ ತನಿಖೆ ನಡೆಸಬೇಕು ಎಂದೂ ಪಕ್ಷ ಆಗ್ರಹಿಸಿದೆ. □

ದೆಹಲಿ ಕಾರ್ಮಿಕರ ಯಶಸ್ವಿ ಮುಷ್ಕರ

ಸಿಐಟಿಯು ನೀಡಿದ ಕರೆಗೆ ಸ್ಪಂದಿಸಿದ ದೆಹಲಿ ಮತ್ತಿತರ ಸುತ್ತಮುತ್ತಲ ಪ್ರದೇಶಗಳ ಕೈಗಾರಿಕಾ ಕಾರ್ಮಿಕರು ಈಚೆಗೆ ಭಾರೀ ಅಪಪ್ರಚಾರ, ದಬ್ಬಾಳಿಕೆಯನ್ನು ಎದುರಿಸಿಯೂ ಯಶಸ್ವಿಯಾಗಿ ಮುಷ್ಕರವನ್ನು ನಡೆಸಿದರು.

ದೆಹಲಿ, ನೋಯ್ಡಾ(ಗೌತಮ ಬುದ್ಧ ನಗರ, ಉತ್ತರಪ್ರದೇಶ), ಫರೀದಾಬಾದ್ ಮತ್ತು ಗಾಜಿಯಬಾದ್‌ನ ಲಕ್ಷಾಂತರ ಕಾರ್ಮಿಕರು ಆಗಸ್ಟ್ 11 ರಂದು ಮುಷ್ಕರ ನಡೆಸಿದರು. 3100 ರೂಪಾಯಿ ಕನಿಷ್ಠ ವೇತನ ನೀಡಿಕೆ, ಪರಿಸರ ಮಾಲಿನ್ಯಕ್ಕೆ ಕಾರಣವಾಗಿರುವ ಕೈಗಾರಿಕೆಗಳನ್ನು ಮುಚ್ಚಬೇಕೆಂಬ ಸುಪ್ರೀಂಕೋರ್ಟ್‌ನ ತೀರ್ಪನ್ನು ಪುನಃ ಪರಿಶೀಲಿಸಬೇಕು ಎಂಬಿತ್ಯಾದಿ ಬೇಡಿಕೆಗಳನ್ನು ಮುಂದಿಟ್ಟು ಮುಷ್ಕರಕ್ಕೆ ಸಿಐಟಿಯು ಕರೆ ಕೊಟ್ಟಿತ್ತು.

ವಾಸ್ತವವಾಗಿ ಕಾರ್ಮಿಕ ವರ್ಗದ ಸ್ಪಂದನಕ್ಕೆ ನಡುಗಿದ ಮಾಲಿಕ ವರ್ಗದವರು ಸಿಐಟಿಯು ವಿರುದ್ಧ ಅಪಪ್ರಚಾರದ ಸಮರವನ್ನೇ ಹೂಡಿದ್ದರು. ಮುಷ್ಕರದ ದಿನ ಅದು ಭಾರೀ ಹಿಂಸಾಚಾರ ಚಟುವಟಿಕೆ ನಡೆಸುತ್ತದೆ, ಅಪಾರ ಆಸ್ತಿಪಾಸ್ತಿ ನಷ್ಟವಾಗುತ್ತದೆ ಎಂದು ಪ್ರಚಾರ ಮಾಡಿದ್ದರು.

ಆದರೆ ಸಿಐಟಿಯು ಅಂಥ ಕೃತ್ಯವನ್ನೇನೂ ನಡೆಸಲಿಲ್ಲ. ನಡೆಸುವುದೂ ಇಲ್ಲ. ವಾಸ್ತವವಾಗಿ ಫ್ಯಾಕ್ಟರಿಗಳ ಮಾಲಿಕರೇ ಗೂಂಡಾಗಳನ್ನು ಕರೆಸಿ ಕಾರ್ಮಿಕರ ಮೆರವಣಿಗೆಗಳ ಮೇಲೆ ಹಲ್ಲೆ ನಡೆಸಿದರು ಮಾತ್ರವಲ್ಲ ತಮ್ಮದೇ ಕಚೇರಿಗಳ ಮೇಲೆ ಕಲ್ಲುಗಳನ್ನು ಹೊಡೆಸಿಕೊಂಡರು. ಕಾರ್ಮಿಕರು ದುಷ್ಕೃತ್ಯ ನಡೆಸಿದ್ದಾರೆ ಎಂದು ಹೇಳಿ ಸಂಘಟನೆಗೆ ಕೆಟ್ಟ ಹೆಸರು ತರುವುದು ಮತ್ತು ವಿಮೆ ಹಣವನ್ನು ಪಡೆಯುವುದು ಮಾಲಿಕರ ಈ ಕೃತ್ಯದ ಉದ್ದೇಶವಾಗಿತ್ತು.

ತಮ್ಮ ಜೀವನದ ಪ್ರಶ್ನೆಯೊಂದಿಗೆ ರಾಜಿ ಮಾಡಿಕೊಳ್ಳ ಬಯಸದ ಲಕ್ಷಾಂತರ ಕಾರ್ಮಿಕರು ತಮ್ಮ ನ್ಯಾಯಬದ್ಧ ಬೇಡಿಕೆಯನ್ನು ಈಡೇರಿಸಿಕೊಳ್ಳುವ ನಿಟ್ಟಿನಲ್ಲಿ ಮುಷ್ಕರವನ್ನು ಯಶಸ್ವಿಗೊಳಿಸಿದರು.

ಇದರಿಂದ ಕೋಪ ಬಂದಿದ್ದು ಮಾಲೀಕರಿಗೆ ಮಾತ್ರವಲ್ಲ, ಸರಕಾರ ಕೂಡ ಕೋಪದಿಂದ ಕುದಿಯಿತು. ಬಂಡವಾಳಗಾರರ ಸಾಕುನಾಯಿಗಳಂತೆ ವರ್ತಿಸಿದ ಅಧಿಕಾರಿಗಳು ಮತ್ತು ಪೋಲೀಸರು ವಾಸ್ತವವಾಗಿ ನೋಯ್ಡಾ ಪ್ರದೇಶದಲ್ಲಿ ಸಿಐಟಿಯು ಮೇಲೆ ಭಯಾನಕ ಹಲ್ಲೆಯನ್ನೇ ನಡೆಸಿದರು.

ಅದು ತುರ್ತುಪರಿಸ್ಥಿತಿಯ ಕರಾಳ ದಿನಗಳನ್ನು ನೆನಪಿಸುವಂತಿತ್ತು. ಝುಗ್ಗಿಗಳು (ಗುಡಿಸಲು) ಮೇಲೆ ಮಧ್ಯರಾತ್ರಿಯಲ್ಲಿ ದಾಳಿ ಮಾಡಿದ್ದ ಪೋಲೀಸರು ನೂರಕ್ಕೂ ಹೆಚ್ಚು ಸಿಐಟಿಯು ಕಾರ್ಯಕರ್ತರನ್ನು ಬಂಧಿಸಿದರು.

ಸೂರ್ಯಾಸ್ತವಾದ ಮೇಲೆ ಮಹಿಳೆಯರನ್ನು ಬಂಧಿಸಬಾರದು ಎಂದು ಸುಪ್ರೀಂ ಕೋರ್ಟ್ ನೀಡಿದ ತೀರ್ಪೇ ಇದೆ. ಆದರೆ ಅದನ್ನೂ ಉಲ್ಲಂಘಿಸಿ ನೋಯ್ಡಾ ಪೋಲೀಸರು ಆ ಭಾಗದ ಪ್ರಮುಖ ಸಿಐಟಿಯು ನಾಯಕಿ ರಾಜಕುಮಾರಿ ಅವರನ್ನು ಬಂಧಿಸಿ ರಾತ್ರಿಯಿಡೀ ಲಾಕಪ್‌ನಲ್ಲಿಟ್ಟಿದ್ದರು. ಪ್ರತಿ ಬಂಧಿತ ಕಾರ್ಮಿಕರ ವಿರುದ್ಧ 12 ರಿಂದ 14 ಕೇಸುಗಳನ್ನು ದಾಖಲಿಸಲಾಗಿದೆ. ಜಾಮೀನಿನ ಮೇಲೆ ಬಿಡುಗಡೆ ಮಾಡಬೇಕಾದರೆ ಪ್ರತಿ ಕೇಸಿಗೆ ಇಬ್ಬರು ಜಾಮೀನುದಾರರು ಬೇಕು ಎಂಬ ಷರತ್ತನ್ನು ವಿಧಿಸಲಾಗಿದೆ.

ನೋಯ್ಡಾ ಜಿಲ್ಲಾ ಮ್ಯಾಜಿಸ್ಟ್ರೇಟ್‌ರ ಮೌಖಿಕ ಆದೇಶದ ಮೇರೆಗೆ ಸಿಐಟಿಯು ಕಚೇರಿಯನ್ನೇ ಮುಚ್ಚಲಾಗಿದೆ. ಅದನ್ನು ತೆರೆಯಲು ಕಾರ್ಯಕರ್ತರು ಯತ್ನಿಸಿದಾಗ ಪೋಲೀಸರು ತಡೆದರು. ಜಿಲ್ಲಾ ಸಿಐಟಿಯು ಅಧ್ಯಕ್ಷ ಮತ್ತು ಪ್ರಧಾನ ಕಾರ್ಯದರ್ಶಿಯವರ ಬಂಧನಕ್ಕೆ ಆಜ್ಞೆಯನ್ನು ಹೊರಡಿಸಲಾಗಿದೆ. ಇಡೀ ಜಿಲ್ಲೆಯಲ್ಲಿ 144ನೇ ಸೆಕ್ಷನ್ ಅನ್ವಯ ನಿಷೇದಾಜ್ಞೆ ವಿಧಿಸಲಾಗಿದೆ. ಸಿಐಟಿಯು ನೇತೃತ್ವದಲ್ಲಿ ಬೆಳೆಯುತ್ತಿರುವ ಕಾರ್ಮಿಕರ ಹೋರಾಟದ ಪ್ರವಾಹವನ್ನು ಏನಾದರೂ ಮಾಡಿ ತಡೆಗಟ್ಟಬೇಕೆನ್ನುವುದು ಆಡಳಿತ ರಂಗದ ಇಚ್ಛೆಯಾಗಿದೆ.

ಆದರೆ ಇದನ್ನು ಸಮರಶೀಲ ಕಾರ್ಮಿಕ ವರ್ಗ ಧಿಕ್ಕರಿಸಿ ಮುನ್ನಡೆಯುತ್ತಾರೆ ಎನ್ನುವುದರಲ್ಲಿ ಯಾವುದೇ ಸಂಶಯವಿಲ್ಲ.

ದೌರ್ಜನ್ಯವನ್ನು ನಿಲ್ಲಿಸದಿದ್ದರೆ ಅದರ ವಿರುದ್ಧವೇ ಇನ್ನೊಂದು ತೀಕ್ಷ್ಣ ಚಳುವಳಿಯನ್ನು ನಡೆಸಬೇಕಾಗುತ್ತದೆ ಎಂದು ಸಿಐಟಿಯು, ಸಿಪಿಐ(ಎಂ) ಮತ್ತು ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ ಜಿಲ್ಲಾ ಆಡಳಿತಕ್ಕೆ ಎಚ್ಚರಿಕೆ ನೀಡಿವೆ. ಕೈಗಾರಿಕೋದ್ಯಮಿಗಳು ಬಿಜೆಪಿ ಮತ್ತು ನೋಯ್ಡಾ ಆಡಳಿತ-ಈ ತ್ರೀಮೂರ್ತಿಗಳ ಅಪವಿತ್ರ ಮೈತ್ರಿಕೂಟ ಹೂಡಿದ ಸಂಚನ್ನು ಸೋಲಿಸಲು ಕಾರ್ಮಿಕರು ಕಟಿಬದ್ಧರಾಗಿದ್ದಾರೆ.

ಎಡ ದುಸ್ಸಾಹಸವಾದಿಗಳ ಹತ್ಯಾಕಾಂಡ

ಬಿಹಾರದ ಒಂದು ಎಡ ದುಸ್ಸಾಹಸವಾದಿ ತಂಡಗಳು ಮೇಲುಗೈ ಪಡೆಯುವ ಪೈಪೋಟಿ ನಡೆಸಿದ್ದು ಒಂದು ಸಂಘಟನೆ ಇನ್ನೊಂದು ತಂಡದ 30 ಜನರನ್ನು ಕೊಂದು ಹಾಕಿದೆ ಎಂದು ವರದಿಯಾಗಿದೆ. ಈ ಘೋರ ಘಟನೆಯೂ ಬಿಹಾರದಲ್ಲಿಯೇ ನಡೆದಿದೆ.

ಛತ್ರಾ ಜಿಲ್ಲೆಯ ಜಿಲ್ಲಾಕೇಂದ್ರದಿಂದ 40 ಕಿ.ಮಿ. ದೂರದಲ್ಲಿರುವ ಅಂಕುದರ ಗ್ರಾಮದಲ್ಲಿ ಸೆಪ್ಟೆಂಬರ್ 6 ರ ರಾತ್ರಿ ನಿಷೇಧಿತ ಮಾವೋವಾದಿ ಕಮ್ಯುನಿಸ್ಟ್ ಕೇಂದ್ರ(ಎಂಸಿಸಿ) ದ ಉಗ್ರಗಾಮಿಗಳು ಸಿಪಿಐ(ಎಂ-ಎಲ್)ನ 30 ಕಾರ್ಯಕರ್ತರನ್ನು ಗುಂಡಿಟ್ಟು ಕೊಂದು ಹಾಕಿ[illegible]. ಈ ಎರಡೂ ನಕ್ಸಲೀಯ ಸಂಘಟನೆಗಳ ಮಧ್ಯ ಈ ವಲಯದಲ್ಲಿ ಮೇಲುಗೈ ಗಾಗಿ ಪೈಪೋಟಿ ನಡೆಯುತ್ತಿದೆ.

ಭೂ ಮಾಲಕರನ್ನು ಕೊಂದು ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ಹುಚ್ಚುತನ ತೋರುವ ಈ ಸಂಘಟನೆಗಳ ಸಿದ್ಧಾಂತ ಎಷ್ಟು ತಪ್ಪು ಎಂಬುದು ಎಲ್ಲರಿಗೂ ಗೊತ್ತು. ಅಂಥದ್ದರಲ್ಲಿ ಪರಸ್ಪರ ಕಚ್ಚಾಟ ನಡೆಸುವ ಮೂಲಕ ಈ ಎಡ ದುಸ್ಸಾಹಸವಾದಿ ಸಂಘಟನೆಗಳು ಎಡ ಚಳುವಳಿಗೆ ಕೆಟ್ಟ ಹೆಸರು ತರುತ್ತವೆ ಎನ್ನುವುದರಲ್ಲಿ ಸಂಶಯವಿಲ್ಲ.

ಸ್ವಾತಂತ್ರ್ಯ ಸುವರ್ಣ ಮಹೋತ್ಸವ ಆಚರಣೆ

ದೇಶದ ಸ್ವಾತಂತ್ರ್ಯ ಸುವರ್ಣಮಹೋತ್ಸವದ ಅಂಗವಾಗಿ ಸಾಮೂಹಿಕ ಸಂಘಟನೆಗಳು ರಾಜ್ಯದ ವಿವಿಧೆಡೆ ಆಚರಿಸಿದ ಸ್ವಾತಂತ್ರ್ಯ ದಿನಾಚರಣೆಯ ವರದಿ

ಶ್ರೀರಾಮಪುರ: ಸ್ವಾತಂತ್ರ್ಯ ಭಾರತದ 50 ವರ್ಷದ ಸುವರ್ಣ ಮಹೋತ್ಸವ ಆಚರಿಸುವ ದಿನದಂದು ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಶ್ರೀರಾಮಪುರ ಸ್ಥಳೀಯ ಸಮಿತಿ ನೇತೃತ್ವದಲ್ಲಿ ಬೆಳಿಗ್ಗೆ 6.45 ಕ್ಕೆ ಪಾದಯಾತ್ರೆ ನಡೆಸಲಾಯಿತು. ರಾಮಚಂದ್ರಪುರದ ಸುಜಾತ ಟಾಕೀಸ್‌ನಿಂದ ಹೊರಟ ಪಾದಯಾತ್ರೆ ಶ್ರೀರಾಮಪುರದ ಪ್ರಮುಖ ರಸ್ತೆಗಳಲ್ಲಿ ಹೊರಟಿತು. ಭಗತ್ ಸಿಂಗ್, ಸುಭಾಷ್ ಚಂದ್ರಬೋಸ್, ಸುಂದರಯ್ಯ, ಮುಜಫರ್ ಅಹ್ಮದ್, ಹರಿಕಿಷನ್ ಸುರ್ಜಿತ್ ಮುಂತಾದವರ ಭಾವಚಿತ್ರವನ್ನು ಹಿಡಿದಿದ್ದು ಆಕರ್ಷಣೆಯಾಗಿತ್ತು. ಬ್ಯಾಂಡ ಹೊಡೆಯುತ್ತಾ ಸಾಗಿದ ಪಾದಯಾತ್ರೆಯಲ್ಲಿ ಸಾಮ್ರಾಜ್ಯಶಾಹಿ ವಿರುದ್ಧ ದೇಶದ ಐಕ್ಯತೆ, ಸಮಗ್ರತೆ ಬಲಪಡಿಸಲು ಸ್ವಾತಂತ್ರ್ಯ ಸಂರಕ್ಷಣೆ ಘೋಷಣೆಗಳು ಮೊಳಗಿದವು.

ಈ ಪಾದಯಾತ್ರೆಯಲ್ಲಿ ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ|| ಜಿ.ಎನ್.ನಾಗರಾಜ್ ಭಾಗವಹಿಸಿದ್ದರು. ಈ ಪಾದಯಾತ್ರೆ ಶ್ರೀರಾಮಪುರದ ಪಕ್ಷದ ಕಛೇರಿಯಲ್ಲಿ ಕೊನೆಗೊಂಡು ಪಕ್ಷದ ಕಚೇರಿ ಮುಂದೆ ರಾಷ್ಟ್ರಧ್ವಜವನ್ನು ಹಾರಿಸಲಾಯಿತು. ಧ್ವಜಾರೋಹಣವನ್ನು ಪ್ರದೇಶದ ಹಿರಿಯ ಪಕ್ಷದ ಸದಸ್ಯರಾದ ಚೆನ್ನಪ್ಪ ನೆರವೇರಿಸಿದರು.

ಈ ಸಮಾರಂಭದಲ್ಲಿ ಮಾತನಾಡಿದ ಜಿ.ಎನ್.ನಾಗರಾಜ್ ಸ್ವಾತಂತ್ರ್ಯ ಹೋರಾಟದ ಹಲವಾರು ಹಂತಗಳನ್ನು ವಿವರಿಸಿ 50 ವರ್ಷಗಳ ನಂತರದಲ್ಲಿ ಭವಿಷ್ಯ ಭಾರತ ಕಟ್ಟಲು ಎಲ್ಲಾ ಸಮಸ್ಯೆಗಳು ಎದುರಿಸಲು ಹೋರಾಟ ನಡೆಸಬೇಕೆಂಬ ಕರೆ ನೀಡಿದರು. ಈ ಪಾದಯಾತ್ರೆ ನೇತೃತ್ವವನ್ನು ಶ್ರೀರಾಮಪುರ ಪ್ರದೇಶ ಸಮಿತಿ ಕಾರ್ಯದರ್ಶಿ ಗೋಪಾಲಕೃಷ್ಣ ಚಂದ್ರು, ಪಾರ್ಥಿಬನ್ ವಹಿಸಿದ್ದರು.

ಡಿವೈಎಫ್ಐನಿಂದ ಸ್ವಾತಂತ್ರ್ಯ ಸುವರ್ಣಮಹೋತ್ಸವ ಆಚರಣೆ

ಸ್ವಾತಂತ್ರ್ಯ ಸುವರ್ಣಮಹೋತ್ಸ ವವನ್ನು ವೈವಿಧ್ಯಮಯ ರೀತಿಯಲ್ಲಿ 'ಸ್ವಾತಂತ್ರ್ಯ ಸಂರಕ್ಷಣಾ' ದಿನವನ್ನಾಗಿ ಬೆಂಗಳೂರು ಡಿವೈಎಫ್ಐ ಘಟಕಗಳು ಆಚರಿಸಿದವು.

ರಕ್ತದಾನ ಶಿಬಿರ: ಶ್ರೀರಾಮಪುರದ ಲಕ್ಷ್ಮಿನಾರಾಯಣ ಪುರ ಘಟಕ ಸಮಗ್ರತೆ-ಐಕ್ಯತೆ-ಸ್ವಾತಂತ್ರ್ಯ ಸಂರಕ್ಷಣೆಗಾಗಿ ರಕ್ತದಾನ ಶಿಬಿರ ಏರ್ಪಡಿಸಿತ್ತು. 21 ಯುವಜನರು ರಕ್ತದಾನ ಮಾಡಿದರು. ಈ ಧ್ವಜಾರೋಹಣವನ್ನು ಶ್ರೀರಾಮಪುರ ಆರಕ್ಷಕ ಠಾಣೆಯ ಆರಕ್ಷಕ ನಿರೀಕ್ಷಕರಾದ ಶ್ರೀಯುತ ಅಪ್ಪಣ್ಣನವರು ನೆರವೇರಿಸಿ, ಮಾತನಾಡಿ ಯುವಜನರು ನವಭಾರತ ಕಟ್ಟಲು ಮುಂದಾಗಬೇಕೆಂದು ಕರೆ ನೀಡಿದರು.

ಈ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಸಿಐಟಿಯು ಜಿಲ್ಲಾಕಾರ್ಯದರ್ಶಿ ಕಾ|| ಮೀನಾಕ್ಷಿ ಸುಂದರಂ ಮಾತನಾಡಿ ಸ್ವಾತಂತ್ರ್ಯಕ್ಕಾಗಿ ಸಾವಿರಾರು ಜನರು ಹೋರಾಟ ನಡೆಸಿದ್ದಾರೆ. ಅವರ ಕನಸುಗಳು ನನಸಾಗಲಿಲ್ಲ. ಆದಕ್ಕಾಗಿ ನಾವು ಮುಂದೆ ನನಸು ಮಾಡುವತ್ತ ಮುಂದಾಗಬೇಕೆಂದರು.

ಈ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದ ಡಿವೈಎಫ್ಐ ಜಿಲ್ಲಾ ಕಾರ್ಯದರ್ಶಿ ಗೋಪಾಲಕೃಷ್ಣರವರು ಸ್ವಾತಂತ್ರ್ಯ ಹೋರಾಟ ಭಗತ್‌ಸಿಂಗ್, ರಾಜಗುರು, ಸುಖದೇವ, ಸುಭಾಷ್ ಚಂದ್ರಬೋಸ್ ಮುಂತಾದ ಯುವ ಮುಖಂಡರು ತಮ್ಮ ಪ್ರಾಣಗಳನ್ನು ಈ ದೇಶದ ಸ್ವಾತಂತ್ರ್ಯಕ್ಕಾಗಿ ಅರ್ಪಿಸಿದ್ದಾರೆ. ಅವರು ಇಂದಿನ ಯುವಜನರಿಗೆ ಸ್ಫೂರ್ತಿಯಾಗಬೇಕು. ಹರಿಕಿಷನ್ ಸಿಂಗ್ ಸುರ್ಜಿತ್‌ರಂತಹ ಸ್ವಾತಂತ್ರ್ಯ ಹೋರಾಟಗಾರರು ನಮ್ಮ ಮುಂದೆ ಇವತ್ತಿಗೂ ಇದ್ದಾರೆ. ಇವರ ಮಾರ್ಗದರ್ಶನ ಈ ದೇಶಕ್ಕೆ ಅಗತ್ಯವಾಗಿ ಬೇಕಾಗಿದೆ. ಭ್ರಷ್ಟಾಚಾರ, ನಿರುದ್ಯೋಗ, ಅನಕ್ಷರತೆ ವಿರುದ್ಧ ಹೋರಾಡೋಣವೆಂದು ತಿಳಿಸಿದರು.

ಡಾ|| ಮಹಾಂತದೇವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದರು.

ರಕ್ತದಾನ ಶಿಬಿರವನ್ನು ಡಿವೈಎಫ್ಐ ಲಕ್ಷ್ಮಿನಾರಾಯಣ ಪುರ ಘಟಕದ ಅಧ್ಯಕ್ಷರಾದ ಎಸ್.ಗೋಪಾಲ್‌ರವರು ರಕ್ತದಾನ ಮಾಡುವುದರ ಮೂಲಕ ಶಿಬಿರವನ್ನು ಉದ್ಘಾಟಿಸಿದರು. ಹಮ್ ಲೂಂ ಮಾಲೀಕರಾದ ಪುರುಷೋತ್ತಮ್ ಎಲ್ಲರಿಗೂ ಸಿಹಿತಿಂಡಿ ಹಂಚಿದರು.

ಮಧ್ಯರಾತ್ರಿ ಧ್ವಜಾರೋಹಣ-ಸೈಕಲ್ ಸ್ಪರ್ಧೆ: ವಿಜಯನಗರ ಘಟಕವು ಮಧ್ಯರಾತ್ರಿ ಧ್ವಜಾರೋಹಣ ನಡೆಸಿತು. ಈ ಕಾರ್ಯಕ್ರಮದಲ್ಲಿ ಡಿವೈಎಫ್ಐ ರಾಜ್ಯ ಸಮಿತಿ ಸದಸ್ಯರಾದ ಬಾಲಕೃಷ್ಣ ಶೆಟ್ಟಿ ಭಾಗವಹಿಸಿ ಮಾತನಾಡಿದರು. ಸ್ಥಳೀಯ ನಗರ ಸಭಾ ಸದಸ್ಯರು ಭಾಗವಹಿಸಿದರು. ಬೆಳಿಗ್ಗೆ ನಿಧಾನ ಸೈಕಲ್ ಸ್ಪರ್ಧೆ ಏರ್ಪಡಿಸಲಾಯಿತು. ನಾಗರೀಕರು ಸೇರಿದಂತೆ ಒಟ್ಟು 300 ಕ್ಕೂ ಹೆಚ್ಚು ಜನ ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಶಾಲಾ ಮಕ್ಕಳಿಗೆ ಕ್ರೀಡಾ ಸ್ಪರ್ಧೆ: ಮಾಗಡಿ ತಾಲ್ಲೋಕ್ ತಿಪ್ಪಗೊಂಡನಹಳ್ಳಿ ಡಿವೈಎಫ್ಐ ಘಟಕ ಮತ್ತು ಬೆಂಗಳೂರು ನಗರ ನೀರು ಸರಬರಾಜು ಮಂಡಳಿಯ ನೌಕರರ ಸಂಘ ಜತೆಗೂಡಿ ಸ್ವಾತಂತ್ರ್ಯ 50ನೇ ವಾರ್ಷಿಕೋತ್ಸವವನ್ನು ಆಚರಿಸಿ ಮಕ್ಕಳಿಗೆ ವಿವಿಧ ಕ್ರೀಡೆಗಳನ್ನು ನಡೆಸಿತು. ಬಹುಮಾನ ವಿತರಣೆಯನ್ನು ಡಿವೈಎಫ್ಐ ಖಜಾಂಚಿ ಶ್ರೀನಿವಾಸ್ ವಿತರಣೆ ಮಾಡಿ ನಂತರ ಭಾಷಣ ಮಾಡಿದರು. ದೇಶದ ಸಂದಿಗ್ಧ ಪರಿಸ್ಥಿತಿಯನ್ನು ವಿವರಿಸಿ ಸ್ವಾತಂತ್ರ್ಯ ಯೋಧರ ಹೋರಾಟವನ್ನು ನೆನಪಿಗೆ ತಂದು ಅವರ ಕನಸುಗಳನ್ನು ನನಸು ಮಾಡಲು ಡಿವೈಎಫ್ಐ ನಂತಹ ಯುವಜನ ಸಂಘಟನೆಯನ್ನು ಬಲಿಷ್ಠಗೊಳಿಸಲು ಕರೆ ನೀಡಿದರು. ಈ ಕಾರ್ಯಕ್ರಮದ ನೇತೃತ್ವವನ್ನು ನಿಜಲಿಂಗಪ್ಪ ವಹಿಸಿದ್ದರು.

ಸಾಂಸ್ಕೃತಿಕ ಕಾರ್ಯಕ್ರಮ: ಚಿಕ್ಕಪೇಟೆ ಗೂರ್ ಗೇಟ್ ಘಟಕವು ಬೆಳಗ್ಗೆ ಧ್ವಜಾರೋಹಣ ಕಾರ್ಯಕ್ರಮವನ್ನು ನಡೆಸಿ, ಪ್ರತಿ ಮನೆಗೂ ಕಾರ್ಯಕರ್ತರ ತಂಡ ಪಾದಯಾತ್ರೆ ನಡೆಸಿ ಸಿಹಿತಿಂಡಿ ವಿತರಣೆ ಮಾಡಿದರು. 'ಸಂಗೀತ ಸಂಜೆ' ಕಾರ್ಯಕ್ರಮ ಏರ್ಪಡಿಸಿದ್ದರು. ಈ ಕಾರ್ಯಕ್ರಮದ ನೇತೃತ್ವವನ್ನು ಘಟಕದ ಅಧ್ಯಕ್ಷರಾದ ಆನಂದಕುಮಾರ್, ಕಾರ್ಯದರ್ಶಿ ಲಕ್ಷ್ಮಣ್ ವಹಿಸಿದ್ದರು. ಈ ಕಾರ್ಯಕ್ರಮದಲ್ಲಿ 200 ಜನ ಭಾಗವಹಿಸಿದ್ದರು. ಬಡ ಮಕ್ಕಳಿಗೆ ಹೊದಿಕೆ ಮತ್ತು ಹೆಚ್ಚು ಅಂಕ ಗಳಿಸಿದ ಮಕ್ಕಳಿಗೆ ಬಹುಮಾನ ನೀಡುವುದಲ್ಲದೆ ಅಂದು ವಿಚಾರ ಸಂಕಿರಣ ಮತ್ತು ದೇಹದಾರ್ಢ್ಯ ಪ್ರದರ್ಶನ, ಇತರ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಲಾಯಿತು.

ಮಕ್ಕಳಿಂದ ವೈವಿಧ್ಯಮಯ ಕಾರ್ಯಕ್ರಮ: ಮಾಗಡಿ ರಸ್ತೆಗೋಪಾಲಪುರ ಘಟಕದ ಸ್ವಾತಂತ್ರ್ಯ ದಿನಾಚರಣೆಯ ಕಾರ್ಯಕ್ರಮದಲ್ಲಿ ಜಿಲ್ಲಾ ಸಮಿತಿ ಉಪಾಧ್ಯಕ್ಷರಾದ ಎ.ಎಂ.ರವಿಚಂದ್ರನ್, ಸಿಐಟಿಯು ಕಾರ್ಮಿಕರ ಮುಖಂಡರಾದ ಪಿ.ಕೆ.ಸುಬ್ರಮಣಿ, ಸ್ಥಳೀಯ ನಗರ ಸಭಾ ಸದಸ್ಯರು ಭಾಗವಹಿಸಿ ಮಾತನಾಡಿದರು. ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ, ಯೋಗಾಸನ ಪ್ರದರ್ಶನ ಏರ್ಪಡಿಸಲಾಗಿತ್ತು.

ಮೈಸೂರು: ಭಾರತ ಸ್ವಾತಂತ್ರ್ಯದ ಸುವರ್ಣ ಮಹೋತ್ಸವದ ಅಂಗವಾಗಿ ಸಿಐಟಿಯು ಮೈಸೂರು ಜಿಲ್ಲಾ ಸಮಿತಿ ಕಛೇರಿಯಲ್ಲಿ ರಾಷ್ಟ್ರದ ಧ್ವಜಾರೋಹಣವನ್ನು ಮೈಸೂರು ಹೋಟೇಲ್ ವರ್ಕರ್ಸ್ ಯೂನಿಯನ್ ಕಾರ್ಯದರ್ಶಿ ಎಪಿಪ್ಪಣ್ಣ ಮಾಡಿದರು. ಧ್ವಜಾರೋಹಣದ ನಂತರ ಕಾರ್ಮಿಕರು

ಪುಟ 7 ನೋಡಿ



ಯುಪಿಎಸ್ ಕಾರ್ಮಿಕರ ವಿಜಯೋತ್ಸವ

UPS ಕಾರ್ಮಿಕರ ವಿಜಯ

ಅಮೆರಿಕನ್ ಕಾರ್ಮಿಕರ ಚಳುವಳಿಯ ಪುನಶ್ಚೇತನದ ಹರಿಕಾರ?

ಅಮೆರಿಕದಲ್ಲಿ ಯು.ಪಿ.ಎಸ್. (ಯುನೈಟೆಡ್ ಪಾರ್ಸೆಲ್ ಸರ್ವಿಸಸ್-UPS) ಕಾರ್ಮಿಕರ ಎರಡು ವಾರದ ಮುಷ್ಕರ ಅಧ್ಭುತ ವಿಜಯದೊಂದಿಗೆ ಅಭಿವೃದ್ಧಿ ಬಂಡವಾಳಶಾಹಿ ದೇಶಗಳಲ್ಲಿ ಕಾರ್ಮಿಕರು ದೈತ್ಯ ಕಂಪನಿಗಳ ಲಾಭದ ದುರಾಸೆಗೆ ಕಡಿವಾಣ ಹಾಕಲಾರಂಭಿಸಿದ್ದಾರೆ. 80ರ ದಶಕದ ಕಾರ್ಮಿಕ ಚಳುವಳಿಯ ಹಿಂಜರಿತ ಹಿಂದೆ ಉಳಿದು, ಕಾರ್ಮಿಕರು ಬಂಡವಾಳದ ಕೊಂಬನ್ನು ಹಿಡಿದು ಹಣಾಹಣಿ ಹೋರಾಟಕ್ಕೆ ಇಳಿಯುತ್ತಿರುವುದರ ಪ್ರತೀಕವಿದು. ಎರಡೇ ವಾರದಲ್ಲಿ ಯು.ಪಿ.ಎಸ್.ನ ಕಾರ್ಮಿಕರು ತಮ್ಮ ಎಲ್ಲಾ ಬೇಡಿಕೆಗಳನ್ನು ಪಡೆದು, ಅದ್ಭುತ ವಿಜಯ ಸಾಧಿಸಿದರು.

ಯು.ಪಿ.ಎಸ್. ಅಮೆರಿಕದಲ್ಲಿ ಪಾರ್ಸೆಲ್ ಸಾಗಾಣಿಕೆ ಮಾಡುವ ಅತಿ ದೊಡ್ಡ ಕಂಪನಿ. 21 ಶತಕೋಟಿ ಡಾಲರ್‌ನಷ್ಟು ಬೆಲೆಬಾಳುವ ಯು.ಪಿ.ಎಸ್. 1996 ರಲ್ಲಿ ಒಂದು ಶತಕೋಟಿ ಡಾಲರು ಲಾಭಗಳಿಸಿತು. ಪಾರ್ಸೆಲ್ ಸಾಗಾಣಿಕೆ ಕೈಗಾರಿಕೆಯಲ್ಲಿ ಶೇಕಡಾ 80 ರಷ್ಟು ಮಾರುಕಟ್ಟೆ ವ್ಯವಹಾರ ಹೊಂದಿರುವ ಯು.ಪಿ.ಎಸ್. ಒಂದು ರೀತಿಯಲ್ಲಿ ಅಮೇರಿಕದ ಪಾರ್ಸೆಲ್ ಸಾಗಾಣಿಕೆಯಲ್ಲಿ ಗುತ್ತೇದಾರಿ ನಿಯಂತ್ರಣ ಹೊಂದಿದೆ. ಇಲ್ಲಿ ಮೂರು ಲಕ್ಷ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಇಂತಹ ಕಂಪನಿಗಳ ವಿರುದ್ಧ ಕಾರ್ಮಿಕರ ಹೋರಾಟ ವಿಶಿಷ್ಟ ಮಹತ್ವದ್ದಾಗಿತ್ತು.

ಯು.ಪಿ.ಎಸ್. ಕಾರ್ಮಿಕರು ಮುಖ್ಯವಾಗಿದ್ದ ನಾಲ್ಕು ಬೇಡಿಕೆಗಳು ವೇತನ ಮತ್ತು ಪೆನ್‌ಶನ್ ಏರಿಕೆ, ಅರೆಕಾಲಿಕ ಉದ್ಯೋಗಗಳನ್ನು ಪೂರ್ಣಕಾಲಿಕ ಉದ್ಯೋಗಗಳಾಗಿ ಪರಿವರ್ತಿಸುವುದು, ಉದ್ಯೋಗದ ಭದ್ರತೆ ಮತ್ತು ಉದ್ಯೋಗದ ಸುರಕ್ಷಿತತೆ. ಈ ಎಲ್ಲಾ ಬೇಡಿಕೆಗಳನ್ನು ಎರಡು ವಾರಗಳ ಮುಷ್ಕರದ ನಂತರ ಯು.ಪಿ.ಎಸ್. ಮನ್ನಿಸಬೇಕಾಯಿತು. ಯು.ಪಿ.ಎಸ್.ನ ಕಾರ್ಮಿಕರಲ್ಲಿ ಶೇಕಡಾ 43 ಮಾತ್ರ ಪೂರ್ಣಕಾಲಿಕ ಕಾರ್ಮಿಕರು. ಉಳಿದ ಶೇಕಡಾ 57 ಅರೆ-ಕಾಲಿಕ ಕಾರ್ಮಿಕರು. 70 ರ ದಶಕದಲ್ಲಿ ಅಮೇರಿಕಾದ ಕಾರ್ಪೋರೇಷನ್‌ಗಳು ತಮ್ಮ ಲಾಭ ಏರಿಸಲು, ಕಾರ್ಮಿಕರನ್ನು ಬಗ್ಗು ಬಡಿಯಲು ಈ ಅರೆ-ಕಾಲಿಕ ಉದ್ಯೋಗದ ಪದ್ಧತಿ ಆರಂಭಿಸಿದರು. ಅದು ಪೆಡಂಭೂತವಾಗಿ ಕಾರ್ಮಿಕರ ಚಳುವಳಿಯನ್ನು ಕಾಡುತ್ತಿತ್ತು. ಕಾರ್ಮಿಕರ ಸಂಘಟನೆಗೆ ಮಾರಕವಾಗಿತ್ತು. ಈ ಒಪ್ಪಂದದ ಭಾಗವಾಗಿ ಇಪ್ಪತ್ತು ಸಾವಿರ ಅರೆ-ಕಾಲಿಕ ಕಾರ್ಮಿಕರು ಪೂರ್ಣ-ಕಾಲಿಕ ಕಾರ್ಮಿಕರಾಗಿ ಬದಲಾವಣೆ, ಪೆನ್‌ಶನ್ ನಿಧಿಯನ್ನು ದುರುಪಯೋಗಪಡಿಸುತ್ತಿದ್ದ ಕಂಪನಿಯ ಟ್ರಸ್ಟಿನಿಂದ ಕಾರ್ಮಿಕರ ನಿಯಂತ್ರಣಕ್ಕೆ ವರ್ಗಾವಣೆ. ಸುರಕ್ಷಿತಕ್ಕೆ ಕ್ರಮಗಳು, ವೇತನ ಏರಿಕೆ, 5 ವರ್ಷಗಳ ಹೊಸ ಕಾಂಟ್ರಾಕ್ಟು-ಇವೆ.

ಸರಕಾರದ ಮುಷ್ಕರ ಮುರುಕತನವೇ ಮುರಿಯಿತು!

1981 ರ ಏರ್ ಟ್ರಾಫಿಕ್ ಕಂಟ್ರೋಲರ್‌ಗಳ ಮುಷ್ಕರ ದಿಂದ ಆರಂಭವಾದ 'ಸರಕಾರದ ಮುಷ್ಕರ ಮುರುಕುತನ' ದ 15 ವರ್ಷಗಳ ಕರಾಳ ಅವಧಿ ಯುಪಿಎಸ್ ಮುಷ್ಕರದ ವಿಜಯದಿಂದ ಕೊನೆಗೊಂಡಿದೆ. 1981 ರಲ್ಲಿ 12 ಸಾವಿರ ಏರ್ ಟ್ರಾಫಿಕ್ ಕಂಟ್ರೋಲರ್ ಗಳು ಮುಷ್ಕರ ಹೂಡಿದಾಗ, ಆಗಿನ ಅಧ್ಯಕ್ಷ ರೇಗನ್ ಅವರಿಗೆ ಎರಡು ವಾರಗಳೊಳಗೆ ಕೆಲಸಕ್ಕೆ ಬರಬೇಕೆಂದು ಎಚ್ಚರಿಕೆ ನೀಡಿದ. ಅದಕ್ಕೆ ಅವರು ಲೆಕ್ಕಿಸದಿದ್ದಾಗ, ಅವರೆಲ್ಲರನ್ನು ಬರ್ಖಾಸ್ತು ಮಾಡಿದ್ದ. 72 ಯೂನಿಯನ್ ನಾಯಕರ ಮೇಲೆ ಭಾರಿ ದಂಡ, 5 ನಾಯಕರ ಬಂಧನವೂ ನಡೆಯಿತು. ಅದರ ನಂತರ ನಡೆದ ಹೆಚ್ಚು ಕಡಿಮೆ ಎಲ್ಲಾ ಪ್ರಮುಖ ಮುಷ್ಕರಗಳನ್ನು 'ಸರ್ಕಾರಿ ಭಯೋತ್ಪಾದನೆ' ಯಿಂದ ಮುರಿಯಲಾಗಿತ್ತು. 1979-89 ಅವಧಿಯಲ್ಲಿ ಶೇಕಡಾ 80 ಕಾರ್ಮಿಕರ ಆದಾಯದಲ್ಲಿ ತೀವ್ರ ಕಡಿತವಾಗಿತ್ತು. 1994 ರಲ್ಲಿ ಯುಪಿಎಸ್ ನ ಕಾರ್ಮಿಕರ ಮುಷ್ಕರವೂ ವಿಫಲವಾಗಿತ್ತು. ಈ ಬಾರಿ ಕಾರ್ಮಿಕರ ಅಭೂತಪೂರ್ವ ಐಕ್ಯತೆ ಉತ್ಸಾಹದಾಯಕವಾಗಿತ್ತು. ಯೂನಿಯನ್ ಸದಸ್ಯರಲ್ಲದವರಲ್ಲಿ ಶೇಕಡಾ 99 ರಷ್ಟು ಕಾರ್ಮಿಕರು ಮುಷ್ಕರದಲ್ಲಿ ಭಾಗವಹಿಸಿದರು. ಯುಪಿಎಸ್ ಮುಷ್ಕರಕ್ಕೆ ದೊರೆತ ಸಾರ್ವಜನಿಕರ ಬೆಂಬಲ ಸಹ ಆಶ್ಚರ್ಯಜನಕವಾಗಿತ್ತು. ದೈತ್ಯ ಕಾರ್ಪೋರೇಷನ್‌ಗಳ ವಿರುದ್ಧ ಸೆಡ್ಡು ಹೊಡೆದು ನಿಂತ ಕಾರ್ಮಿಕರನ್ನು ಜನ ಮೆಚ್ಚಿಕೊಂಡರು. ಕಂಪನಿಯ ಲಾಭ, ಮಾರುಕಟ್ಟೆ ಪಾಲು ಇತ್ಯಾದಿ ಬೂರ್ಜ್ವಾ ಪ್ರಚಾರದ ಬಗ್ಗೆ ಯಾರೂ ತಲೆಕೆಡಿಸಿಕೊಳ್ಳಲಿಲ್ಲ. ಮುಷ್ಕರಕ್ಕೆ ಇದ್ದ ಸಾರ್ವಜನಿಕ ಬೆಂಬಲದಿಂದಾಗಿಯೇ, ಕಂಪನಿಯಾಗಲಿ ಅಧ್ಯಕ್ಷ ಕ್ಲಿಂಟನ್ ಆಗಲಿ ಮುಷ್ಕರ ಮುರಿಯಲು, ಕಠಿಣ ಕ್ರಮ ತೆಗೆದುಕೊಳ್ಳುವುದು ಸಾಧ್ಯವಾಗಲಿಲ್ಲ.

ಯುಪಿಎಸ್ ಮುಷ್ಕರದ ವಿಜಯ ಹೊಸ ಸಮರಶೀಲ ಕಾರ್ಮಿಕ ಚಳುವಳಿಯ ನೇರ ಫಲ. 1995 ರಲ್ಲಿ ಬದಲಾದ ಹೊಸ ನಾಯಕತ್ವದಲ್ಲಿ AFL-CIO (ಅಮೆರಿಕದ ಕೇಂದ್ರ ಟ್ರೇಡ್ ಯೂನಿಯನ್) ಹೊಸ ಯೂನಿಯನ್ ಶಕ್ತಿಯ ಕೇಂದ್ರವಾಗಿದೆ. ಯುಪಿಎಸ್ ಯೂನಿಯನ್ ನ ಮುಷ್ಕರ ನಿಧಿ ಖಾಲಿಯಾದಾಗ, AFL-CIO ವಾರಕ್ಕೆ 11 ದಶಲಕ್ಷ ಡಾಲರಿನ ಮುಷ್ಕರ ನಿಧಿ ನೀಡಿ ಸಹಾಯ ಮಾಡಿತು. 1995 ರಿಂದ AFL-CIO ನ ಹೊಸ ನಾಯಕತ್ವದಲ್ಲಿ ಟ್ರೇಡ್ ಯೂನಿಯನ್ ಚಳುವಳಿ ಸಮರಶೀಲ ಹಾದಿ ಹಿಡಿದಿದೆ. ಯುಪಿಎಸ್ ಮುಷ್ಕರದಲ್ಲಿ ವಿಜಯ ಕಾರ್ಮಿಕ ವರ್ಗದ ಮುಂಬರುವ ವಿಜಯ ಸರಣಿಯ ಮುನ್ಸೂಚಕ.

ಅಭಿನಂದನೆ

ಯುಪಿಎಸ್ ಕಾರ್ಮಿಕರ ಮಹಾನ್ ವಿಜಯ ಅಮೇರಿಕದಲ್ಲಿ ಮಾತ್ರವಲ್ಲ ಅಂತ್ರರಾಷ್ಟ್ರೀಯವಾಗಿ ಕಾರ್ಮಿಕರಿಗೆ ಉತ್ಸಾಹ ತುಂಬಿದೆ. ಫ್ರಾನ್ಸ್‌ನ ಕಾರ್ಮಿಕರು ಮತ್ತು ಅವರ ಯೂನಿಯನ್ ಗಳು ಯುಪಿಎಸ್ ಹಾಗೂ AFL-CIO ಗೆ ಕಳಿಸಿದ ಅಭಿನಂದನಾ ಸಂದೇಶದಲ್ಲಿ 'ಕಾರ್ಮಿಕರ ಆತ್ಮಗೌರವ ಹೆಚ್ಚಿಸಿದ್ದಕ್ಕೆ, ಮುಷ್ಕರ ಮುರಿಯುವ, ನವ-ಲಿಬರಲ್ ವಾದವನ್ನು ಅದರ ತವರುಮನೆಯಲ್ಲೇ ಹೊಡೆದು ಬಿಸಾಕಿದ್ದಕ್ಕೆ ಅಭಿನಂದನೆ" ಎಂದಿದ್ದಾರೆ.

ಇರಾನ್‌ನಲ್ಲಿ ಹೊಸ ಮಂತ್ರಿಮಂಡಲ ಬದಲಾವಣೆಯ ಹೊಸಗಾಳಿ

ಇತ್ತೀಚೆಗೆ ಭಾರಿ ಬಹುಮತದಿಂದ ಆಯ್ಕೆಯಾದ ಅಧ್ಯಕ್ಷ ಖಾತಮಿಯ ಮಂತ್ರಿಮಂಡಲ ರಚನೆ ಇರಾನ್ ನಲ್ಲಿ ಬೀಸುತ್ತಿರುವ ಹೊಸ ಗಾಳಿಯ ಸೂಚನೆ ಕೊಟ್ಟಿದೆ. ಮಹಿಳೆಯರ ಉಡುಪು ತೊಡುಪು, ಸಾರ್ವಜನಿಕ ಚಟುವಟಿಕೆಗಳ ಮೇಲೆ, ಸಂಗೀತ ಮತ್ತು ಇತರ ಕಲೆಗಳ ಮೇಲೆ ತೀವ್ರ ನಿಷೇಧ ಹೇರಿದ್ದ ಮೂಲಭೂತವಾದಿ ನೀತಿ ಸಡಿಲವಾಗ ಹತ್ತಿದೆ.

ಅಧ್ಯಕ್ಷ ಖಾತಮಿ ಆಯ್ಕೆ ಮಾಡಿದ ಐದು ಉಪಾಧ್ಯಕ್ಷರಲ್ಲಿ ಒಬ್ಬಾಕೆ ಮಹಿಳೆ-ಅದೂ 36 ವರ್ಷದ ಅಧ್ಯಾಪಕಿ. ಸಂಸ್ಕೃತಿ ಮಂತ್ರಿಯಾಗಿ, ಅತಾಉಲ್ಲಾ ಮೊಹಜೆರಾನಿ ಅವರ ನೇಮಕ ಸಹ ಇರಾನ್‌ನಲ್ಲಿ ಬದಲಾವಣೆ ಆರಂಭವಾಗಿದೆ ಎಂದು ಸೂಚಿಸುತ್ತದೆ. ಪುಸ್ತಕ ಅಂಗಡಿಗಳನ್ನು ಸುಡುವುದು, ವಿಶ್ವವಿದ್ಯಾಲಯದ ಅಧ್ಯಾಪಕರಿಗೆ ಹೊಡೆಯುವುದು, ಮ್ಯಾಗಝಿನ್ ಆಫೀಸುಗಳಿಗೆ ಆಕ್ರಮಣ ಮಾಡುವುದು ಇವೆಲ್ಲವನ್ನು ನಾನು ಖಂಡಿಸುತ್ತೇನೆ ಎಂದಿದ್ದ ಈತನ ಆಯ್ಕೆಯನ್ನು ಇರಾನಿ ಪಾರ್ಲಿಮೆಂಟು (ಮಜ್ಲೀಸ್) ಅನುಮೋದಿಸಿದ್ದೇ ದೊಡ್ಡ ಆಕ್ರಮಣ.ಆದರೆ ಇರಾನಿನಲ್ಲಿ ಮೂಲಭೂತವಾದದ ನೀತಿ ಬದಲಾಗಿದೆ ಎಂದು ಹೇಳುವಂತಿಲ್ಲ.ಸಲ್ಮಾನ್ ರಶೀದ್ ಮೇಲಿನ 'ಮರಣದಂಡನೆ' ಮುಂದುವರೆಯುತ್ತಿದೆ. ಅಮೇರಿಕನ್ ಸಾಮ್ರಾಜ್ಯಶಾಹಿಯ ವಿರುದ್ಧ ನೀತಿ ಏನು ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಅಮೆರಿಕನ್ ಸಾಮ್ರಾಜ್ಯಶಾಹಿಯ ವಿರುದ್ಧನೀತಿ ಸಡಿಲ ಗೊಳ್ಳುವುದು ಎಂದೂ ವೀಕ್ಷಕರು ಅಭಿಪ್ರಾಯಪಟ್ಟಿದ್ದಾರೆ.

ಶ್ರೀಲಂಕಾದಲ್ಲಿ ಹೊಸ ಸಂವಿಧಾನಕ್ಕೆ ಜನಮತ ಸಂಗ್ರಹಕ್ಕೆ ಸನ್ನಾಹ

ಶ್ರೀಲಂಕಾದಲ್ಲಿ ಹೆಚ್ಚಿನ ವಿಕೇಂದ್ರೀಕರಣ, ಪ್ರಾದೇಶಿಕ ಸ್ವಾಯತ್ತತೆ ಕೊಡುವ ಹೊಸ ಸಂವಿಧಾನ ಒಂದಕ್ಕೆ ಜನರ ಒಪ್ಪಿಗೆ ಪಡೆಯಲು, ಅಧ್ಯಕ್ಷ ಚಂದ್ರಿಕಾ ಕುಮಾರತುಂಗೆ ನಿರ್ಧರಿಸಿದ್ದಾರೆ. ಇದು ತಮಿಳು ಸಮಸ್ಯೆ ಸೇರಿದಂತೆ ದೇಶವನ್ನು ಕಾಡುತ್ತಿರುವ ಜನಾಂಗೀಯ ಸಮಸ್ಯೆಯನ್ನು ಬಗೆಹರಿಸಬಲ್ಲುದು ಎಂದು ಅವರು ಈಗಾಗಲೇ ಹೊಸ ಸಂವಿಧಾನದ ಬಗ್ಗೆ ಪ್ರಚಾರ ಮಾಡಲಾರಂಭಿಸಿದ್ದಾರೆ. ಇಂತಹ ಒಂದು ಸಂವಿಧಾನವನ್ನು ಪಾರ್ಲಿಮೆಂಟು ಸೆಲೆಕ್ಟ್ ಸಮಿತಿ ಒಂದು ತಯಾರಿಸುತ್ತಿದೆ. ಇದನ್ನು ಪಾರ್ಲಿಮೆಂಟಿನಲ್ಲಿ ಮಂಜೂರು ಮಾಡಿಸಲು ಬೇಕಾದ ಮೂರನೇ ಎರಡು ಬಹುಮತ ಇಲ್ಲದ್ದರಿಂದ ಮತ್ತು ವಿರೋಧ ಪಕ್ಷಗಳು ಈ ಸಂವಿಧಾನಕ್ಕೆ ಒಪ್ಪುತ್ತಿಲ್ಲವಾದ್ದರಿಂದ ಅಧ್ಯಕ್ಷೆ ಚಂದ್ರಿಕಾ ಈ ಸಾಹಸಕ್ಕಿಳಿದಿದ್ದಾರೆ ಎನ್ನಲಾಗಿದೆ.

ಜನಾಂಗೀಯ ಧಾರ್ಮಿಕ ಮತ್ತಿತರ ಅಲ್ಪಸಂಖ್ಯಾತರಿಗೆ ರಕ್ಷಣೆ ಸ್ವಯಂ ಆಡಳಿತ ಒದಗಿಸುವ ಸಂವಿಧಾನ, ತಮಿಳು ಸಮಸ್ಯೆ ಪರಿಹರಿಸಲು ಪ್ರಮುಖ ಹೆಜ್ಜೆಯಾದೀತೇ ವಿನಹ, ಅದೇ ಸಮಸ್ಯೆ ಪರಿಹರಿಸೀತು ಎನ್ನುವುದು ತೀರಾ ಭ್ರಮೆ ಎಂದು ಹಲವಾರು ಟೀಕಾಕಾರರು ಅಭಿಪ್ರಾಯಪಟ್ಟಿದ್ದಾರೆ. ಆದರೆ ಈ ಸಂವಿಧಾನದ ಬಗ್ಗೆ ಚಂದ್ರಿಕಾ ಸರ್ಕಾರ ಕೈಗೊಂಡ ಬಲವಾದ ಪ್ರಚಾರ ಸಮಸ್ಯೆ ಪರಿಹಾರಕ್ಕೆ ತಕ್ಕ ಪರಿಸರ ನಿರ್ಮಿಸಬಹುದು ಎಂದು ಆಶಾಭಾವನೆ ಹೊತ್ತವರು ಇದ್ದಾರೆ.

ಶ್ರೀಲಂಕಾದ ಮೊದಲ ಸಂವಿಧಾನ ಅಲ್ಪಸಂಖ್ಯಾತರಿಗೆ ಇಂತಹ ರಕ್ಷಣೆ ನೀಡಿತ್ತು. 1972 ರಲ್ಲಿ ಬದಲಾಯಿಸಲಾದ ಸಂವಿಧಾನ ಅತ್ಯಂತ ಕೇಂದ್ರೀಕೃತ ಹಾಗೂ ಬೌದ್ಧ ಧರ್ಮವನ್ನು ಅಧಿಕೃತ ಧರ್ಮವಾಗಿ ಅಂಗೀಕರಿಸಿತ್ತು. ಎಲ್ಲಾ ಜನಾಂಗೀಯ ಸಮಸ್ಯೆಗಳು ಆರಂಭವಾಗಿದ್ದು(ತಮಿಳು ಸಮಸ್ಯೆ ಸೇರಿದಂತೆ) ಆಮೇಲೆ ಎಂದು ಕೆಲವು ಟೀಕಾಕಾರರ ಅಭಿಪ್ರಾಯ.

ಲೋಕಸಂಚಾರ

ಶರತ್ ಚಂದ್ರ

ಡಯಾನಾ ಕೊಂದವರು ಯಾರು?

ಡಯಾನಾ ಸತ್ತಿದ್ದು ಕಾರು ಅಪಘಾತದಲ್ಲಿ ಅಲ್ಲವೇ ಎಂದು ನೀವು ಕೇಳಬಹುದು. ಇರಬಹುದು. ಆದರೆ, ಈಗಾಗಲೇ ಡಯಾನಾ ಕಾರು ಅಪಘಾತಕ್ಕೆ ಕಾರಣರಾದವರೆಂದು, ಆಕೆಯ ಖಾಸಗೀ ಬದುಕಿನ ಕ್ಷಣಗಳನ್ನು ಫೋಟೋ ಹಿಡಿದು ಪೇಪರುಗಳಿಗೆ ಮಾರಿ ಕೋಟ್ಯಾಧೀಶರಾಗ ಹೊರಟ ಏಳು ಜನ ಫೋಟೋಗ್ರಾಫರ್ ಗಳ ಮೇಲೆ ಕೊಲೆ ಪ್ರಯತ್ನದ ಮೊಕದ್ದಮೆಯನ್ನು ಪ್ಯಾರಿಸ್ಸಿನ ಪೋಲೀಸರು ಹೂಡಿದ್ದಾರೆ.

ಡಯಾನಾ ಸೋದರ ಡಯಾನಾಳನ್ನು ಕೊಂದಿದ್ದು ಬ್ರಿಟಿಷ್ ಪತ್ರಿಕೆಗಳು ಎಂದಿದ್ದಾರೆ. ಡಯಾನಾಳ ಖಾಸಗೀ ಬದುಕಿನ ಚಿತ್ರಗಳನ್ನು ಸಾವಿರಾರು ಪೌಂಡು ಗಳಿಗೆ ಖರೀದಿಸಿದ ಪ್ರತಿ ಪತ್ರಿಕೆ ಸಂಪಾದಕ, ಮಾಲಿಕನ ಕೈ ಡಯಾನಾಳ ರಕ್ತದಿಂದ ತೊಯ್ದಿದೆ ಎಂದು ಮಾರ್ಮಿಕವಾಗಿ ಹೇಳಿದ್ದಾರೆ.

ಡಯಾನಾಳ (ಹೆಚ್ಚಾಗಿ ದಾರುಣಮಯವಾಗಿದ್ದ) ಖಾಸಗೀ ಬದುಕಿನ ಒಳಗೆ ಮೂಗು ತೂರಿಸಿ, ಫೋಟೋಗಳನ್ನು ತೆಗೆದು ಅಚ್ಚು ಹಾಕಿ, ಆಕೆಯ ಪ್ರೇಮ ಸಲ್ಲಾಪಗಳ ಬಗ್ಗೆ (ಸತ್ಯವೋ ಸುಳ್ಳೋ) ರಸವತ್ತಾಗಿ ಬರೆದು, ತಮ್ಮ ಪ್ರಸಾರ ಹೆಚ್ಚಿಸಿಕೊಳ್ಳುವುದು ಕಳೆದ ಕೆಲವು ವರ್ಷಗಳಿಂದ ಬ್ರಿಟಿಷ್ ಪತ್ರಿಕೆಗಳ ನೀತಿಯೇ ಆಗಿ ಬಿಟ್ಟಿತ್ತು. ಈಗಾಗಲೇ ಪ್ರಚಾರ ಹೆಚ್ಚಿಸಲು ಪತ್ರಿಕೆಯ ಗುಣಮಟ್ಟವನ್ನು ಪಾತಾಳಕ್ಕೆ ಇಳಿಸಿದ್ದ ಈ ಪತ್ರಿಕೆಗಳಿಗೆ ಇದೇನು ವಿಶೇಷ ಅನ್ನಿಸಲಿಲ್ಲ.

ಆದರೆ ಪ್ರಜಾಪ್ರಭುತ್ವ, ವ್ಯಕ್ತಿ ಸ್ವಾತಂತ್ರ್ಯದ ತವರೂರು ಎನ್ನುವ ಬ್ರಿಟನ್ನಿಗೆ ಇದರ ಮೇಲ್ನೆ ಕಡಿವಾಣ ಹಾಕಲಾಗದೆ ಹೋಯಿತೇ? ಇಂತಹ ಅಸಹ್ಯ, ಅಸಭ್ಯತನವನ್ನು ಪತ್ರಿಕಾ ನೀತಿಯ ಮಟ್ಟಕೇರಿಸಿರುವ ಪತ್ರಿಕೆಗಳ ವಿರುದ್ಧ ಒಂದು ಸಮಾಜ ಏನು ಮಾಡಲು ಸಾಧ್ಯವಿಲ್ಲವೇ ಅಥವಾ ಮಾಡಲು ಇಷ್ಟವಿಲ್ಲವೇ?

ಅಥವಾ ಜನರ ಗಮನ ಬೇರೆಡೆ ಎಳೆಯಲು, ಪತ್ರಿಕೆಗಳನ್ನು ರಾಜಕೀಯ ಮುಕ್ತಮಾಡಲು ಇಂತಹ ಅಸಹ್ಯ ಕಮರ್ಶಿಯಲ್ ನೀತಿಯೇ?

ಏನೇನ ಪ್ರಚಾರಣ ದುಡ್ಡುಮಾಡುವ ಮತ್ತು ಸುದ್ದಿ ಮಾಧ್ಯಮಗಳನ್ನು ಕಮರ್ಶಿಯಲ್ ಗೊಳಿಸಿ ಜನರನ್ನು ಅಜ್ಞಾನದ ಗುಂಗಿನಲ್ಲಿಡುವ ಬೂರ್ಜ್ವಾ ವರ್ಗದ ನೀತಿಗೆ ಡಯಾನಾ ಬಲಿ ಪಶುವೇ?

ಮನೆ ನೆಲಸಮ ವಿರುದ್ಧ ಮುಂದುವರಿದ ಹೋರಾಟ ಹೈಕೋರ್ಟ್‌ನ ತಡೆಯಾಜ್ಞೆ

ಬೆಂಗಳೂರು ದಕ್ಷಿಣ ತಾಲ್ಲೂಕಿನ ಉತ್ತರ ಹಳ್ಳಿಯ ಪಂಚಾಯತಿಗೆ ಸೇರಿದ ಸರಕಾರಿ ಜಮೀನಿನಲ್ಲಿ ಹಕ್ಕು ಪತ್ರಗಳನ್ನು ಪಡೆದ, ಖಾತೆ, ಕೆ.ಇ.ಬಿ. ಕನೆಕ್ಷನ್‌ಗಳನ್ನು ಪಡೆದ 162 ಮನೆಗಳನ್ನು ಧ್ವಂಸ ಮಾಡಿದ ಬೆಂಗಳೂರು ಅಬಿವೃದ್ಧಿ ಪ್ರಾಧಿಕಾರ, ಟಾಸ್ಕ್ ಫೋರ್ಸ್ ಹಾಗೂ ಪೋಲೀಸ್ ಅಧಿಕಾರಿಗಳ ಕ್ರಮದ ವಿರುದ್ಧ ಹೋರಾಟ ಇನ್ನೂ ಮುಂದುವರಿಯುತ್ತಿದೆ. ಮುಖ್ಯಮಂತ್ರಿಗಳ ಭರವಸೆ, ಕಂದಾಯ ಮಂತ್ರಿಗಳ ಆಶ್ವಾಸನೆಗಳ ನಂತರವೂ ಒಂದು ತಿಂಗಳಾದರೂ ಅನ್ಯಾಯದ ಕ್ರಮಗಳ ವಿರುದ್ಧ ಸರಕಾರ ಏನೂ ಮಾಡದ್ದರಿಂದ ಕುಪಿತರಾದ ಸಂತ್ರಸ್ತರು ಹೋರಾಟವನ್ನು ತೀವ್ರಗೊಳಿಸಿದ್ದಾರೆ. ಪಕ್ಕದ ಸಿರಿವಂತ ವ್ಯಕ್ತಿಯೊಬ್ಬರ ಪ್ರಭಾವಕ್ಕೊಳಗಾದ ಅಧಿಕಾರಿಗಳಿಂದಾಗಿ ಆಗುತ್ತಿರುವ ಅನ್ಯಾಯಗಳು, ಅವನ್ನು ಸರಿಪಡಿಸುವಲ್ಲಿ ಆಗುತ್ತಿರುವ ಅನಗತ್ಯ ವಿಳಂಬವನ್ನು [illegible], ಹೋರಾಡಲು ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ದಲಿತ ಸಂಘರ್ಷ ಸಮಿತಿಯ ಬೆಂಗಳೂರು ಜಿಲ್ಲಾ ಸಮಿತಿಗಳು ಜಂಟಿಯಾಗಿ 25 ಜನರ ಹೋರಾಟ ಸಮಿತಿಯನ್ನು ರಚಿಸಿಕೊಂಡಿದೆ. ರೈತ ಸಂಘದ ವೆಂಕಟಾಚಲಯ್ಯ ಹಾಗೂ ದಸಂಸನ ಸಿದ್ಧಲಿಂಗಯ್ಯ ಇದರ ಸಂಚಾಲಕರು. ಈ ಹೋರಾಟ ಸಮಿತಿ ಸೆಪ್ಟೆಂಬರ್ 10 ರಂದು ಮುಖ್ಯಮಂತ್ರಿಗಳ ಮನೆಗೆ ಒಂದು ಬೃಹತ್ ರ್‍ಯಾಲಿಯನ್ನು ಸಂಘಟಿಸಿತ್ತು.

ಈ ನಡುವೆ ಕರ್ನಾಟಕ ಪ್ರಾಂತ ರೈತ ಸಂಘ ಸಾರ್ವಜನಿಕ ಹಿತಾಸಕ್ತಿ ಅಪೀಲನ್ನು ಹೈಕೋರ್ಟಿನಲ್ಲಿ ಹಾಕಿದ್ದು ನ್ಯಾಯಾಲಯ ತಡೆಯಾಜ್ಞೆ ನೀಡಿ ಸರಕಾರಕ್ಕೆ ನೋಟೀಸ್ ಜಾರಿ ಮಾಡಿದೆ.

ಬಿಡಿಎ ಮತ್ತಿತರ ಅಧಿಕಾರಿಗಳ ಹಠಾತ್ ಕ್ರಮದಿಂದಾಗಿ ನಿರಾಶ್ರಿತರಾದಂತಹ ಬಡ ಕುಟುಂಬಗಳ ನೆರವಿಗೆ ನಗರದ ಕಾರ್ಮಿಕರು, ನೌಕರರು ಮುಂದೆ ಬಂದಿದ್ದಾರೆ. ವಿಮಾ ಕಾರ್ಪೋರೇಷನ್ ನೌಕರರ ಸಂಘ ತನ್ನ ಸದಸ್ಯರಿಂದ ಬಟ್ಟೆ-ಬರೆ ಇತ್ಯಾದಿಗಳನ್ನು ಸಂಗ್ರಹಿಸಿ ಸಂತ್ರಸ್ತರಿಗೆ ನೀಡುವ ಮೂಲಕ ಅವರ ನ್ಯಾಯಬದ್ಧ ಹೋರಾಟಕ್ಕೆ ತನ್ನ ಬೆಂಬಲ ವ್ಯಕ್ತಪಡಿಸಿದೆ.

ಸ್ವಾತಂತ್ರ್ಯ ಸುವರ್ಣಮಹೋತ್ಸವ ಆಚರಣೆ

ಪುಟ 6ರಿಂದ

"ನಾವು ಕಾರ್ಮಿಕರು ದೇಶದ ಸಾರ್ವಭೌಮತ್ವ ಮತ್ತು ಜನರ ಐಕ್ಯತೆಗಾಗಿ ತನು, ಮನ, ಧನ ಅರ್ಪಿಸಲು ಪ್ರತಿಜ್ಞೆಕೈಗೊಳ್ಳುತ್ತವೆ" ಎಂಬುದಾಗಿ ಈ ಸಂದರ್ಭದಲ್ಲಿ ಪ್ರತಿಜ್ಞೆಕೈಗೊಂಡರು.

ನಂತರ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಸಿಐಟಿಯು ರಾಜ್ಯ ಸಹ ಕಾರ್ಯದರ್ಶಿ ಮೋಹನ ಕುಮಾರ್‌ರವರು ಸ್ವಾತಂತ್ರ್ಯ ಬಂದು 50 ವರ್ಷ ಕಳೆದರೂ ಸಹ ಕಾರ್ಮಿಕರಿಗೆ ಅದು ಇನ್ನೂ ಸರಿಯಾದ ರೀತಿಯಲ್ಲಿ ಸಂಬಳ ಸಿಕ್ಕಿಲ್ಲ ಎಂದರು.

ಸ್ವಾಗತವನ್ನು ಮೈಸೂರು ಜಿಲ್ಲಾ ಅಗರ ಬತ್ತಿ ಕಾರ್ಮಿಕರ ಸಂಘದ ಕಾರ್ಯದರ್ಶಿ ಹೆಚ್ ಎಸ್ ಜಗದೀಶ್ ಮಾಡಿದರು, ಎಪಿಪುಟ್ಟಣ್ಣ ವಂದಿಸಿದ ಸಭೆಯಲ್ಲಿ ಡಿವೈಎಫ್ಐ ನ ರವೀಂದ್ರ, ಹೋಟೆಲ್ ಯೂನಿಯನ್ನಿನ ನರಸಿಂಹರಾವ್, ಬಿಟಿಕೃಷ್ಣ ಲಿಂಗಪ್ಪ, ಅಗರ ಬತ್ತಿ ಕಾರ್ಮಿಕರ ಸಂಘದ ದಾಸಪ್ಪ, ಲಕ್ಷ್ಮಣ, ಮಂಗಳಮ್ಮ ಸೇರಿದಂತೆ ನೂರಾರು ಹೆಚ್ಚು ಕಾರ್ಮಿಕರು ಧ್ವಜಾರೋಹಣ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಸಿಪಿಐ(ಎಂ) ನಿಂದ ಧ್ವಜಾರೋಹಣ

ಶಿರಸಿ: ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಶಿರಸಿ ಶಾಖೆಯಿಂದ ಪಕ್ಷದ ಕಛೇರಿಯಲ್ಲಿ ಧ್ವಜಾರೋಹಣ ಕಾರ್ಯಕ್ರಮ ನಡೆಸಲಾಯಿತು. ಶಾಖೆಯ ಕಾರ್ಯದರ್ಶಿ ಪಿ.ಜಿ.ಮಶಾಲ್ದಿ ಧ್ವಜಾರೋಹಣ ಮಾಡಿದರು.

ಈ ಸಂದರ್ಭದಲ್ಲಿ ನೆರೆದ ಜನರನ್ನುದ್ದೇಶಿಸಿ ಮಾತನಾಡಿದ ಮಶಾಲ್ದಿಯವರು ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಾಣತೆತ್ತ ವೀರರನ್ನು ನೆನೆಸುತ್ತ, ದೇಶದ ಅಭಿವೃದ್ಧಿಗಾಗಿ ಭ್ರಷ್ಟಾಚಾರದ ವಿರುದ್ಧದ ಹೋರಾಟ ಅತಿ ಅವಶ್ಯಕವೆಂದು ವಿವರಿಸಿದರು. ಕೋಮುಸೌಹಾರ್ದತೆ ಪ್ರಗತಿಗೆ ಅವಶ್ಯವೆಂದರು. ಜಿಲ್ಲಾ ಸಮಿತಿಯ ಸದಸ್ಯರಾದ ಶಾಂತರಾಮನಾಯಕ, ಸಿ.ಆರ್.ಶಾನ್‌ಬಾಗ್ ಹಾಜರಿದ್ದರು. ಯುವರಾಜ ಕಂಬಾಳಿಮಠ ಕಾರ್ಯಕ್ರಮ ನಿರ್ವಹಣೆ ಮಾಡಿದರು.

ಬೀದರ್: ದೇಶದ ಸ್ವಾತಂತ್ರ್ಯ ಸುವರ್ಣ ಮಹೋತ್ಸವವನ್ನು ಬೀದರ್‌ನಲ್ಲಿ ಸಿಪಿಐ(ಎಂ) ಶಾಖೆಯು ವಿಜೃಂಭಣೆಯಿಂದ ಆಚರಿಸಿದರು. ರಾಷ್ಟ್ರಧ್ವಜದ ಜೊತೆಗೆ ಲಾಲ ಬಾವುಟವನ್ನು ಆಚರಿಸಲಾಯಿತು. ರಾತ್ರಿ 8 ಗಂಟೆಗೆ ಪಂಜಿನ ಮೆರವಣಿಗೆ ನಡೆಸಲಾಯಿತು. ಬೀದರ್‌ನಲ್ಲಿ ನಡೆದ ಸಮಾರಂಭಗಳಿಗಿಂತ ಇದು ಭಿನ್ನವಾಗಿ ಬೀದರ್ ಜನತೆಯ ಗಮನವನ್ನು ಸೆಳೆಯಿತು. ಈ ಕಾರ್ಯಕ್ರಮದಲ್ಲಿ ಕಾಂ|| ಸಂಗ್ರಾಮ, ಮನೋಹರ, ಮಹಾಬಿ ಸಂಗ್ರಾಮ್ ಬೋಗಲೆ ಮುಂತಾದವರು ಪಾಲ್ಗೊಂಡಿದ್ದರು.

ಜಾಲಹಳ್ಳಿ: ದೇವದುರ್ಗ ತಾಲ್ಲೂಕಿನ ಜಾಲಹಳ್ಳಿಯಲ್ಲಿಯೂ ಧ್ವಜಾರೋಹಣ ಮಾಡುವುದರ ಮುಖಾಂತರ ಪ್ರಾರಂಭಗೊಂಡ ಕಾರ್ಯಕ್ರಮದಲ್ಲಿ ಸೇವಾ ಸಹಕಾರ ಸಂಘದ ಅಧ್ಯಕ್ಷರು, ನಿರ್ದೇಶಕರುಗಳು ಭಾಗವಹಿಸಿ ಗ್ರಾಮದ ಉದ್ಧಾರಕ್ಕಾಗಿ ಹಲವು ಯೋಜನೆಗಳನ್ನು ರೂಪಿಸಲಾಯಿತು. ಕಾರ್ಯಕ್ರಮದಲ್ಲಿ ಶ್ಯಾಮಸುಂದರ ಮಹೇಂದ್ರ ಪಿ.ಗಿರಿಯಪ್ಪ, ಟಿಆರ್. ನಾಯಕ್, ಮುದ್ದಪ್ಪಬುದಿ ಮತ್ತು ಶಾಲಾ ಶಿಕ್ಷಕರುಗಳು, ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಸರಕಾರದ ಪೆನ್ಶನ್ ಯೋಜನೆಯ ವಿರುದ್ಧ ಬೃಹತ್ ಪ್ರತಿಭಟನೆ
ಡಿಸೆಂಬರ್ 17 ರಂದು ಅಖಿಲ ಭಾರತ ಮುಷ್ಕರ

ಸೆಪ್ಟೆಂಬರ್ 2 ರಂದು ದೇಶದ ಮೂಲೆ-ಮೂಲೆಗಳಿಂದ ಬಂದ ಸಾವಿರಾರು ಕಾರ್ಮಿಕರು ಸಂಸತ್ತಿನೆದುರು ಸರಕಾರದ ಪ್ರತಿಗಾಮಿ "ನೌಕರರ ಪೆನ್ಶನ್ ಯೋಜನೆ" ಯನ್ನು ಹೇರುತ್ತಿರುವುದರ ವಿರುದ್ಧ ತಮ್ಮ ತೀವ್ರ ಕ್ರೋಧವನ್ನು ವ್ಯಕ್ತಪಡಿಸಿದರು. ತಮ್ಮ ಪ್ರತಿರೋಧವನ್ನು ತೀವ್ರಗೊಳಿಸಿ ಡಿಸೆಂಬರ್ 17 ರಂದು ಅಖಿಲ ಭಾರತ ಮುಷ್ಕರ ನಡೆಸುವ ಎಚ್ಚರಿಕೆಯನ್ನೂ ಅವರು ಸರಕಾರಕ್ಕೆ ನೀಡಿದರು.

ಸಿಐಟಿಯು, ಯುಟಿಯುಸಿ, ಯುಟಿಯುಸಿ(ಲೆನಿನ್ ಸರಣಿ) ಮತ್ತು ಎಐಸಿಸಿಟಿಯು ಕರೆಯ ಮೇಲೆ ನಡೆದ ಈ ಭಾರೀ ಮತಪ್ರದರ್ಶನದ ನಂತರ ಈ ನಾಲ್ಕು ಕೇಂದ್ರ ಕಾರ್ಮಿಕ ಸಂಘಟನೆಗಳ ಮುಖಂಡರು 15 ಲಕ್ಷ ಕಾರ್ಮಿಕರು ಸಹಿ ಮಾಡಿದ ಒಂದು ಮನವಿಯನ್ನು ಲೋಕಸಭಾಧ್ಯಕ್ಷ ಸಂಗ್ಮಾರವರಿಗೆ ಸಲ್ಲಿಸಿದರು. ಕಳೆದ ಎರಡು ವರ್ಷಗಳ ಅನುಭವ ಈ ಯೋಜನೆಯಲ್ಲಿ ಅಡಗಿರುವ ಲೂಟಿಕೋರತನ ಎಷ್ಟು ಎಂಬುದನ್ನು ಸಾಬೀತುಪಡಿಸಿದೆ. ಆದ್ದರಿಂದ ಪ್ರಸ್ತುತ ಈ ಯೋಜನೆಯನ್ನು ಬೆಂಬಲಿಸುತ್ತಿರುವ ಸಂಘಟನೆಗಳೂ ತಮ್ಮ ತಪ್ಪನ್ನು ಅರಿತು ಈ ಯೋಜನೆಯನ್ನು ಬದಲಿಸಲು ಹಾಗೂ ಅದನ್ನು ನಿಜವಾಗಿಯೂ ಮೂರನೇ ನಿವೃತ್ತಿ ಸೌಲಭ್ಯವಾಗಿಸುವ ಹೋರಾಟದಲ್ಲಿ ಭಾಗವಹಿಸಬೇಕು ಎಂದು ರ್‍ಯಾಲಿ ಕರೆ ನೀಡಿತು.

ಕೋಟಿಗಟ್ಟಲೆ ರೂಪಾಯಿಗಳಷ್ಟು ಕಪ್ಪು ಹಣ ಹೊಂದಿರುವವರಿಗೆ "ಕೇವಲ 30% ತೆರಿಗೆ ಕೊಟ್ಟು 100% ಮನಶ್ಶಾಂತಿ ಪಡೆಯಿರಿ" ಎಂದು ಹೇಳುವ ಸರಕಾರ ಪೆನ್ಶನ್ ಯೋಜನೆಯಡಿ ಕಾರ್ಮಿಕರು ತಮ್ಮ 50% ಭವಿಷ್ಯನಿಧಿ ಹಣ ಕೊಟ್ಟು 100% ಲೂಟಿ ಅನುಭವಿಸಿರಿ ಎಂದು ಹೇಳುತ್ತದೆ ಎಂಬ ಉದ್ಗಾರ ಈ ರ್‍ಯಾಲಿಯಲ್ಲಿ ವ್ಯಕ್ತವಾಯಿತು.

ಈ ನಡುವೆ "ನೌಕರರ ಪೆನ್ಶನ್ ಯೋಜನೆ, 1995" ಕ್ಕೆ ಭಾರತ ಉಕ್ಕು ಕಾರ್ಮಿಕರ ಒಕ್ಕೂಟದ ಮನವಿಯ ಮೇರೆಗೆ ತಡೆಯಾಜ್ಞೆ ನೀಡಿದ್ದ ಕಲ್ಕತ್ತ ಹೈಕೋರ್ಟ್‌ನ ಆದೇಶವನ್ನು ಸುಪ್ರೀಕೋರ್ಟ್ ಎತ್ತಿ ಹಿಡಿದಿದೆ ಹಾಗೂ ವಿವಿಧ ಹೈಕೋರ್ಟ್‌ಗಳಲ್ಲಿ ಈ ಬಗ್ಗೆ ಇರುವ ಮೊಕದ್ದಮೆಗಳನ್ನೆಲ್ಲಾ ಸುಪ್ರೀಂ ಕೋರ್ಟ್‌ಗೆ ವರ್ಗಾಯಿಸಬೇಕು ಎಂದು ಅದು ಹೇಳಿದೆ. ಇದು ಸರಕಾರ ಅನುಭವಿಸಿರುವ ಒಂದು ತೀವ್ರ ಹಿನ್ನಡೆ.

ಅಣಕ — ಶರತ್‌ಚಂದ್ರ

ಎಚ್ಚರಿಕೆ ಪತ್ರ

ಐಕ್ಯರಂಗ ಕಛೇರಿಗೆ ಸ್ವಾತಂತ್ರ್ಯದಿನದ 50 ನೇ ವಾರ್ಷಿಕೋತ್ಸವದಂದು ಈ ಕೆಳಗಿನ ಪತ್ರ ಬಂದಿದೆ.

ಮಾನ್ಯ ಮುಖ್ಯಮಂತ್ರಿಗಳೇ!

ಸ್ವಾತಂತ್ರ್ಯದ ಹೊನ್ನಿನ ಹಬ್ಬದ ನೂರಾರು ಸಮಾರಂಭಗಳಲ್ಲಿ 'ಬಿಸಿ' ಆಗಿರುವ ನಿಮಗೆ ಹಾಗೂ ನಿಮ್ಮ ಸರ್ಕಾರಕ್ಕೆ, ಒಂದು ಸರ್ಕಾರಿ ಡಿಪಾರ್ಟಮೆಂಟಿನ ಲಾರಿ ಹಾಗೂ ಅದರ ಡ್ರೈವರ್ ಕಳೆದು ಹೋಗಿದ್ದಾರೆ ಎಂದು ಗೊತ್ತಿರಲಿಕ್ಕಿಲ್ಲ. ಅದಕ್ಕೆ ಈ ಪತ್ರ.

ನಿಮ್ಮ ಸರ್ಕಾರದ ಆಹಾರ ಮತ್ತು ನಾಗರೀಕ ಪೂರೈಕೆ ಡಿಪಾರ್ಟಮೆಂಟಿನ ರೇಷನ್ ತರುವ ಲಾರಿಯನ್ನು ಅಡ್ಡಗಟ್ಟಿ, ನಾನು ಲಾರಿ ಹಾಗೂ ಡ್ರೈವರನ್ನು ಒತ್ತೆಯಾಳನ್ನಾಗಿ ಇಟ್ಟುಕೊಂಡಿದ್ದೇನೆ.

ನನ್ನ ಈ ಕೆಳಗಿನ ಬೇಡಿಕೆಗಳನ್ನು ಮನ್ನಿಸಿದರೆ ಮಾತ್ರ ಲಾರಿ ಮತ್ತು ಡ್ರೈವರನ್ನು ಬಿಡುತ್ತೇನೆ ಎಂದು ಈ ಮೂಲಕ ನಿಮಗೆ ಎಚ್ಚರಿಸಬಯಸುತ್ತೇನೆ.

1. ರೇಷನ್‌ನಲ್ಲಿ ಕಡಿತ ಮಾಡಬಾರದು ಮತ್ತು ನಿಯಮಿತವಾಗಿ ರೇಷನ್ ಕೊಡಬೇಕು.
2. ನಾನು ಪಿಎಫ್‌ನಲ್ಲಿ, ಮೊಪೆಡ್‌ಗೆ, ಮನೆಗೆ, ಅದಕ್ಕೆ ಇದಕ್ಕೆ ಎಲ್ಲಾ ಕಡೆ ಕಂಡ ಕಂಡಲ್ಲಿ ಮಾಡಿದ ಸಾಲವನ್ನೆಲ್ಲಾ ಮನ್ನಾ ಮಾಡಬೇಕು.
3. ಬಸ್ಸು, ನೀರು, ವಿದ್ಯುತ್ ಬೆಲೆ ಏರಿಸಬಾರದು.
4. ನಾನು ಸರ್ಕಾರಿ ನೌಕರ. ನಾನು ರಿಟೈರ್ಡ್ ಆದ ನಂತರ ನನ್ನ ಹೆಂಡತಿಗೆ ನೌಕರಿ ಕೊಡಬೇಕು.
5. ನನ್ನ ಮಗನಿಗೆ ಮೆಡಿಕಲ್ ಸೀಟು ಕೊಡಬೇಕು.
6. ಮುಂದಿನ ಬಂಪರ್ ಲಾಟರಿಯ ಮೊದಲ ಬಹುಮಾನ ನನಗೆ ಬರಬೇಕು.
7. ನನ್ನ ಮೇಲೆ ಯಾವುದೇ ಕೇಸ್ ಹಾಕಬಾರದು.
8. ನನ್ನ ಮೇಲೆ ಒಂದು ಪಿಕ್ಚರ್ ಮಾಡಬೇಕು. ಅದರಲ್ಲಿ ನನ್ನ ಪಾತ್ರ ನಾನೇ ಮಾಡುತ್ತೇನೆ. ನನ್ನ ಹೆಂಡತಿಯ ಪಾತ್ರ ಮಾತ್ರ ಮಾಧುರಿ ದೀಕ್ಷಿತ್ ಮಾಡಬೇಕು.

ಇವೆಲ್ಲಾ ನನ್ನ ಒರಿಜಿನಲ್ ಐಡಿಯಾ, ಡಿಮಾಂಡು. ಇದನ್ನು ವೀರಪ್ಪನ್ ಅಥವಾ ಲಲ್ಲೂಜಿಯವರಿಂದ ಕಾಪಿ ಹೊಡೆದದ್ದು ಎಂದು ತಿಳಿದುಕೊಳ್ಳಬಾರದು.

ಲಾರಿ ಹಾಗೂ ಡ್ರೈವರನ್ನು ಪೋಲೀಸರನ್ನು ಬಳಸಿ ಹುಡುಕಲು ಪ್ರಯತ್ನಿಸಿದರೆ ಹುಷಾರ್! ಅದು ನಿಮ್ಮ ಕೈಯಲ್ಲಿ ಆಗಲಿಕ್ಕಿಲ್ಲ ಬಿಡಿ!

ನನ್ನ ಎಲ್ಲಾ ಬೇಡಿಕೆಗಳನ್ನು ಒಂದೇ ವಾರದೊಳಗೆ ಮನ್ನಿಸದಿದ್ದಲ್ಲಿ, ಲಾರಿಯಲ್ಲಿರುವ ಎಲ್ಲಾ ರೇಷನ್ನನ್ನೂ, ನಮ್ಮ ರೇಷನ್ ಅಂಗಡಿಯ ಎದುರು ಮುಫತ್ತಾಗಿ ಹಂಚುತ್ತೇನೆ. ಹಾಗೆಯೇ ಮುಂದಿನ ಎಲ್ಲಾ ಲಾರಿಗಳನ್ನು ಹಿಡಿದು ಹಾಕುವುದಾಗಿ ಎಚ್ಚರಿಸುತ್ತೇನೆ.

ಈ ಪತ್ರವನ್ನು ಹರಿದು ಬಿಸಾಕಿದರೆ ಎಂದು ಸಾರ್ವಜನಿಕ ಹಿತದೃಷ್ಟಿಯಿಂದ ಎಲ್ಲಾ ಪತ್ರಿಕೆಗಳಿಗೆ ಕಳುಹಿಸುತ್ತಿದ್ದೇನೆ.

ಇತಿ

ವೀರಣ್ಣ

ಕ್ಯೂಬಾ ರಾಜಧಾನಿ ಹವಾನಾದಲ್ಲಿ ಇತ್ತೀಚೆಗೆ ನಡೆದ ೧೪ನೇ ವಿಶ್ವ ವಿದ್ಯಾರ್ಥಿ-ಯುವಜನ ಉತ್ಸವದ ಬಗ್ಗೆ ಸುದ್ದಿಗಳನ್ನು ಈಗಾಗಲೇ 'ಐಕ್ಯರಂಗ'ದಲ್ಲಿ ಓದಿದ್ದೀರಿ. ಈ ಉತ್ಸವದಲ್ಲಿ ಸ್ವತಃ ಪಾಲುಗೊಂಡ ಕರ್ನಾಟಕದ ಪ್ರತಿನಿಧಿಯೊಬ್ಬರ ಅನುಭವ. ಸ್ಥಳಾಭಾವದಿಂದ ಈ ಉತ್ಸವದ ಬಗ್ಗೆ ವಿವರವಾದ ಲೇಖನವನ್ನು ಹಾಗೂ ಇತರ ಪ್ರತಿನಿಧಿಗಳ ಅನುಭವಗಳನ್ನು ಇಲ್ಲಿ ಪ್ರಕಟಿಸಲಾಗಿಲ್ಲ. ಮುಂದೆ ಪ್ರಯತ್ನ ಮಾಡಲಾಗುವುದು.

ಚೆ-ಕ್ಯಾಸ್ಟ್ರೋರ ನಾಡಿನಲ್ಲಿ ಯಶಸ್ವಿ ಯುವಜನೋತ್ಸವ

ಪ್ರಕಾಶ್.ಕೆ

ಬಂಡವಾಳಶಾಹಿಯ ಆಕ್ರಮಣವನ್ನು ಎದುರಿಸಬಲ್ಲ ಹಾಗೂ ಸಮಾಜದ ಪರಿವರ್ತನೆಗಾಗಿ ಪ್ರತಿ ಧಾಳಿ ನಡೆಸಬಲ್ಲ ಒಂದು ಅಂತರರಾಷ್ಟ್ರೀಯ ಯುವ ಚಳುವಳಿಯನ್ನು ಕಟ್ಟಲು ಮತ್ತು ನಮ್ಮ ಹಕ್ಕುಗಳ ಹಾಗೂ ಆಶೋತ್ತರಗಳ ರಕ್ಷಣೆಗಾಗಿನ ಹೋರಾಟದಲ್ಲಿ ಪ್ರಪಂಚದ ಯುವಜನರ-ವಿದ್ಯಾರ್ಥಿಗಳ ಐಕ್ಯತೆಯನ್ನು ಸಾಧಿಸುವ ಕರೆಯೊಂದಿಗೆ ಕ್ಯೂಬಾದ ಹವಾನದಲ್ಲಿ ಜುಲೈ ೨೮ ರಿಂದ ಆಗಸ್ಟ್ ೫ ರವರೆಗೆ ನಡೆದ ೧೪ನೇ ವಿಶ್ವ ವಿದ್ಯಾರ್ಥಿ ಯುವಜನ ಉತ್ಸವ ಅತ್ಯಂತ ಯಶಸ್ವಿಯಾಗಿ ಮುಕ್ತಾಯವಾಯಿತು.

೧೩೨ ದೇಶಗಳಿಂದ ಬಂದಿದ್ದ ೧೨,೩೩೫ ಪ್ರತಿನಿಧಿಗಳು 'ಸಾಮ್ರಾಜ್ಯಶಾಹಿ ವಿರೋಧಿ ಸೌಹಾರ್ದತೆ, ಶಾಂತಿ ಮತ್ತು ಸ್ನೇಹ' ದ ಸ್ಫೂರ್ತಿಯನ್ನು ಸಾರುವ ಉತ್ಸವದ ವಿವಿಧ ರಾಜಕೀಯ ಚರ್ಚೆಗಳು, ಸಭೆಗಳು ಮತ್ತು ಇತರೆ ಚಟುವಟಿಕೆಗಳಲ್ಲಿ ಭಾಗವಹಿಸಿದ್ದರು. ಭಾರತದಿಂದ ಒಟ್ಟಾರೆ ೧೮೭ ಪ್ರತಿನಿಧಿಗಳು ಭಾಗವಹಿಸಿದ್ದರು. ದೇಶದ ಹಲವಾರು ವಿದ್ಯಾರ್ಥಿ-ಯುವಜನ ಸಂಘಟನೆಗಳಿಂದ ಮತ್ತು ಹಲವು ರಾಜ್ಯ ಸರಕಾರಗಳಿಂದ ಪ್ರತಿನಿಧಿಗಳು ಭಾಗವಹಿಸಿದ್ದರು. ಕೇಂದ್ರ ಸರ್ಕಾರದ ಸರ್ವಪಕ್ಷಗಳ ತಂಡವೊಂದು ಭಾಗವಹಿಸಿತ್ತು. ಕರ್ನಾಟಕದ ಪ್ರತಿನಿಧಿಗಳಲ್ಲಿ ಎಸ್‌ಎಫ್‌ಐನಿಂದ ಪ್ರಕಾಶ್.ಕೆ, ಡಿವೈಎಫ್‌ಐನಿಂದ ಎಸ್.ವೈ.ಗುರುಶಾಂತ್ ಮತ್ತು ಪತ್ರಕರ್ತ ಜಿ.ಎನ್.ಮೋಹನ್‌ರವರು ಭಾಗವಹಿಸಿದ್ದರು. ಸಿಪಿಐನ ಸಂಘಟನೆಗಳಿಂದ ಸಿದ್ದನಗೌಡ ಪಾಟೀಲ್ ಮತ್ತು ಕಾರಂತ್‌ರವರು ಭಾಗವಹಿಸಿದ್ದರು. ಬೆಳಗಾಂನ ಸಂಸತ್ ಸದಸ್ಯರಾದ ಶಿವಾನಂದ ಕೌಜಲಗಿಯವರೂ ಸಹ ಬಂದಿದ್ದರು.

ಆರಂಭದಿಂದಲೇ ಸಾಮ್ರಾಜ್ಯಶಾಹಿಗೆ ಸವಾಲು

ಮೊದಲಿಗೆ ೫೦೦೦ ಪ್ರತಿನಿಧಿಗಳಿಂದು ತಯಾರಾಗಿದ್ದ ಉತ್ಸವಕ್ಕೆ ಪ್ರಪಂಚದ ಎಲ್ಲಾ ಕಡೆಗಳಿಂದಲೂ ಅತ್ಯುತ್ಸಾಹದ ಪ್ರತಿಕ್ರಿಯೆ ಬಂದು ಉದ್ದೇಶಿತ ಸಂಖ್ಯೆಗಿಂತ ಎರಡೂವರೆ ಪಟ್ಟು ಹೆಚ್ಚಿಗೆ ಬಂದಿದ್ದರು. ಪ್ರತಿನಿಧಿಗಳನ್ನು ಬರಲಾರದಂತೆ ಮಾಡಲು ಅಮೆರಿಕ ಮತ್ತು ಅದರ ಅದರ ಬಣಗಳು ಮಾಡಿದ ಪ್ರಯತ್ನಗಳು ಯಶಸ್ವಿಯಾಗಲಿಲ್ಲ. ಆದರೆ ಅಮೇರಿಕಾದಿಂದಲೇ ೯೪೬ ದಾಖಲೆ ಪ್ರತಿನಿಧಿಗಳು ಭಾಗವಹಿಸಿ ಸಾಮ್ರಾಜ್ಯಶಾಹಿಗೆ ಸವಾಲು ಹಾಕಿದರು.

ಜುಲೈ ೨೮ ರಂದು ಸೌಹಾರ್ದತಾ ರ್‍ಯಾಲಿಯು ನಡೆದು ನಮೀಬಿಯಾದ ಪ್ರತಿನಿಧಿಯೊಬ್ಬರಿಂದ ಸಾಂಕೇತಿಕವಾಗಿ ಉದ್ಘಾಟನೆಯಾಯಿತು. ಆಗಸ್ಟ್ ೫ ರಂದು ಅರಬ್ ಸಹಾರಾದ ಮಹಿಳಾ ಪ್ರತಿನಿಧಿಯೊಬ್ಬರು ಅಂತಿಮ ಘೋಷಣೆ ಓದುವುದರೊಂದಿಗೆ ಸಮಾರೋಪಗೊಂಡಿತು. ಕ್ಯೂಬಾದ ೧೪ ಪ್ರಾಂತಗಳಲ್ಲಿ ಉತ್ಸವವು ಜರುಗಿತು. ಆದರೆ ಬಹುತೇಕ ಕಾರ್ಯಕ್ರಮಗಳು ಹವಾನಾದಲ್ಲಿ ನಡೆದವು. ೧೩ ರಾಜಕೀಯ ಚರ್ಚಾ ಕೇಂದ್ರಗಳು, ೮ ಚರ್ಚಾ ಕೂಟಗಳು, ಸೌಹಾರ್ದತಾ ಸಭೆಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು, ವಿವಿಧ ಸ್ಥಳಗಳಿಗೆ ಭೇಟಿಗಳು, ಸಾಮ್ರಾಜ್ಯ ಶಾಹಿ ವಿರೋಧಿ ನ್ಯಾಯಾಲಯ ಹೀಗೆ ಹಲವು ರೀತಿಯ ಕಾರ್ಯಕ್ರಮಗಳಿದ್ದವು.

ಈ ಇಡೀ ಕಲಾಪಗಳಲ್ಲಿ ಪ್ರಸ್ತುತ ಮಾನವ ಜನಾಂಗದ ಪ್ರಗತಿಪರ ಯುವಜನರ ಸಮಾಗಮ ಆಗಿದ್ದುದನ್ನು ಕಾಣಬಹುದು. 'ಚೆ' ಜೊತೆಗೂಡಿ ಕ್ರಾಂತಿಗಾಗಿ ಹೋರಾಡಿದ ಸೇನಾನಿಗಳು, ಕ್ರಾಂತಿ ನಲ್ಲಿದ್ದು ನಂತರ ಕಮ್ಯುನಿಸ್ಟರಾದ 'ಫಿಲಿಪ್ ಆಗೀ'ಯಂತಹವರು, ಸಾಮ್ರಾಜ್ಯಶಾಹಿಯ ನೇರ ಪಿತೂರಿಗಳೆದುರು ಸಮರಧೀರ ಹೋರಾಟ ನಡೆಸುತ್ತಿರುವವರು, ಹೀಗೆ.. ರೋಮಾಂಚನವುಂಟುಮಾಡುವ ಜನರ ಸಮಾಗಮವಾಗಿ ಉತ್ಸವ ನಡೆಯಿತು.

ಅನುಭವಗಳ ವಿನಿಮಯ

'ಪ್ರಜಾಪ್ರಭುತ್ವ ಮತ್ತು ಭಾಗವಹಿಸುವಿಕೆ' 'ಮಾನವ ಹಕ್ಕುಗಳು ಮತ್ತು ಜನತೆಯ ಹಕ್ಕುಗಳು', 'ಆರೋಗ್ಯ', 'ಸಾಮ್ರಾಜ್ಯಶಾಹಿ ವಿರೋಧಿ ನ್ಯಾಯಾಲಯ' ಮುಂತಾದ ಚರ್ಚೆಗಳಲ್ಲಿ ನಮ್ಮ ಪ್ರತಿನಿಧಿಗಳು ಭಾಗವಹಿಸಿದ್ದರು. ಯುವ ಪತ್ರಕರ್ತರ ಕೂಟದಲ್ಲಿ ಜಿ.ಎನ್.ಮೋಹನ್‌ರವರು ಅಧ್ಯಕ್ಷೀಯ ಮಂಡಳಿಯಲ್ಲಿದ್ದರು. ಪ್ರತಿಯೊಂದು ಗೋಷ್ಠಿ ಮತ್ತು ಚರ್ಚೆಗಳಲ್ಲಿ ಪ್ರತಿನಿಧಿಗಳು ತಮ್ಮ ದೇಶಗಳ ಅನುಭವಗಳ ಹಿನ್ನೆಲೆಯಲ್ಲಿ ಮಾತನಾಡಿದರು. ಸಾಮ್ರಾಜ್ಯಶಾಹಿಯ ಜಾಗತಿಕ ಸ್ವರೂಪ ಮತ್ತು ಅದರ ಕಾರ್ಯತಂತ್ರದ ಬಗ್ಗೆ ಸಾಕಷ್ಟು ಅನುಭವ ಪ್ರತಿನಿಧಿಗಳಿಗೆ ದೊರೆತಿದೆ. ಕಲಾಪಗಳ ನಡುವೆ ಟರ್ಕಿ, ಯುಎಸ್‌ಎ. ಮೆಕ್ಸಿಕೋ, ಉತ್ತರ ಕೊರಿಯಾ, ರಷ್ಯಾ, ಕ್ಯೂಬಾ ಮತ್ತು ವೆನಿಜ್ಯುವೆಲಾ ದೇಶಗಳ ಪ್ರತಿನಿಧಿಗಳೊಡನೆ ಚರ್ಚೆ ಮಾಡಲಾಗಿದೆ.

ಎಲ್ಲ ಪ್ರತಿನಿಧಿಗಳಿಗೂ ಕ್ಯೂಬನ್ನರ ಮನೆಗಳಲ್ಲಿ ವಸತಿಯನ್ನು ಕಲ್ಪಿಸಲಾಗಿತ್ತು, ಉತ್ಸವ ಪರಂಪರೆಯಲ್ಲಿ ಇದೇ ಮೊದಲ ಬಾರಿಗೆ ಇಂತಹ ವ್ಯವಸ್ಥೆಯನ್ನು ಮಾಡಲಾಗಿತ್ತು. ಇದು ಕ್ಯೂಬನ್ನರ ಕೌಟುಂಬಿಕ ಮತ್ತು ಸಾಮಾಜಿಕ ಜೀವನವನ್ನು ತಿಳಿಯಲು ತುಂಬಾ ಸಹಾಯ ಮಾಡಿದೆ. ತಮ್ಮ ವ್ಯವಸ್ಥೆಯನ್ನು, ಕ್ಯಾಸ್ಟ್ರೋರನ್ನು ಮತ್ತು ಬಹಳ ಮುಖ್ಯವಾಗಿ 'ಚೆಗೆವಾರ'ನನ್ನು ಎಷ್ಟೊಂದು ಗಾಢವಾಗಿ ಪ್ರೀತಿಸುತ್ತಾರೆಂಬುದು ತಿಳಿಯಲು ಸಾಧ್ಯವಾಯ್ತು. 'ಚೆ' ಬಗ್ಗೆ ಇರುವ ಅಭಿಮಾನ ಪ್ರೀತಿಗೆ ಲೆಕ್ಕವೇ ಇಲ್ಲ. ಪ್ರತಿಯೊಬ್ಬ ಕ್ಯೂಬನ್ನರ, ಮಾತ್ರವಲ್ಲ ಇಡೀ ಲ್ಯಾಟಿನ್ ಅಮೆರಿಕಾದ ಜನರಿಗೆ 'ಚೆ' ಒಂದು ಚೈತನ್ಯವೆಂದರೆ ಅತಿಶಯೋಕ್ತಿಯಲ್ಲ.

ನಮ್ಮ ಪ್ರತಿನಿಧಿಗಳು ಕಲಾಪಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದರ ಜೊತೆಗೆ ಹವಾನಾ ಮತ್ತು ಹೊರಗಿನ ಹಲವು ಪ್ರದೇಶಗಳನ್ನು ಸಂದರ್ಶಿಸಿದರು. ವಿವಿಧ ವಿಭಾಗಗಳ ಜನರ ಜೊತೆ ಸಂದರ್ಶನ ಚರ್ಚೆಗಳನ್ನು ನಡೆಸಲಾಯಿತು. ಮ್ಯೂಸಿಯಂ, ಶಾಲೆ-ಕಾಲೇಜುಗಳು, ಆಸ್ಪತ್ರೆ, ಮಾಧ್ಯಮ ಕೇಂದ್ರಗಳು, ಮಾರುಕಟ್ಟೆ, ಹಳೆ ಹವಾನಾ, `Expocuba' ಮುಂತಾದ ಸ್ಥಳಗಳನ್ನು ವೀಕ್ಷಿಸಿದರು.

ಸಂಕಟಗಳ ನಡುವೆ ಗಣನೀಯ ಸಾಧನೆ

೧೯೫೯ ರಲ್ಲಿ ಕ್ರಾಂತಿಯಾದ ನಂತರ ಕ್ಯೂಬಾ ಸಾಕಷ್ಟು ಪ್ರಗತಿ ಹೊಂದಿರುವುದು ಸ್ಪಷ್ಟವಾಗಿ ಕಾಣುತ್ತದೆ. ಆದರೆ ಅಂದಿನಿಂದಲೂ ಅಮೆರಿಕಾ ಕ್ಯೂಬಾದ ಕ್ರಾಂತಿಯನ್ನು ಹಾಳು ಮಾಡಲು ಎಡಬಿಡದೆ ಪ್ರಯತ್ನಿಸುತ್ತಿದೆ. ತಮ್ಮ ಕ್ರಾಂತಿಯನ್ನು ರಕ್ಷಿಸಿಕೊಳ್ಳಲು ಸಿಡಿಆರ್ ಗಳನ್ನು (Committees for Defending the Revolution) ರಚಿಸಲಾಗಿದೆ. ಇವು ಜನರ ನಡುವಿರುವ ವ್ಯಾಪಕ ಹಂದರವಾಗಿದೆ. ಶೇ ೮೪ ರಷ್ಟು ಕ್ಯೂಬನ್ ಜನತೆ ಇದರ ಸದಸ್ಯರಾಗಿದ್ದಾರೆ. ಸೋವಿಯತ್ ಯೂನಿಯನ್ ಮತ್ತು ಪೂರ್ವ ಯುರೋಪ್ ದೇಶಗಳ ಪತನಾನಂತರ ಕ್ಯೂಬಾ ಆರ್ಥಿಕ ಸಂಕಷ್ಟಕ್ಕೆ ಸಿಕ್ಕಿಕೊಂಡಿದೆ. ಇದರಿಂದ ಹೊರಬರಲು 'ವಿಶೇಷ ಅವಧಿ'(Special Period) ಯನ್ನು ಘೋಷಿಸಿಕೊಂಡಿದ್ದಾರೆ. ಗಣನೀಯವಾದ ಸಾಧನೆಯೂ ಆಗಿದೆ.

ಏನೆಲ್ಲ ಸಂಕಷ್ಟಗಳಿದ್ದಾಗಲೂ ಸಾಮ್ರಾಜ್ಯಶಾಹಿಯ ವಿರುದ್ಧ ತನ್ನ ಚಳುವಳಿಯನ್ನು ಕ್ಯೂಬಾ ನಡೆಸುತ್ತಲೇ ಇದೆ. ಈ ಬೃಹತ್ ಉತ್ಸವವನ್ನು ನಡೆಸಿರುವುದೂ ಕೂಡ ಈ ಹಿನ್ನೆಲೆಯಲ್ಲೇ. ಸಾಮ್ರಾಜ್ಯಶಾಹಿಯ ಮೂಗಿನಡಿಯಲ್ಲೇ ಬದುಕುತ್ತಿರುವ ಕ್ಯೂಬದ್ದು ಸವಾಲಿನ ಜೀವನ. ಈ ಉತ್ಸವವನ್ನು ವಿಫಲಗೊಳಿಸಲು ಅಮೇರಿಕಾ ಮಾಡಿದ ಪ್ರಯತ್ನಗಳಿಗೆ ಲೆಕ್ಕವಿಲ್ಲ. ಉತ್ಸವಕ್ಕೆ ಮುಂಚೆ ಪ್ರವಾಸಿ ಹೋಟೆಲ್‌ನಲ್ಲಿ ಬಾಂಬ್ ಸ್ಫೋಟ, ವಿಮಾನ ಸಮುದ್ರಕ್ಕೆ ಉರುಳಿದ್ದು, ರೋಗ ಹರಡುವ ಸಾಂಕ್ರಾಮಿಕ ವೈರಸ್‌ಗಳನ್ನು ಬಿಟ್ಟದ್ದು ಮುಂತಾದವುಗಳನ್ನು ಕ್ಯೂಬನ್ ಜನತೆ ಎದುರಿಸಿದ್ದಾರೆ ಮತ್ತು ಎಂದಿಗೂ ಎದುರಿಸುವ ವಿಶ್ವಾಸ ಕ್ಯೂಬನ್ ಜನರಿಗಿದೆ. ಈ ನಿಟ್ಟಿನಲ್ಲಿ ಇಡೀ ವಿಶ್ವದ ಬೆಂಬಲದ ಅಗತ್ಯ ಕ್ಯೂಬಕ್ಕಿದೆ.

ಹಿಂದಿನ ಉತ್ಸವಗಳಿಗಿಂತ ಬಹಳ ಭಿನ್ನವಾದ ಸನ್ನಿವೇಶದಲ್ಲಿ ೧೪ ನೇ ಉತ್ಸವ ಜರುಗಿದೆ. ಸೋವಿಯತ್ ಯೂನಿಯನ್ ಮತ್ತು ಇತರೆ ಸಮಾಜವಾದಿ ದೇಶಗಳ ಪತನ, ಏಕಧ್ರುವವಿಶ್ವ ವ್ಯವಸ್ಥೆಯನ್ನು ಹೇರ ಬಯಸುತ್ತಿರುವ ಸಾಮ್ರಾಜ್ಯಶಾಹಿಗಳ ಪ್ರಯತ್ನಗಳು, ಮಾನವತೆಗೆ ಅಪಾರ ಸಂಕಷ್ಟವನ್ನು ತಂದಿರುವ ನವಉದಾರ ನೀತಿಗಳು, ಹೆಚ್ಚಿರುವ ದಬ್ಬಾಳಿಕೆ ಮತ್ತು ಸುಲಿಗೆ, ನಿರುದ್ಯೋಗ, ಅನಕ್ಷರತೆ, ಶಿಕ್ಷಣ ಮಟ್ಟದಲ್ಲಿ ಕುಸಿತ, ಬಡತನ, ಶ್ರೀಮಂತ-ಬಡವರ ನಡುವೆ ಹೆಚ್ಚಿರುವ ಅಂತರ ಮುಂತಾದ ಭೀಕರತೆಗಳ ಸಂದರ್ಭದಲ್ಲಿ ಉತ್ಸವವನ್ನು ನಡೆಸುವ ಸವಾಲನ್ನು ಸ್ವೀಕರಿಸಿದ ಕ್ಯೂಬಾದ ಪ್ರಯತ್ನವನ್ನು ಎಲ್ಲರೂ ಪ್ರಶಂಸಿಸಲೇ ಬೇಕು.

ಉತ್ಸವದ ಅಂತಿಮ ಘೋಷಣೆಯು ಇದೇ ಆಶಯವನ್ನು ಹೊತ್ತು ಜನತೆ ಮತ್ತು ಸರಕಾರದ ಪ್ರಯತ್ನ - ಸಹಕಾರಗಳಿಗೆ ಬೆಂಬಲ ವ್ಯಕ್ತಪಡಿಸಿತು ಮತ್ತು ಕ್ಯೂಬಾದ ವಿರುದ್ಧ ಸಾಮ್ರಾಜ್ಯಶಾಹಿ ಅಮೇರಿಕಾದ ಆರ್ಥಿಕ ದಿಗ್ಬಂಧನವನ್ನು ಹಿಂತೆಗೆಯಲು ಒತ್ತಾಯಿಸಿತು.


ಅಂತಿಮವಾಗಿ ಅತ್ಯಂತ ಪ್ರೀತಿ-ವಿಶ್ವಾಸದಿಂದ ಪ್ರತಿನಿಧಿಗಳನ್ನು ನೋಡಿಕೊಂಡ ಜನತೆಯ ಆದರ-ಅಭಿಮಾನಗಳನ್ನು ನೆನೆಯುತ್ತಲೇ ನಾವು ಚೆ-ಕ್ಯಾಸ್ಟ್ರೋರ ನಾಡಿನಿಂದ ಭಾರತಕ್ಕೆ ವಾಪಸಾದೆವು.

ಉತ್ಸವಕ್ಕೆ ಹೋಗುವ ಮಾರ್ಗದಲ್ಲಿ ಪ್ರಕಾಶ್ ಎರಡು ದಿನಗಳ ಕಾಲ ಮಾಸ್ಕೋದಲ್ಲಿ ತಂಗಿದ್ದರೆ, ಗುರುಶಾಂತ್ ಮತ್ತು ಮೋಹನ್‌ರವರು ಲಂಡನ್‌ನಲ್ಲಿ ಕೆಲವು ದಿನಗಳು ತಂಗಿದ್ದರು. ○



ಯುವ ಜನೋತ್ಸವ ಆರಂಭದ ಒಂದು ದೃಶ್ಯ

ಕ್ಯೂಬಾ ಯುವಜನೋತ್ಸವದಲಿ ಗುರುಶಾಂತ್, ಪ್ರಕಾಶ್ ಮತ್ತು ಜಿ.ಎನ್.ಮೋಹನ್



KRNM/BGS-405 MAG(2) PRBDECR 319-79/79.

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ. ರಾಮಚಂದ್ರರಾವ್
ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 2236462, ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯ ರಸ್ತೆ ಗಾಂಧಿನಗರ, ಬೆಂಗಳೂರು-9 ಮುದ್ರಣ: ಕಾನಿ ಪ್ರಿಂಟರ್ಸ್, ಕ್ವೀನ್ಸ್ ರಸ್ತೆ ಬೆಂಗಳೂರು